ರಂಜನೆ ಬೋಧನೆ ಪ್ರಚೋದನೆ

ಗೌರಿ ಲಂಕೇಶ್

20 ಆಗಸ್ಟ್ 2014 ಪುಟ 20 ರೂ. 15/-

ಭೈರಪ್ಪನ




ಯಾತನಾಮಯ ಯಾನ

ಒಂದು ಲವ್ ಸ್ಟೋರಿ



ಅಣ್ಣಾವ್ರ ಮೊಮ್ಮಗಳು ಈಗ ಗೌಡರ ಸೊಸೆ

ಚಿತ್ರದುರ್ಗ ಕಾಡಿಗೆ ದುಗ್ಗಪ್ಪನೇ ಕಂಟಕ





ಮಂಡ್ಯ ಅಂಬಿ ನರೇಂದ್ರ ಜಟಾಪಟಿ

KPSC ಗೆದ್ದು ಸೋತ ಸರ್ಕಾರ







ಕರಾವಳಿ ತಿಮರೋಡಿ ಪುಂಡ ಪುರಾಣಂ

ನಿರೀಕ್ಷೆ ಹೆಚ್ಚಿಸಿದ ವಿಕಾಸ್‌ಗೌಡ



ಇಬ್ರಾಹಿಂ ಸಾಹೇಬರು ಇನ್ನು ನೆನಪಷ್ಟೇ





ಡಾಕ್ಟರ್ ಕುಲಕ್ಕೆ ಒಂದು ಬಹಿರಂಗ ಪತ್ರ

ವೈದ್ಯ ಕುಲದ ಸಂಗಾತಿಗಳೇ,

ಧರಣಿ ಮಂಡಲ ಮಧ್ಯದಲ್ಲಿರುವ ಕರ್ನಾಟಕ ರಾಜ್ಯದಲ್ಲಿ 30 ಜಿಲ್ಲೆಗಳಿರುವ ಸಂಗತಿ ನಿಮಗೆ ಗೊತ್ತೇ ಇದೆ. ಈ 30 ಜಿಲ್ಲೆಗಳ ಕುರಿತು ಯಾವುದೇ ಸಮೀಕ್ಷೆ, ಅಧ್ಯಯನ ಇಲ್ಲದೇ ಹೇಳಬಹುದಾದ ಒಂದು ಸಂಗತಿ ಇದೆ: ಪ್ರತಿನಿತ್ಯ ಈ 30 ಜಿಲ್ಲೆಗಳಲ್ಲಿ ಕನಿಷ್ಠ ಎರಡು ಸರ್ಕಾರೀ ಆಸ್ಪತ್ರೆಗಳಲ್ಲಿ ವೈದ್ಯರ ನಿರ್ಲಕ್ಷ್ಯದ ಕುರಿತು ಪ್ರತಿಭಟನೆ ನಡೆಯುತ್ತಿರುತ್ತದೆ. ಕನಿಷ್ಠ 2 ಖಾಸಗೀ ಆಸ್ಪತ್ರೆಗಳ ಮುಂದೆ ಹೆಚ್ಚು ಹಣ ಪಡೆದೂ ಸರಿಯಾದ ಚಿಕಿತ್ಸೆ ನೀಡಿಲ್ಲ ಎಂದು ಕೂಗಾಟ, ಗದ್ದಲ ನಡೆಯುತ್ತಿರುತ್ತದೆ. ವಾರದಲ್ಲಿ ಕನಿಷ್ಠ ಒಂದು ಆಸ್ಪತ್ರೆ ಮುಂದೆ ಶವವನ್ನಿಟ್ಟು ಹೋರಾಟ ನಡೆಯುತ್ತಿರುತ್ತದೆ. ಈ ಪ್ರತಿಭಟನೆ, ಕೂಗಾಟ, ಹೋರಾಟಗಳ ಟಾರ್ಗೆಟ್ ವೈದ್ಯರುಗಳಾಗಿರುತ್ತಾರೆ. ಎದುರಿಗೆ ಸಿಕ್ಕರೆ ಬಡಿದು, ಸರ್ಜರಿ ಮಾಡಿಬಿಡುತ್ತೇವೆನ್ನುವಂತೆ ಪ್ರತಿಭಟನಾಕಾರರು ಅಬ್ಬರಿಸುತ್ತಿರುತ್ತಾರೆ.

ಈ ಡಾಕ್ಟರನೆಂಬ ನರಾಧಮನು ಆ ಹೊತ್ತು ಪ್ರಪಂಚದಲ್ಲಿ ಲಭ್ಯನಿರುವ ಅತ್ಯಂತ ಅಮಾನವೀಯ ವ್ಯಕ್ತಿಯಂತೆ ಬಿಂಬಿಸಲ್ಪಡುತ್ತಿರುತ್ತಾನೆ. ಸದರಿ ರೋಗಿಯು ಆಸ್ಪತ್ರೆಗೆ ಹೊಕ್ಕ ಕ್ಷಣದಿಂದ, ಪ್ರಾಣ ಕಳೆದುಕೊಂಡ ಕಡೆಯ ಘಳಿಗೆಯವರೆಗೆ ಡಾಕ್ಟರರ ಪ್ರತಿಯೊಂದು ನಡೆಯೂ ಹೇಗೆ ಸಂಶಯಾಸ್ಪದವಾಗಿತ್ತೆಂಬುದನ್ನು ಆ ಜನರು, ಆಸ್ಪತ್ರೆಯ ಗೇಟಿನ ಹೊರಗೆ ನೆರೆದವರಿಗೆ ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಿರುತ್ತಾರೆ. ಆಸ್ಪತ್ರೆಯ ಗೇಟಿನೊಳಗಡೆ ಮತ್ತು ಕಟ್ಟಡದ ಕಿಟಕಿಗಳ ಈ ಕಡೆಯಿಂದ ನೋಡುತ್ತಿರುವ ಆಸ್ಪತ್ರೆಯ ಸಿಬ್ಬಂದಿ ಮಾತ್ರ ಬೇರೊಂದು ರೀತಿಯಲ್ಲಿ ಯೋಚಿಸುತ್ತಿರುತ್ತಾರೆ. ಅವರ ಪ್ರಕಾರ ರೋಗಿಯ ಕಡೆಯವರು ಆಸ್ಪತ್ರೆಯಲ್ಲಿದ್ದಷ್ಟೂ ಕಾಲ ಬೇರೆಯದೇ ರೀತಿ ನಡೆದುಕೊಂಡಿದ್ದರಲ್ಲಾ? ವೈದ್ಯರ, ದಾದಿಯರ ಮೇಲೆ ಅಂತಹ ಯಾವ ಸಂಶಯವನ್ನೂ ಅವರು ತೋರ್ಪಡಿಸಿರಲಿಲ್ಲ; ಬದಲಿಗೆ ಬಹಳ ಸ್ನೇಹಯುತವಾಗಿದ್ದರು. ಈಗ ನೋಡಿದರೆ ವಿರುದ್ಧ ರೀತಿಯಲ್ಲಿ ಮಾತನಾಡುತ್ತಿದ್ದಾರೆ, ಇದು ಬೇಕೆಂತಲೇ ತಮ್ಮ ಆಸ್ಪತ್ರೆ ವಿರುದ್ಧ ನಡೆಸುತ್ತಿರುವ ಸಂಚು ಎಂದೆಲ್ಲಾ ಅವರ ಮನೋಲಹರಿ ಹರಿದಿರುತ್ತದೆ.

ಕೊನೆಯಲ್ಲಿ ಏನೂ ಆಗುವುದಿಲ್ಲ ಬಿಡಿ. ಹೊರಗಡೆ ಕೂತವರು ಎದ್ದು ಹೋಗುತ್ತಾರೆ. ಎಷ್ಟು ಹೊತ್ತು ಅಂತ ಕುಂತಿರಲಾಗುತ್ತದೆ? ಅವರಿಗೂ ಸಾಕಾಗುತ್ತದೆ. ಪೊಲೀಸರೂ ಬಂದು ನಿಮ್ಮ ಪರವಾಗಿ ನಿಲ್ಲುತ್ತಾರೆ. ವೈದ್ಯರಿಗೂ ಸತ್ತ ರೋಗಿಯ ಕಡೆಯವರಿಗೂ ನಡುವೆ 'ವ್ಯವಹಾರ' ಕುದುರಿಸಲು ಮಧ್ಯವರ್ತಿಗಳು ಯಾವಾಗಲೂ ಇದ್ದೇ ಇರುತ್ತಾರೆ. ನಿಮ್ಮ ಶಕ್ತಿಗೆ ಅನುಗುಣವಾಗಿ ಮತ್ತು ಪರಿಸ್ಥಿತಿಯ ಗಾಂಭೀರ್ಯತೆಗನುಗುಣವಾಗಿ ನೀವು ತೆರಬೇಕಾದ ಹಣದ ಪ್ರಮಾಣ ತೀರ್ಮಾನವಾಗುತ್ತದೆ. ಯಾವ ಕಾರಣಕ್ಕೂ ತಮ್ಮ ಬಂಧುವಿನ ಜೀವ ತೆಗೆದ ಡಾಕ್ಟರರನ್ನು ಬಿಡುವುದಿಲ್ಲ ಎಂದು ಅಬ್ಬರಿಸಿ ಬೊಬ್ಬಿರಿಯುತ್ತಿದ್ದವರೂ ಸೇರಿದಂತೆ, ಎಲ್ಲರೂ ಹೋದ ಜೀವಕ್ಕೆ ದರ ನಿಗದಿ ಮಾಡುತ್ತಾರೆ. ಚೌಕಾಸಿ ನಡೆಯಬಹುದು ಅಷ್ಟೇ. ಮತ್ತೆಲ್ಲವೂ ಸಲೀಸು. ನಿಮ್ಮ ಆರೋಗ್ಯ ಸೇವೆ (ಕೆಲವರು ಹೇಳುವಂತೆ ವೈದ್ಯಕೀಯ ದಂಧೆ) ಯಥಾಪ್ರಕಾರ ಮುಂದುವರೆಯುತ್ತದೆ.

ಅವೆಲ್ಲಾ ಇರಲಿ, ಬಿಡಿ. ಇನ್ನು ನಾವು ನಾವು ಮಾತನಾಡಿಕೊಳ್ಳೋಣ. ವಾಸ್ತವದಲ್ಲಿ, ಅಂದರೆ ನಮ್ಮ ಪ್ರಕಾರ, ಪ್ರತೀ ರೋಗಿಯ ಸಾವಿಗೂ ಏನೋ ಕಾರಣವಿರುತ್ತದೆ. ಒಂದು ಸಣ್ಣ ಔಷಧಿಯೂ ವಿಪರೀತ ರಿಯಾಕ್ಷನ್‌ಗೆ ಕಾರಣವಾಗಿ ಅದು ಸಾವಿನಲ್ಲಿ ಕೊನೆಗೊಳ್ಳಬಹುದು. ರೋಗಿಯ ಕಾಯಿಲೆಯ ಭಾಗವಾಗಿಯೇ ಅನಿರೀಕ್ಷಿತವಾಗಿ ಆದ ಒಂದು ಅವಘಡವು ಮಾರಣಾಂತಿಕವಾಗಿರಬಹುದು. ಆ ರೋಗಿಯ ದೇಹದಲ್ಲೇ ಇದ್ದಿರಬಹುದಾದ ಏನೋ ಒಂದು ಜನ್ಮಜಾತ ಸಮಸ್ಯೆ ಆ ಅನಿರೀಕ್ಷಿತ ತಿರುವಿಗೆ ಕಾರಣವಾಗಬಹುದು. ಇಂತಹ **unexplained sudden deat?**ಗಳು ನಮ್ಮ ಕೈ ಮೀರಿದವು. ಹಾಗೆ ನೋಡಿದರೆ, **sudden infant deat? syndrome** ಅಂತಲೇ ಒಂದು ಇದೆ. ಅದಕ್ಕೆಲ್ಲಾ ಡಾಕ್ಟರ್ ಹೇಗೆ ಹೊಣೆಗಾರನಾಗಲು ಸಾಧ್ಯ? ಹಾಗಾಗಿ ಇದರ ಸರಿತಪ್ಪನ್ನು ತೀರ್ಮಾನಿಸಲು ಜನಸಾಮಾನ್ಯರಿಗೆ ಬಿಡಲಾಗದು.

ಒಂದು ವೇಳೆ ಸರಿ-ತಪ್ಪನ್ನು ತೀರ್ಮಾನಿಸಲು ತನಿಖಾ ಸಮಿತಿಯೊಂದು ರಚನೆಯಾದರೆ, ಅದು ನಿಮ್ಮ ಪರವಾಗಿಯೇ ವರದಿ ಕೊಡುತ್ತದೆ. ಏಕೆಂದರೆ ಸಹಜವಾಗಿ, ಸಮಿತಿಯಲ್ಲಿ ಪರಿಣಿತರಿರಬೇಕಾಗುತ್ತದೆ. ಪರಿಣಿತರೆಂದರೆ ಕುಲಬಾಂಧವರೇ. ಆ ವೈದ್ಯ ಮಹಾಶಯರಿಗೆ ನೀವು ಹೇಳಬಹುದಾದ **unexplained sudden deat?**ನ ವಿವರಣೆಯನ್ನು ಅವರು ಒಪ್ಪೇ ಒಪ್ಪುತ್ತಾರೆ. ಅಲ್ಲಿಗೆ ಕೇಸ್ ಖಲಾಸ್. ಈ ವರದಿಯು ಪೊಲೀಸ್ ಕೇಸಿಗೂ ಸಹಾಯ ಮಾಡುತ್ತದೆ. ಹೆಚ್ಚೆಂದರೆ ಅವರು ಒಂದಷ್ಟು ದುಡ್ಡು ಪೀಕಬಹುದು ಅಷ್ಟೆ. ಇಷ್ಟು ಬಿಟ್ಟರೆ ಎಂತಹ ದೊಡ್ಡ ಘಟನೆಯಾದರೂ ಏನೂ ಸಮಸ್ಯೆಯಿಲ್ಲ.

ಅದಕ್ಕೂ ಮೀರಿ ಯಾರಾದರೂ ಮೈಮೇಲೆ ಏರಿ ಬಂದರೆ ನಿಮಗೊಂದು ಕಾನೂನೂ ಇದೆ. ಈ ಕಾನೂನನ್ನು 5 ವರ್ಷಗಳ ಕೆಳಗೆ ಮಾಡಬೇಕಾಗಿ ಬಂದದ್ದಕ್ಕೂ ಕಾರಣವಿದೆ. ಜನರು ರೋಗಿಯ ಸಾವು ಸಂಭವಿಸಿದಾಗ ಆಸ್ಪತ್ರೆಯ ಪೀಠೋಪಕರಣಗಳನ್ನು ಧ್ವಂಸ ಮಾಡುವುದು, ವೈದ್ಯಕೀಯ ಸಿಬ್ಬಂದಿಗೆ ಬಡಿಯುವುದು ಆಗ ವ್ಯಾಪಕವಾಗುತ್ತಿತ್ತು. ಹಾಗಾಗಿ ಜನಪ್ರತಿನಿಧಿಗಳನ್ನು ಹಿಡಿದುಕೊಂಡು, ಡಾಕ್ಟರ್ ಕುಲದ ಪರವಾಗಿ **THE KARNATAKA PROHIBITION OF VIOLENCE AGAINST MEDICARE SERVICE PERSONNEL AND DAMAGE TO PROPERTY IN MEDICARE SERVICE INSTITUTIONS ACT, 2009** (ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿಯ ಮೇಲೆ ಹಿಂಸಾಚಾರವನ್ನು ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ಅಧಿನಿಯಮ, **2000**)ವನ್ನು ಜಾರಿ ಮಾಡಿಸಿಕೊಳ್ಳಲಾಯಿತು. ಜನಪ್ರತಿನಿಧಿಗಳೇ ಆಗಿದ್ದರೂ, ಅವರೂ ಮನುಷ್ಯರೇ ತಾನೇ? ಅವರಿಗೂ ಕಾಯಿಲೆ ಬಂದೇ ಬರುತ್ತದೆ. ಆಗ ಡಾಕ್ಟರ್ ಹತ್ತಿರ ಬಂದೇ ಬರಬೇಕು. ದೊಡ್ಡ ಜನರಿಗೆ ದೊಡ್ಡ ಕಾಯಿಲೆಗಳೂ ಜಾಸ್ತಿ. ಆದ್ದರಿಂದ ಅಧಿಕಾರಸ್ಥರು ವೈದ್ಯರ ಮಾತಿಗೆ ಓಗೊಟ್ಟು ಈ ಕಾಯ್ದೆಯನ್ನು ತಂದರು.

ಇನ್ನು ಯಾರೇ ಕೂಗಾಡಲೀ, ಊರೇ ಹೋರಾಡಲಿ, ನಿಮ್ಮ ದಂಧೆಗೇನು ಭಂಗವಿಲ್ಲ. ಬಿಸಿಲು, ಮಳೆಗೆ, ಬಿರುಗಾಳಿ ಚಳಿಗೆ ಜನ ಹೆಚ್ಚೆಚ್ಚು ಅಳುಕಿ ನಿಮ್ಮ ಬಳಿಗೆ ಬಂದೇ ಬರುತ್ತಾರೆ. ಹಣ ಕಕ್ಕಿ, ನೀವು ತಿಕ್ಕಿದ ಮುಲಾಮಿಗೆ ಬೆರಗಾಗುತ್ತಾ ನಿಮ್ಮ ಸೌಧಗಳು ಮೇಲೇಳುತ್ತಾ ಎಲ್ಲೆಲ್ಲೂ ಸುಖ, ಶಾಂತಿ, ನೆಮ್ಮದಿಗಳು ತಾಂಡವವಾಡುತ್ತಾ...



ಈ ಪತ್ರದಲ್ಲಿ ವ್ಯಂಗ್ಯವಿದ್ದರೆ ಕ್ಷಮಿಸಿ. ಒಂದಿಷ್ಟು ವೈದ್ಯಕೀಯವನ್ನು ಬಲ್ಲವನಾಗಿ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಬಲ್ಲೆ. ವೈದ್ಯರ ಎಲ್ಲಾ ಪ್ರಾಮಾಣಿಕ ಪ್ರಯತ್ನ, ಪರಿಣಿತಿಯ ಹೊರತಾಗಿಯೂ ಅನಿರೀಕ್ಷಿತವಾಗಿ ರೋಗಿ ಸಾಯಲು ಹತ್ತಾರು ಕಾರಣಗಳಿರಬಹುದು. ಎಲ್ಲಾ ವೈದ್ಯರೂ ಧನಪಿಶಾಚಿಗಳೂ ಅಲ್ಲ; ರಕ್ತ ಪಿಪಾಸುಗಳೂ ಅಲ್ಲ. ತಮ್ಮ ಸೇವಾವಧಿಯಲ್ಲಿ ಕೈಯಿಂದಲೇ ಹಣ ಹಾಕಿ ರೋಗಿಗಳಿಗೆ ಒಳಿತು ಮಾಡಿರುವವರೂ ಬೇಕಾದಷ್ಟಿದ್ದಾರೆ. ಇಂದಿಗೂ 10 ರೂ. ವೈದ್ಯರು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಕನಿಷ್ಟ ಜಿಲ್ಲೆಗೊಬ್ಬರಾದರೂ, ಇದ್ದಾರೆ. ಕನಿಷ್ಟ ವೈಜ್ಞಾನಿಕ ಜ್ಞಾನವಿಲ್ಲದ ಸಾಮಾನ್ಯ ಜನರು ಸುಖಾಸುಮ್ಮನೇ ಎಂತೆಂಥದೋ ಆರೋಪಗಳನ್ನು ಮಾಡುತ್ತಾರೆ! ಒಂದು ವೇಳೆ ಆ ರೋಗಿಯ ಅಸಲೀ ಸಮಸ್ಯೆಯನ್ನು ಅರಿಯಲು ಇನ್ನಷ್ಟು ರಕ್ತಪರೀಕ್ಷೆಗಳು, ಸ್ಕ್ಯಾನ್‌ಗಳನ್ನು ಮಾಡಿಸಿದ್ದಿದ್ದರೆ, ಹಣ ಪೀಕುತ್ತಾನೆಂದು ಅದಕ್ಕೂ ಬಯ್ದುಕೊಳ್ಳುತ್ತಾರೆ. ಇವೆಲ್ಲವೂ ನಿಜ.

ಯಾವುದೇ ರೋಗಿಯನ್ನು ಸಾಯಿಸಿಬಿಡಬೇಕೆಂದು ಯಾವ ವೈದ್ಯರೂ ಬಯಸುವುದಿಲ್ಲ. ನಿದ್ದೆಗೆಟ್ಟು, ಸ್ವತಃ ಆರೋಗ್ಯ ಕೆಡಿಸಿಕೊಂಡು, ನೂರೆಂಟು ತರಲೆ ತಾಪತ್ರಯಗಳ ನಡುವೆ ವೈದ್ಯರೂ ಕೆಲಸ ಮಾಡುತ್ತಾರೆ. ಅವರೂ ಮನುಷ್ಯರೇ ಅಲ್ಲವೇ? ಮನುಷ್ಯ ಸಹಜವಾದ ಏರಿಳಿತಗಳನ್ನು ಅವರೂ ಎದುರಿಸುತ್ತಿರುತ್ತಾರೆ; ತಪ್ಪುಗಳನ್ನೂ ಮಾಡುತ್ತಾರೆ.

ಆದರೆ ನೀವು ಕೇಳಿಕೊಳ್ಳಬೇಕಾದ, ನಿಮಗೆ ನೀವೇ ಉತ್ತರಿಸಿಕೊಳ್ಳಬೇಕಾದ ಸಂಗತಿಗಳಿವೆಯಲ್ಲವೇ? ಯಾಕಾಗಿ ಇಷ್ಟೊಂದು ಪ್ರಮಾಣದಲ್ಲಿ ರೋಗಿಗಳು ಡಾಕ್ಟರುಗಳ ಮೇಲೆ ಹಾರಿ ಬೀಳುತ್ತಿದ್ದಾರೆ? ಕಾಲ ಕೆಟ್ಟು ಹೋಗಿರುವುದು ಅಷ್ಟೇ ಕಾರಣವಾ ಅಥವಾ ಇದಕ್ಕೆ ಬೇರಿನ್ನೇನಾದರೂ ಕಾರಣವಿದೆಯಾ? ಇಡೀ ವೈದ್ಯಕುಲ ಗಂಭೀರವಾಗಿ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ಸಂದರ್ಭ ಇಂದು ನಮ್ಮ ಮುಂದೆ ಬಂದಿಲ್ಲವಾ? ಬೇರೆ ಬಿಸಿನೆಸ್‌ಗಳೂ, ಮನುಷ್ಯರ ಮನಸ್ಸು ಮತ್ತು ದೇಹಗಳನ್ನು ಸಹನೀಯಗೊಳಿಸುವ ವೃತ್ತಿಯೂ ಒಂದೇ ಅಲ್ಲ ಅಲ್ಲವಾ? ನಿಮ್ಮ ಕಣ್ಣೆದುರಿಗೇ ಹಣವಿಲ್ಲ ಎನ್ನುವ ಕಾರಣಕ್ಕೆ ಎಷ್ಟೋ ಜನ ಪ್ರಾಣ ಕಳೆದುಕೊಂಡಿರುವುದು ನಿಜವಲ್ಲವೇ? ಒಂದು ವೇಳೆ ತುಂಬಾ ಸಣ್ಣ ಕಾರಣಕ್ಕೆ ಸತ್ತು ಹೋದ ಆ ರೋಗಿಯ ಬಳಿ ಇನ್ನು ಕೆಲವೇ ಸಾವಿರಗಳಿರುತ್ತಿದ್ದರೆ ಆತ ಅಥವಾ ಆಕೆ ಬದುಕಿರುತ್ತಿದ್ದರು ಅಲ್ಲವೇ? ಇನ್ನು ನಿರ್ಲಕ್ಷ್ಯದ ವಿಚಾರಕ್ಕೆ ಬರುವುದಾದರೆ, ಆ ರೋಗಿ ನಿಮ್ಮ ಮನೆಯವರಾಗಿರುತ್ತಿದ್ದರೆ ಬದುಕಿರುತ್ತಿದ್ದರು ಎನ್ನುವುದು ನಿಜವಲ್ಲವೇ? ಎಲ್ಲಕ್ಕಿಂತ ಹೆಚ್ಚಾಗಿ ಅಪಾರ ಗೌರವಾದರಗಳಿಗೆ ಪಾತ್ರವಾಗಿದ್ದ ವೈದ್ಯ ಕುಲ ಸಮಾಜದ ಕಣ್ಣಲ್ಲಿ ಅಮಾನ್ಯಗೊಳ್ಳುತ್ತಿರುವುದು ವಾಸ್ತವವಲ್ಲವೇ? ಇದಕ್ಕೆ ಕಾರಣ ನಮ್ಮೊಳಗೂ ಇವೆಯಲ್ಲವೇ?

ಬೆಂಗಳೂರಿನ ಒಂದು ದೊಡ್ಡ ಖಾಸಗಿ ಆಸ್ಪತ್ರೆಯ, ನಿಜಕ್ಕೂ ಒಳ್ಳೆಯ ಮನಸ್ಸು ಮತ್ತು ದೃಷ್ಟಿಕೋನವುಳ್ಳ ವೈದ್ಯ ಗೆಳೆಯರೊಬ್ಬರು ಈ ಬಗ್ಗೆ ಮಾತನಾಡುವಾಗ ಒಂದು ಸಂಗತಿ ಹೇಳಿದರು. ಇಂತಹದೊಂದು ಪರಿಸ್ಥಿತಿ ಬಂದಿರುವುದು ನಿಜ. ಆದರೆ ಕೇವಲ ವೈದ್ಯರು ಇದಕ್ಕೆ ಕಾರಣವಲ್ಲ. ಹಿಂದೆಲ್ಲಾ ವೈದ್ಯರೇ ಆಸ್ಪತ್ರೆಗಳ ಮಾಲೀಕರೂ ಆಗಿರುತ್ತಿದ್ದರು. ಈಗ ಇದರಲ್ಲಿ ಇನ್ನೊಂದು ಹೊಸ ಸ್ತರ ಬಂದಿದೆ. ಅದು ಎಂಬಿಎ ಪದವೀಧರರಾದ ಮ್ಯಾನೇಜರ್‌ಗಳದ್ದು, ಅವರು ಈ ಕ್ಷೇತ್ರವನ್ನು ಹ
ಮಾಡುತ್ತಿದ್ದಾರೆ. ವೈದ್ಯಕೀಯ ವ್ಯವಸ್ಥೆಯನ್ನು ಸಂಪೂ
ಬಿಸಿನೆಸ್ ಮಾಡಲು ಅವರು ಕಾರಣ. ಈ ರ
ಆಗುತ್ತಿರುವುದೂ ನಿಜ. ಆದರೆ ಅದು ವೈದ್ಯಕೀಯ ಕ್ಷೇ
ಸಮಸ್ಯೆಗೆ ಸೇರಿಕೊಂಡಿರುವ ಹೊಸ ಆಯಾಮ. ವೈದ
ಮಾಲೀಕರಾಗಿರುವ ಆಸ್ಪತ್ರೆ, ನರ್ಸಿಂಗ್ ಹೋಂಗ
ರೋಗಿಗಳ ಸಿಟ್ಟಿಗೆ ಹೆಚ್ಚೆಚ್ಚು ಗುರಿಯಾಗುತ್ತಿವೆ. ಎಂಬಿಎಗ
ಸೇರಿಕೊಂಡಿರುವ ಕಾರ್ಪೋರೇಟ್ ಆಸ್ಪತ್ರೆಗಳ ವ್ಯವಸ್ಥೆ ನಿಜ
ಭಾರೀ ದಂಧೆಯೇ ಆಗಿದೆ ಎನ್ನುವುದೇನೋ ನಿಜ. ಆ
ಈ ವ್ಯವಸ್ಥೆಯಲ್ಲಿ ವೈದ್ಯರುಗಳದ್ದು ಬಹಳ ಮುಖ್ಯ ಪಾತ್ರ

ಇದನ್ನು ಟಾಪ್ ಹೆವಿ ಸಿಸ್ಟಂ (ಕೈ ಕಾಲು, ದ
ಸಣ್ಣ - ತಲೆ ಮಾತ್ರ ತುಂಬಾ ದಪ್ಪ) ಎನ್ನಬಹು
ವೈದ್ಯಕೀಯ ಭಾಷೆಯಲ್ಲಿ ಹೇಳುವುದಾದ
Hydrocephalus ಥರಾ. ದಿನಕ್ಕೆ ಒಂದು
ಸಂಪಾದಿಸುವ ನೂರು ಜನ ವೈದ್ಯರನ್ನು ಬಿಟ್ಟು ಬಿಡೋ
ಆದರೆ ದಿನಕ್ಕೆ 20 ಸಾವಿರ ಸಂಪಾದಿಸುವವರ ಸ
ಸಾವಿರಾರು ಇದೆಯಲ್ಲವೇ? ಅದೇ ಆಸ್ಪತ್ರೆಯಲ್ಲಿ ತಿಂಗಳಿ
20 ಸಾವಿರ ಸಂಪಾದನೆ ಮಾಡದವರೇ ಶೇ.85ರ
ಸಿಬ್ಬಂದಿ. ಇದ್ಯಾವ ನ್ಯಾಯ? ವೈದ್ಯರುಗಳಿಗೆ ಈ ಪ
ಆದ್ಯತೆ ಸರಿಯೇ? ಅದಿರಲಿ, ವೈದ್ಯರು ನಿಜಕ್ಕೂ ಇಷ್ಟೊ
ಹಣ ಸಂಪಾದಿಸುವುದು ಸರಿಯೇ?


ಈ ಎಲ್ಲಾ ಹಣವನ್ನೂ ನ್ಯಾಯಯುತ ಮಾರ್ಗ
ಸಂಪಾದಿಸಲಾಗುತ್ತಿಲ್ಲ. ನಾವು ಇಂತಿಷ್ಟು ರೋಗಿಗಳ
ನೋಡುತ್ತೇವೆ. 200ರಿಂದ 2000 ರೂ.ವರೆಗೆ ಕನ್ಸಲ್ಟೇ
ಫೀಸ್ ನಿಗದಿ ಮಾಡಿರುತ್ತೇವೆ ಅಥವಾ ಇಂತಿ
ಆಪರೇಷನ್ ಮಾಡುತ್ತೇವೆ, ಅದರಿಂದ ಒಂದಷ್ಟು ಸಂಪಾ
ಮಾಡುತ್ತೇವೆ, ಇದರಲ್ಲೇನು ಅನ್ಯಾಯ? ಎಂಬ
ಏಳಬಹುದು. ಮೊದಲನೆಯದಾಗಿ, ಅದೂ ಅನ್ಯಾಯ
ಈ ಕೆಲಸಕ್ಕೆ ಇಷ್ಟು ಹಣ ನಿಗದಿಯಾಗಿರುವುದೇ ಅನ್ಯಾ
ಆದರೆ ಅದರಿಂದ ಮಾತ್ರ ವೈದ್ಯರುಗಳು ಹ
ಸಂಪಾದಿಸುತ್ತಿಲ್ಲ. ಟಾರ್ಗೆಟ್, ಕಟ್ಸ್, ಸ್ಪೆಷಲ್ ಅಡ್ಜಸ್ಟ್‌ಮಂ
ರೆಫರಲ್ ಫೀಸ್, ಅನಗತ್ಯ ರೆಫರಲ್, ಸ್ವಂತದ್ದೇ ಲ್ಯಾ
ಎಕ್ಸ್-ರೇ, ಸ್ಕ್ಯಾನ್ ಯಂತ್ರ, ಔಷಧಿ ಅಂಗ
ಫಿಸಿಯೋಥೆರಪಿ ಯೂನಿಟ್, ಅನಗತ್ಯ ಸರ್ಜರಿ, ಅನ
ದೊಡ್ಡಾಸ್ಪತ್ರೆ, ಅನಗತ್ಯ ಐಸಿಯು, ಅನಗತ್ಯ ಔಷಧಿ, ಅನ
ಪರೀಕ್ಷೆಗಳು ಇವೆಲ್ಲವೂ ಸೇರಿಕೊಂ
ವೈದ್ಯಕೀಯವೆಂಬುದೊಂದು ದಂಧೆಯಾಗಿದೆ.

ರೋಗಿಗಳು ತಮ್ಮಲ್ಲಿಗೇ ಹೆಚ್ಚೆಚ್ಚು ಬರಬೇಕು ಎ
ಮಾಡುತ್ತಿರುವ ಸರ್ಕಸ್ಸುಗಳು ಸಾಕಷ್ಟಿವೆ. ಇನ್‌ಶೂ
ಇದ್ದ ರೋಗಿಗೆ ಒಂದು ರೀತಿಯ ಚಾರ್ಜು, ಉಳಿದವ
ಬೇರೆ ಚಾರ್ಜು ಮಾಡುವ ಆಸ್ಪತ್ರೆ, ವೈದ್ಯರುಗಳಿ
ಸರ್ಕಾರೀ ಇನ್‌ಶೂರೆನ್ಸ್ ಆದ ಯಶಸ್ವಿನಿ, ಆರ್‌ಎಸ್‌ಬಿ
ವಾಜಪೇಯಿ ಆರೋಗ್ಯಶ್ರೀ ಇತ್ಯಾದಿ ಇತ್ಯಾದಿಗಳ
ಅಪಾರ ಹಣ ಸುಲಿಗೆ ನಡೆಯುತ್ತಿದೆ; ಅದರಲ್ಲಿ ವೈದ್ಯರು
ಭಾಗಿಯಾಗಿದ್ದಾರೆ.


ಹೇಳುತ್ತಾ ಹೋದರೆ, ಈ ಪಟ್ಟಿ ಬ
ಸುದೀರ್ಘವಾಗಿದೆ. ನೂರೆಂಟು 'ಸೃಜನಶೀಲ' ಮಾರ್ಗಗಳ
ಹಣ ಸಂಪಾದನೆ ನಡೆಯುತ್ತಿದೆ. ಅಗಾಧವಾದ ಸ್
ವೈದ್ಯಕೀಯ ದಂಧೆಯಲ್ಲಿ ಬೆಳೆಯುತ್ತಿದೆ. ಆದರೆ, ಒ
ವೇಳೆ ಸಮಸ್ಯೆ ಬಂದರೆ ಇನ್ನೆಲ್ಲೂ ಇಲ್ಲದಂತೆ ತ
ಕುಲಬಾಂಧವರನ್ನು ರಕ್ಷಿಸಿಕೊಳ್ಳುವ ಪ್ರವೃತ್ತಿ
ವಿಪರೀತವಾಗಿದೆ. ಇದು ಜನರಿಗೂ ಗೊತ್ತಿದೆ. ಹೆ
ಗೊತ್ತಾಗುತ್ತಿದೆ. ಹಾಗಾಗಿ ಅವರ ಸಹನೆ
ಕಟ್ಟೆಯೊಡೆಯುತ್ತಿದೆ. ಇಡೀ ವೈದ್ಯಕೀಯ ವ್ಯವಸ್ಥೆಯ
ಅವರಲ್ಲಿ ಮಡುಗಟ್ಟಿರುವ ಸಿಟ್ಟು ಕೆಲವೊಮ್ಮೆ ನಿಜ
ತಪ್ಪು ಮಾಡದ ವೈದ್ಯರು ಮತ್ತು ಆಸ್ಪತ್ರೆಗಳ ವಿರುದ್
ತಿರುಗುವುದುಂಟು. ಆಗ ನಾವು ಆ ಜನರನ್ನು ವ
ದೂರುತ್ತಾ ಕೂತರೆ ಸಮಸ್ಯೆ ಬಗೆಹರಿಯುವುದಿಲ್ಲ; ವ
ಇದು ಹೆಚ್ಚುತ್ತಾ ಹೋದರೆ ಯಾವ ಕಾನೂನೂ ನ
ರಕ್ಷಣೆಗೆ ಬರುವುದಿಲ್ಲ. ಪರಿಸ್ಥಿತಿ ಇನ್ನೂ ಹಾಳಾಗುವ
ಮುಂಚೆ ವೈದ್ಯಕುಲ ಎಚ್ಚೆತ್ತುಕೊಳ್ಳಬೇಕಿದೆ. ಗಂಭೀರ
ಆತ್ಮವಿಮರ್ಶೆಗೆ ತನ್ನನ್ನು ಒಡ್ಡಿಕೊಳ್ಳಲುವ ಅಗತ್ಯವಿ

ಎಲ್ಲಕ್ಕಿಂತ ಮುಖ್ಯವಾಗಿ ವೈದ್ಯರು ಬದುಕುತ್ತಿರುವ
ಮನುಷ್ಯರ ನೋವು, ಅನಾರೋಗ್ಯ, ಅಸಹಾಯಕತ
ಆಧಾರದ ಮೇಲೆ. ಅದನ್ನು ಕಡಿಮೆ ಮಾಡುವುದು ನ
ಕರ್ತವ್ಯ. ಒಬ್ಬ ವೈದ್ಯನಾಗಿ/ವೈದ್ಯಳಾಗಿ ಮತ್ತು
ಸಮುದಾಯವಾಗಿ ಆ ನೋವನ್ನು, ಅನಾರೋಗ್ಯ
ಅಸಹಾಯಕತೆಯನ್ನು ಹೆಚ್ಚಿಸದೇ ಇರಲು ಏನನ್ನಾದ
ಮಾಡೋಣ.

ಹಚಿ ಎಂಬ ನಾಯಿಯ ನಿಷ್ಠೆ



ಹಚಿ




• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಅದು ಅಮೆರಿಕದ ಒಂದು ಉಪನಗರದಲ್ಲಿರುವ ರೈಲ್ವೆ ಸ್ಟೇಷನ್. ಒಂದು ದಿನ ಆ ಸ್ಟೇಷನ್ನಿನಲ್ಲಿ ಎಲ್ಲಿಂದಲೋ ಒಂದು ಮುದ್ದಾದ ನಾಯಿಮರಿ ಪ್ರತ್ಯಕ್ಷವಾಗುತ್ತದೆ. ಪ್ಲಾಟ್‌ಫಾರ್ಮ್ ಮೇಲೆ ಹಲವಾರು ಜನ ಓಡಾಡುತ್ತಿದ್ದರೂ ಆ ನಾಯಿಮರಿ ಒಬ್ಬನ ಹತ್ತಿರ ಮಾತ್ರ ಹೋಗಿ ಕುಂಈ ಅನ್ನುತ್ತದೆ. ಅವನು ಹತ್ತಿರದ ನಗರದಲ್ಲಿರುವ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್. ಆತ ಆ ಮರಿಯನ್ನು ಎತ್ತಿಕೊಂಡು ಅದರ ಮಾಲೀಕರು ಇದ್ದಾರೆಯೇ ಎಂದು ಸುತ್ತಮುತ್ತ ನೋಡುತ್ತಾನೆ. ಅಷ್ಟು ಹೊತ್ತಿಗೆ ಪ್ಲಾಟ್‌ಫಾರ್ಮ್‌ನಲ್ಲಿ ಯಾರೂ ಇರುವುದಿಲ್ಲ. ಆಗ ಆ ಮರಿಯನ್ನು ಎತ್ತಿಕೊಂಡು ಸ್ಟೇಷನ್ ಮಾಸ್ಟರ್‌ಗೆ ಒಪ್ಪಿಸಲು ನೋಡುತ್ತಾನೆ. ಆದರೆ ಸ್ಟೇಷನ್ ಮಾಸ್ಟರ್ "ಅದನ್ನು ತೆಗೆದುಕೊಂಡು ನಾನೆಲ್ಲಿಗೆ ಹೋಗಲಿ. ಅದನ್ನು ನಾನು ಇಲ್ಲೇ ಕೊಠಡಿಯಲ್ಲಿ ಕೂಡಿಹಾಕಬೇಕಷ್ಟೇ" ಎನ್ನುತ್ತಾನೆ. ಆ ಪುಟ್ಟ ಮರಿಯನ್ನು ಅಲ್ಲಿ ಬಿಟ್ಟುಹೋಗುವುದು ಪ್ರೊಫೆಸರ್‌ಗೆ ಸರಿ ಕಾಣುವುದಿಲ್ಲ. ವಿಧಿ ಇಲ್ಲದೆ ಅದನ್ನು ತನ್ನ ಮನೆಗೆ ಎತ್ತಿಕೊಂಡು ಹೋಗುತ್ತಾನೆ.

ಪ್ರೊಫೆಸರ್ ಹೆಂಡತಿಗೆ ನಾಯಿಗಳೆಂದರೆ ಆಗುವುದಿಲ್ಲ. ಆಕೆ ಸಿಡಿಮಿಡಿಗೊಳ್ಳುತ್ತಾಳೆ. ಆಗ ಆತ ಮಾರನೆದಿನ ಅದರ ಮಾಲೀಕರು ಬರಬಹುದೆಂದೂ, ಮರಿಯನ್ನು ಅವರಿಗೆ ಕೊಟ್ಟರಾಯಿತು ಎಂದೂ ಹೆಂಡತಿಯನ್ನು ಒಪ್ಪಿಸುತ್ತಾನೆ. ಆದರೆ ಮೂರ್ನಾಲ್ಕು ದಿನಗಳಾದರೂ ಯಾರೂ ತಪ್ಪಿಸಿಕೊಂಡಿರುವ ತಮ್ಮ ನಾಯಿಮರಿಯನ್ನು ಹುಡುಕಿಕೊಂಡು ಬರುವುದೇ ಇಲ್ಲ. ಆಗ ಅದನ್ನು ಯಾರಿಗಾದರೂ ಕೊಟ್ಟುಬಿಡು ಎಂದು ಹೆಂಡತಿ ಒತ್ತಾಯಿಸುತ್ತಾಳೆ. ಅದಕ್ಕೂ ಪ್ರೊಫೆಸರ್ ಒಪ್ಪುತ್ತಾನೆ. ಆದರೆ ನಾಯಿಯನ್ನು ತಮ್ಮ ಮನೆಗೆ ಸ್ವೀಕರಿಸಲು ಯಾರಾದರೂ ಮುಂದಾಗುವ ಮುನ್ನವೇ ಪ್ರೊಫೆಸರ್ ಆ ಮರಿಯನ್ನು ತುಂಬಾ ಹಚ್ಚಿಕೊಂಡುಬಿಡುತ್ತಾನೆ. ನಾಯಿ ಮತ್ತು ಪ್ರೊಫೆಸರ್ ನಡುವಿನ ಗೆಳೆತನವನ್ನು ನೋಡಿ ಕೊನೆಗೆ ಆತನ ಹೆಂಡತಿ ಆ ಮರಿಯನ್ನು ಮನೆಯಲ್ಲಿ ಇಟ್ಟುಕೊಳ್ಳಲು ಸಮ್ಮತಿಸುತ್ತಾಳೆ.

ಆ ನಾಯಿ ಮರಿಯ ಕೊರಳುಪಟ್ಟಿಯಲ್ಲಿ ಒಂದು



ಹಚಿ ಸಮಾಧಿ



ಸೂಚನೆ ಇರುತ್ತದೆ. ಅದನ್ನು ಗಮನಿಸುವ ಪ್ರೊಫೆಸರನ ಜಪಾನಿ ಸಹೋದ್ಯೋಗಿ "ಇದರಲ್ಲಿ ಜಪಾನಿ ಭಾಷೆಯಲ್ಲಿ ಹಚಿ ಎಂದು ಬರೆಯಲಾಗಿದೆ. ಅಂದರೆ ಇದು ಎಂಟನೆ ಮರಿಯಾಗಿ ಹುಟ್ಟಿದ್ದು ಎಂದರ್ಥ" ಎಂದು ವಿವರಿಸುತ್ತಾನೆ. ಆಗ ಪ್ರೊಫೆಸರ್ ಆ ಮರಿಗೆ 'ಹಚಿ' ಎಂದೇ ಹೆಸರಿಡುತ್ತಾನೆ.

ದಿನಕಳೆದಂತೆ ಹಚಿ ಮತ್ತು ಪ್ರೊಫೆಸರ್ ನಡುವೆ ಗಾಢ ಸಂಬಂಧ ಬೆಳೆಯುತ್ತದೆ. ಹಚಿ ಜೊತೆ ಸಮಯ ಕಳೆಯುವುದೇ ಪ್ರೊಫೆಸರ್‌ಗೆ ಆನಂದ, ಹಚಿಗೋ ತನ್ನ ಮಾಲೀಕ ಯಾವಾಗ ಮನೆಗೆ ಹಿಂದಿರುಗುತ್ತಾನೋ ಎಂಬ ಕಾತರ. ಚೆಂಡು ಎಸೆಯುವುದು, ಹಚಿ ಅದನ್ನು ತನ್ನಲ್ಲಿಗೆ ವಾಪಸ್ ತಂದು ಕೊಡುವ 'ಟ್ರಿಕ್' ಹೇಳಿಕೊಡಲು ಪ್ರೊಫೆಸರ್ ಎಷ್ಟೇ ಪ್ರಯತ್ನಿಸಿದರೂ ಹಚಿ ಅದನ್ನು ಕಲಿಯುವುದಿಲ್ಲ, ಆಗ ಮತ್ತೊಮ್ಮೆ ಆತನ ಜಪಾನಿ ಸಹೋದ್ಯೋಗಿ "ಜಪಾನಿ ನಾಯಿಗಳಿಗೆ ಅಂತಹ ಟ್ರಿಕ್‌ಗಳು ಬರುವುದಿಲ್ಲ, ಅತ್ಯವಶ್ಯಕ ಬಿದ್ದರೆ ಮಾತ್ರ ಅವು ಅಂತಹ ಟ್ರಿಕ್ ಮಾಡುತ್ತವೆ. ಆಗ ಅದನ್ನು ನೀನೇ ಅರ್ಥ ಮಾಡಿಕೊಳ್ಳಬೇಕು" ಎಂದು ಹೇಳುತ್ತಾನೆ.

ಹಚಿ ಸ್ವಲ್ಪ ಬೆಳೆದ ನಂತರ ದಿನಾ ಪ್ರೊಫೆಸರ್ ಜೊತೆ ರೈಲ್ವೆ ನಿಲ್ದಾಣಕ್ಕೆ ಹೋಗಿ ವಾಪಸ್ಸಾಗುವುದು, ಮತ್ತೆ ಆತ ಸಂಜೆ ಹಿಂದಿರುಗುವ ಹೊತ್ತಿಗೆ ನಿಲ್ದಾಣದಲ್ಲಿ ಹಾಜರಾಗಿ, ಸ್ಟೇಷನ್ನಿನ ಮುಂದೆ ಒಂದು ಸ್ಥಳದಲ್ಲಿ ಕೂತು ತನ್ನ ಮಾಲೀಕನಿಗಾಗಿ ಕಾದು, ಆಮೇಲೆ ಆತನೊಂದಿಗೆ ಮನೆಗೆ ಮರಳುವ ಪರಿಪಾಠವನ್ನು ಪ್ರಾರಂಭಿಸುತ್ತದೆ. ಊರಿನ ಎಲ್ಲರಿಗೂ ಹಚಿಯ ಈ ನಿಷ್ಠೆಯನ್ನು ಕಂಡು ಅಚ್ಚರಿ. ಪ್ರೊಫೆಸರ್‌ಗಂತೂ ತನ್ನ ಮಿತ್ರ ಹಚಿಯ ಈ ಒಡನಾಟದ ಬಗ್ಗೆ ಇನ್ನಿಲ್ಲದ ಹಿಗ್ಗು. ಆತ ಹಚಿಯನ್ನು ತನ್ನ ಕುಟುಂಬದ ಸದಸ್ಯನಂತೆಯೇ ನೋಡಿಕೊಳ್ಳುತ್ತಿರುತ್ತಾನೆ.

ಒಂದೆರಡು ವರ್ಷ ಹೀಗೇ ಸಾಗುತ್ತದೆ. ಆ ಅವಧಿಯಲ್ಲಿ ಪ್ರೊಫೆಸರ್ ಮಗಳ ಮದುವೆಯಾಗಿ ಆಕೆ ಗರ್ಭಿಣಿಯೂ ಆಗುತ್ತಾಳೆ.

ಒಂದು ದಿನ ಪ್ರೊಫೆಸರ್ ವಿಶ್ವವಿದ್ಯಾಲಯಕ್ಕೆ ಹೊರಡುತ್ತಾನೆ. ಆದರೆ ಹಚಿ ಆತನೊಂದಿಗೆ ರೈಲ್ವೆ ನಿಲ್ದಾಣಕ್ಕೆ ಹೋಗುವುದಿರಲಿ, ಆತ ಮನೆ ಬಿಟ್ಟು ಹೋಗದಂತೆ ತಡೆಯಲೆತ್ನಿಸುತ್ತದೆ. ಪ್ರೊಫೆಸರ್‌ಗಾಗಲಿ ಆತನ ಪತ್ನಿಗಾಗಲಿ ಅವತ್ತು ಯಾಕೆ ಹಚಿ ಹೀಗೆ ವರ್ತಿಸುತ್ತಿದೆ ಎಂದೇ ಅರ್ಥವಾಗುವುದಿಲ್ಲ. ಹಚಿ ಎಷ್ಟೇ ತಡೆದರೂ ಪ್ರೊಫೆಸರ್ ಹೊರಡುತ್ತಾನೆ. ಆಗ ಹಚಿ ಒಂದು ಪುಟ್ಟ ಚೆಂಡನ್ನು ತನ್ನ ಬಾಯಿಯಲ್ಲಿ ಹಿಡಿದು ರೈಲ್ವೆ ಸ್ಟೇಷನ್ನಿಗೆ ದೌಡಾಯಿಸುತ್ತದೆ. ಅಲ್ಲೂ ಆತನನ್ನು ತಡೆಯಲು ತನ್ನ ಜೀವಮಾನದಲ್ಲೇ ಮೊದಲ ಬಾರಿಗೆ ಆತನೊಂದಿಗೆ ಚೆಂಡಿನಾಟ ಆಡುತ್ತದೆ. ಕೊನೆಗೂ ಹಚಿ ಈ 'ಟ್ರಿಕ್' ಕಲಿಯಿತು ಎಂದು ಪ್ರೊಫೆಸರ್‌ಗೆ ಸಂತೋಷವಾಗುತ್ತದೆ. ಒಂದೆರಡು ಬಾರಿ ಹಚಿ ಜೊತೆ ಆಟವಾಡಿ, ಅದರ ಬಗ್ಗೆ ರೈಲ್ವೆ ಸ್ಟೇಷನ್ನಿನ ಹತ್ತಿರ ಕಾಫೀ ಮಾರುವ ತನ್ನ ಮಿತ್ರನೊಂದಿಗೆ ಕೊಚ್ಚಿಕೊಂಡ ನಂತರ ಪ್ರೊಫೆಸರ್ ಟ್ರೈನನ್ನು ಏರಿ ವಿಶ್ವವಿದ್ಯಾಲಯವನ್ನು ತಲುಪುತ್ತಾನೆ. ಅವತ್ತು ಆತ ಪಾಠ ಮಾಡುತ್ತಿರುವಾಗಲೇ ಮೆದುಳಿನಲ್ಲಿ ತೀವ್ರ ರಕ್ತಸ್ರಾವವಾಗಿ ಆತ ಅಲ್ಲೇ ಅಸುನೀಗುತ್ತಾನೆ.

ಆದರೆ ಹಚಿಗೆ ಅದು ಹೇಗೆ ಗೊತ್ತಾಗಬೇಕು? ಎಂದಿನಂತೆ ಅವತ್ತಿನ ಸಂಜೆಯೂ ಅದು ಟೈಮಿಗೆ ಸರಿಯಾಗಿ ತನ್ನ ಎಂದಿನ ಸ್ಥಾನದಲ್ಲಿ ತನ್ನ ಮಾಲೀಕನಿಗೆ ಕಾಯುತ್ತಾ ಕೂರುತ್ತದೆ. ಮಾರನೆ ದಿನವೂ ಹಾಗೆ ಮಾಡುತ್ತದೆ. ಪ್ರೊಫೆಸರ್ ಮಗಳು ಮತ್ತು ಮಿತ್ರರು ವಿಧಿ ಇಲ್ಲದೆ ಪ್ರತಿರಾತ್ರಿ ಹಚಿಯನ್ನು ಬಲವಂತವಾಗಿ ವಾಪಸ್ ಮನೆಗೆ ಕರೆದುಕೊಂಡು ಹೋಗಲಾರಂಭಿಸುತ್ತಾರೆ.

ಕೆಲವು ಸಮಯದ ನಂತರ ಪ್ರೊಫೆಸರ್‌ನ ಹೆಂಡತಿ ತಾನು ಮತ್ತು ತನ್ನ ಪತಿ ವಾಸಿಸುತ್ತಿದ್ದ ಮನೆಯನ್ನು ಮಾರಿ ಬೇರೆ ಊರಿಗೆ ಸ್ಥಳಾಂತರಗೊಳ್ಳುತ್ತಾಳೆ. ಆಗ ಆಕೆಯ ಮಗಳು ಹಚಿಯನ್ನು ಹತ್ತಿರದ ಊರಿನಲ್ಲಿರುವ ತನ್ನ ಮನೆಗೆ ಕರೆದುಕೊಂಡು ಹೋಗುತ್ತಾಳೆ. ಅವಕಾಶ ಸಿಕ್ಕ ಕೂಡಲೇ ಮಗಳ ಮನೆಯಿಂದ ತಪ್ಪಿಸಿಕೊಳ್ಳುವ ಹಚಿ ಕಷ್ಟಪಟ್ಟು ಪ್ರೊಫೆಸರ್ ವಾಸವಿದ್ದ ಊರನ್ನು ಪತ್ತೆಹಚ್ಚಿ ಮತ್ತೆ ರೈಲ್ವೆ ನಿಲ್ದಾಣದ ಮುಂದೆ ಕಾಯುತ್ತಾ ಕೂರುತ್ತದೆ.

ದಿನಗಳು, ವಾರಗಳು, ತಿಂಗಳುಗಳು... ಕೊನೆಗೆ ವರ್ಷಗಳೇ ಉರುಳಿದರೂ ಹಚಿ ಪ್ರತಿಸಂಜೆ ರೈಲ್ವೆ ನಿಲ್ದಾಣದ ಮುಂದೆ ತನ್ನ ಮಾಲೀಕನ ಆಗಮನಕ್ಕಾಗಿ ಕಾಯುವುದನ್ನು ಮಾತ್ರ ನಿಲ್ಲಿಸುವುದಿಲ್ಲ. ಒಂದು ದಿನ ಹಚಿಯ ಈ ನಿಷ್ಠೆಯ ಬಗ್ಗೆ ಒಬ್ಬ ವರದಿಗಾರನಿಗೆ ಗೊತ್ತಾಗುತ್ತದೆ. ಆತ ಹಚಿ ಬಗ್ಗೆ ಒಂದು ವರದಿಯನ್ನು ಬರೆಯುತ್ತಾನೆ. ಸ್ವಲ್ಪ ದಿನಗಳಲ್ಲೇ ಹಚಿ ರಾಷ್ಟ್ರೀಯ ಗಮನ ಸೆಳೆಯುತ್ತದೆ. ಹಚಿಯ ಊಟ, ಆರೋಗ್ಯಕ್ಕೆಂದೇ ದೇಶದ ವಿವಿಧ ಕಡೆಗಳಿಂದ ಜನ ಹಣವನ್ನು ಕಳುಹಿಸಲಾರಂಭಿಸುತ್ತಾರೆ. ಸ್ಥಳೀಯರೇ ಹಚಿಯನ್ನು ನೋಡಿಕೊಳ್ಳುತ್ತಿರುತ್ತಾರೆ.

ಪ್ರೊಫೆಸರ್ ಇಹಲೋಕ ತ್ಯಜಿಸಿ ಒಂದು ದಶಕವಾಗುತ್ತದೆ. ಆತನ ಪತ್ನಿ ಮತ್ತು ಜಪಾನಿ ಸಹೋದ್ಯೋಗಿ ಆ ಊರಿಗೆ ಬಂದು ಆತನ ಸಮಾಧಿಗೆ ಹೂಗುಚ್ಛಗಳನ್ನು ಅರ್ಪಿಸುತ್ತಾರೆ. ಆನಂತರ ಅವರು ತಮ್ಮ ಊರುಗಳಿಗೆ ಹಿಂದಿರುಗಲು ರೈಲ್ವೆ ನಿಲ್ದಾಣಕ್ಕೆ ಹೋದರೆ ಅವರಿಗೆ ಅಲ್ಲೊಂದು ಅಚ್ಚರಿ ಕಾದಿರುತ್ತದೆ. ಅಷ್ಟು ಹೊತ್ತಿಗಾಗಲೇ ಹಣ್ಣಾಗಿರುವ ಹಚಿ ಆವತ್ತಿನ ಸಂಜೆಯೂ ತನ್ನ ಮಾಲೀಕನಿಗೆ ಕಾದು ಕೂತಿರುತ್ತದೆ. ಮನುಷ್ಯರಿಗಿಂತಲೂ ಹೆಚ್ಚು ನಿಷ್ಠೆಯನ್ನು ತೋರಿರುವ ಹಚಿಯನ್ನು ಪ್ರೊಫೆಸರ್ ಹೆಂಡತಿ ತಬ್ಬಿಕೊಂಡು ಕಣ್ಣೀರಿಡುತ್ತಾಳೆ.

ಅದು ಚಳಿಗಾಲದ ಒಂದು ರಾತ್ರಿ. ಸುತ್ತಲೂ ಹಿಮ ಬೀಳುತ್ತಿದೆ. ರೈಲ್ವೆ ನಿಲ್ದಾಣದ ಮುಂದೆ ತನ್ನ ಮಾಲೀಕನಿಗಾಗಿ ಕಾದುಕೂತಿರುವ ಹಚಿ ಹಾಗೆ ಕಣ್ಣುಮುಚ್ಚುತ್ತದೆ. ಕೊನೆಗೂ ಪ್ರೊಫೆಸರ್ ಬಂದಂತೆ, ತನ್ನನ್ನು ಮುದ್ದಿಸಿದಂತೆ, ತನ್ನೊಂದಿಗೆ ಆಟವಾಡುತ್ತಿರುವಂತೆ ಕನಸು ಕಾಣುತ್ತಲೇ ಹಚಿ ಅದೇ ಜಾಗದಲ್ಲಿ ತನ್ನ ಕೊನೆಯುಸಿರೆಳೆಯುತ್ತದೆ...

ಇದು 'ಹಚಿ: ಅ ಡಾಗ್ಸ್ ಸ್ಟೋರಿ' ಎಂಬ ಹಾಲಿವುಡ್ ಸಿನಿಮಾದ ಕತೆ. ಆದರೆ ಕಾಲ್ಪನಿಕ ಕತೆಯಲ್ಲ, ಬದಲಾಗಿ ಜಪಾನಿನಲ್ಲಿ ನಿಜವಾಗಲೂ ನಡೆದಂತಹದ್ದು.

ಟೋಕಿಯೋ ವಿಶ್ವವಿದ್ಯಾಲಯದಲ್ಲಿ ಕೃಷಿ ಪ್ರೊಫೆಸರ್ ಆಗಿದ್ದ ಯುನೋ ಎಂಬುವವರಿಗೆ 1924ರಲ್ಲಿ ಶಿಬುಯ ಎಂಬ ರೈಲ್ವೆ ಸ್ಟೇಷನ್ನಿನಲ್ಲಿ ಸಿಕ್ಕಿದ್ದು ಹಚಿಕೋ ಎಂಬ ನಾಯಿಮರಿ. ಸಿನಿಮಾದಲ್ಲಿನ ಕತೆಯಂತೆಯೇ ಪ್ರೊಫೆಸರ್ ಯುನೋ ಅವರು ತೀರಿಕೊಂಡ ಒಂಭತ್ತು ವರ್ಷಗಳ ನಂತರವೂ ಹಚಿಕೋ ಅವರಿಗಾಗಿ ಪ್ರತಿದಿನ ಆ ರೈಲ್ವೆ ನಿಲ್ದಾಣದಲ್ಲಿ ಕಾಯುತ್ತಿತ್ತು.



ನಮ್ಮ ಆಫೀಸಿನ 'ಕೆಂಚಿ'

ಹಚಿಕೋ ನಾಯಿಯು ಜಪಾನಿನಲ್ಲಿ ಪ್ರಖ್ಯಾತವಾಗಿದ್ದ ಅಕಿಟಾ ಎಂಬ ತಳಿಗೆ ಸೇರಿತ್ತು. ಆಗ ಪರಿಶುದ್ಧವಾದ ಅಕಿಟಾ ತಳಿಯ ನಾಯಿಗಳಲ್ಲಿ ಕೇವಲ 30 ಮಾತ್ರ ಜಪಾನಿನಲ್ಲಿ ಉಳಿದಿದ್ದು ಹಚಿಕೋ ಕೂಡ ಅವುಗಳಲ್ಲಿ ಒಂದಾಗಿತ್ತು. ಆ ಕಾರಣಕ್ಕೆ ಮತ್ತು ಹಚಿಕೋ ತೋರಿದ್ದ ನಿಷ್ಠೆಯ ಕಾರಣಕ್ಕೆ ಹಚಿಕೋ ಜಪಾನಿಯಲ್ಲಿ ಖ್ಯಾತಿ ಪಡೆಯಿತು. ಎಷ್ಟರಮಟ್ಟಿಗೆಂದರೆ ಅದು ಬದುಕಿದ್ದಾಗ ಜಪಾನಿನ ಶಾಲಾ ಮಕ್ಕಳಿಗೆ ಕೌಟುಂಬಿಕ ನಿಷ್ಠೆಯ ಬಗ್ಗೆ ಪಾಠ ಹೇಳಿಕೊಡಲು ಹಚಿಕೋ ನಾಯಿಯನ್ನೇ ಉದಾಹರಣೆಯಾಗಿ ನೀಡಲಾಗುತ್ತಿತ್ತು.

1935ರಲ್ಲಿ ಹಚಿಕೋ ತೀರಿಕೊಂಡಾಗ ಅದು ರಾಷ್ಟ್ರೀಯ ಸುದ್ದಿಯಾಗಿತ್ತು. ಆ ನಾಯಿಯ ಬಗ್ಗೆ ಜಪಾನಿಯರಲ್ಲಿ ಅದೆಷ್ಟು ಪ್ರೀತಿ ಎಂದರೆ ಅದು ಪ್ರತಿದಿನ ತನ್ನ ಮಾಲೀಕನಿಗೆ ಕಾಯುತ್ತಿದ್ದ ಸ್ಥಳದಲ್ಲೇ ಹಿತ್ತಾಳೆಯ ಪ್ರತಿಮೆಯನ್ನು ಮಾಡಿ ಸ್ಥಾಪಿಸಲಾಗಿದೆ. ಆ ಪ್ರತಿಮೆ ಇರುವ ರೈಲ್ವೆ ನಿಲ್ದಾಣದ ದ್ವಾರಕ್ಕೆ 'ಹಚಿಕೋ ದ್ವಾರ' ಎಂದೇ ನಾಮಕರಣ ಮಾಡಲಾಗಿದೆ.

ಜೊತೆಗೆ ಹಚಿಕೋ ಚರ್ಮದೊಳಕ್ಕೆ ಮೆತ್ತೆ ಇತ್ಯಾದಿಗಳನ್ನು ತುಂಬಿ ಪರಿಷ್ಕರಿಸಿ ಅದನ್ನು ರಾಷ್ಟ್ರೀಯ ಮ್ಯೂಸಿಯಂನಲ್ಲಿ ಪ್ರದರ್ಶಿಸಲಾಗಿದೆ. ಪ್ರೊಫೆಸರ್ ಯುನೋ ಅವರ ಸಮಾಧಿ ಪಕ್ಕದಲ್ಲೇ ಹಚಿಕೋ ನಾಯಿಯ ಸಮಾಧಿಯೂ ಇದೆ.

1987ರಲ್ಲಿ 'ಹಚಿಕೋ ಕತೆ' ಎಂಬ ಜಪಾನಿ ಚಲನಚಿತ್ರವೂ ಬಿಡುಗಡೆಗೊಂಡು ಬಾಕ್ಸ್ ಆಫೀಸ್‌ನಲ್ಲಿ ದಾಖಲೆಯನ್ನು ನಿರ್ಮಿಸಿತ್ತು. ಇವತ್ತಿಗೂ ಜಪಾನಿ ಮಕ್ಕಳಿಗೆ ಹಚಿಕೋ ಕುರಿತ ಹಲವಾರು ಕಥಾ ಪುಸ್ತಕಗಳು ಜನಪ್ರಿಯವಾಗಿದೆ.

ತಾವು ಬದುಕಿದ್ದಾಗ ಪ್ರೊಫೆಸರ್ ಯುನೋ ಅವರು ಹಚಿಕೋ ಬೊಗಳುತ್ತಿರುವುದನ್ನು ರೆಕಾರ್ಡ್ ಮಾಡಿಟ್ಟಿದ್ದರು. ಆದರೆ ಅದು ಹಲವಾರು ಚೂರುಗಳಾಗಿ ಮುರಿದಿತ್ತು. 1994ರಲ್ಲಿ ನಿಪ್ಪಾನ್ ರೇಡಿಯೋ ಅದನ್ನು ಆಧುನಿಕ ತಂತ್ರಜ್ಞಾನ ಬಳಸಿ ರಿಪೇರಿ ಮಾಡಿಸಿ ಪ್ರಸಾರ ಮಾಡಿತು. ಹಚಿಕೋ ತೀರಿಕೊಂಡು ಅವತ್ತಿಗೆ 59 ವರ್ಷಗಳಾಗಿದ್ದರೂ ಅದು ಮತ್ತೊಮ್ಮೆ ಬೊಗಳುವುದನ್ನು ಕೇಳಲು ಲಕ್ಷಾಂತರ ಜಪಾನಿಯರು ಕಿವಿಗೊಟ್ಟಿದ್ದರು!


ಪ್ರತಿವರ್ಷ ಏಪ್ರಿಲ್ 8ರಂದು ಟೋಕಿಯೋದ ಶಿಬುಯ ರೈಲ್ವೆ ಸ್ಟೇಷನ್ನಿನಲ್ಲಿ ಹಚಿಕೋ ನೆನಪಿನ ಕಾರ್ಯಕ್ರಮ ನಡೆಯುತ್ತಿದ್ದು ಅದರಲ್ಲಿ ನೂರಾರು ಜನ ಭಾಗವಹಿಸಿ ಹಚಿಕೊ ಎಂಬ ನಾಯಿಯ ನಿಷ್ಠೆಯನ್ನು ಸ್ಮರಿಸಿಕೊಳ್ಳುತ್ತಾರೆ.

ನಮ್ಮ ಪತ್ರಿಕಾ ತಂಡದಲ್ಲಿ ತುಂಬಾ ಜನ ನಾಯಿ ಪ್ರಿಯರಿದ್ದು ಅವರೆಲ್ಲರಿಗೂ, ಅಷ್ಟೇ ಮುಖ್ಯವಾಗಿ ನಮ್ಮೆಲ್ಲರಿಗಿಂತ ಹೆಚ್ಚು ನಿಷ್ಠೆಯಿಂದ ಪ್ರತಿನಿತ್ಯ ನಮ್ಮ ಕಚೇರಿಗೆ ಹಾಜರಾಗಿ ಮೆಟ್ಟಿಲ ಮೇಲೆ ಕೂರುವ, ನಮ್ಮ ಹುಡುಗರು 'ದತ್ತು' ತೆಗೆದುಕೊಂಡಿರುವ ಬೀದಿನಾಯಿ 'ಕೆಂಚಿ'ಗೂ ಈ ಲೇಖನವನ್ನು ಅರ್ಪಿಸುತ್ತಿದ್ದೇನೆ. ■

ಕರಾವಳಿ: ರೌಡಿ ತಿಮರೋಡಿ ಪುಂಡ ಪುರಾಣಂ!!

ಬೆಳ್ತಂಗಡಿಯ ಎರಡು ಪಾಳೇಗಾರ ಪಟಾಲಮ್ ನಡುವಿನ ಒಣ ಪ್ರತಿಷ್ಠೆ ಭೂದಾಹದ ಬಡಿದಾಟದಲ್ಲಿ ಸೌಜನ್ಯ ರೇಪ್ ಅಂಡ್ ಮರ್ಡರ್ ಪ್ರಕರಣದ ಹೋರಾಟ-ತನಿಖೆ ದಿಕ್ಕು ತಪ್ಪುತ್ತಿದೆಯಾ? ಇಂಥದೊಂದು ಅನುಮಾನವೀಗ ಕರಾವಳಿಯ ಜನರನ್ನು ಬಿಟ್ಟೂಬಿಡದೆ ಕಾಡುತ್ತಿದೆ! ಧರ್ಮಸ್ಥಳದ ಧರ್ಮ ವ್ಯಾಪಾರಿ ವೀರೇಂದ್ರ ಹೆಗ್ಗಡೆ ಮತ್ತು ಹಿಂದೂ ಜಾಗರಣಾ ವೇದಿಕೆಯ ಗೋ ದಂಧೆಗಾರ ಮಹೇಶ ಶೆಟ್ಟಿ ತಿಮರೋಡಿ ನಡುವಿನ ಹಳೆ ಹಗೆಯ ಹೊಗೆ ಸೌಜನ್ಯ ಹೋರಾಟದ ಸುತ್ತ ದಟ್ಟವಾಗಿ ಹಬ್ಬಿರುವುದೇ ಕರಾವಳಿಗರ ಸಂಶಯಕ್ಕೆ ಕಾರಣ.

ಧರ್ಮ ಸಂಸ್ಥಾನದ ದೊರೆಗಳ ದಾದಾಗಿರಿಯಿಂದ ಬೇಸತ್ತಿದ್ದ ಬೆಳ್ತಂಗಡಿಯ ಜನರು ಕೆಚ್ಚಿನಿಂದ ಕಟ್ಟಿದ್ದ 'ಸೌಜನ್ಯಳಿಗೆ ನ್ಯಾಯ' ಹೋರಾಟದಲ್ಲಿ ಘಟಸರ್ಪದಂತೆ ನುಸುಳಿ ಹೀರೋ ಗೆಟಪ್‌ನಿಂದ ಹಾರಾಡಿದವನು ತಿಮರೋಡಿ ಮಹೇಶ. ಸಂಘ ಪರಿವಾರದ ಹೊಡಿ-ಬಡಿ-ಕಡಿ ಸಂಸ್ಕೃತಿಯ ಗರಡಿಯಲ್ಲಿ ಪಳಗಿದ್ದ ಈ ಮತಾಂಧ ಮಸಲತ್ತುಗಾರ ಇದ್ದಕ್ಕಿದ್ದಂತೆ ಸೌಜನ್ಯ ಹೋರಾಟಕ್ಕೆ ನುಗ್ಗಿದ್ದರ ಹಿಂದಿನ ಹಿಡನ್ ಅಜೆಂಡಾಗಳು ಈಗ ಒಂದೊಂದಾಗಿ ಹೊರಬರಲಾರಂಭಿಸಿದೆ. ಸೌಜನ್ಯ ಎಂಬ ಅಮಾಯಕ ಹೆಣ್ಣು ಮಗುವಿನ ಬರ್ಬರ ಅತ್ಯಾಚಾರ-ಹತ್ಯೆಯಿಂದ ತಾತ್ವಿಕವಾಗೇನೂ ತಿಮರೋಡಿ ಕೆರಳಿರಲಿಲ್ಲ. ಆತನಿಗೆ ಹೆಗ್ಗಡೆ ಬಳಗದ ಮೇಲೆ ಸೇಡಿತ್ತೇ ವಿನಃ ಸಾಮಾಜಿಕ ಕಳಕಳಿ-ಬದ್ಧತೆಗಳಿರಲಿಲ್ಲ. ಹೀಗಾಗಿ ಈ ತಿಮರೋಡಿಯ ಡೊಂಕು ಬಾಲದ ಬುದ್ಧಿ ನಳಿಕೆಯಿಂದ ಹೊರತೆಗೆದಂತಾಗಿದೆ!



ತಿಮರೋಡಿ ಜಾತಕ

ಬಡ ಬಂಟರ ಕುಟುಂಬದ ತಿಮರೋಡಿ ಆರನೇ ಈಯತ್ತೆಗೇ ಶಾಲೆಗೆ ದೊಡ್ಡ ನಮಸ್ಕಾರ ಹಾಕಿ 'ಬೈಲಿಗೆ' ಬಂದಿದ್ದ! ಅಲ್ಲಿ-ಇಲ್ಲಿ ಅಂಡಲೆದು ಕೊನೆಗೆ ಸೇರಿದ್ದು ಮುಂಬೈ ಮಹಾನಗರಿ. ಅಲ್ಲಾತ ಹೋಟೇಲ್ ಚಾಕರಿ ಮಾಡುತ್ತಿದ್ದ. ಮುಂಬೈಯಲ್ಲಿ ದಾದಾಗಿರಿ ವಿದ್ಯೆಯನ್ನೆಲ್ಲ ಕಲಿತ ಈ ಭೂಪ ಅಲ್ಲಿ 'ಪೆಟ್ಟಸ್ಟ್' ಎಂದೇ ಹೆಸರುವಾಸಿಯಾಗಿದ್ದನಂತೆ. ಅಂತಿಮವಾಗಿ ಈ ಗೂಂಡಾಗಿರಿಯೇ ಆತನನ್ನು ಊರಿಗೆ (ಬೆಳ್ತಂಗಡಿ) ಓಡಿಸಿತು. 1996ರಲ್ಲಿ ಮುಂಬೈನಲ್ಲಾದ ಒಂದು ಮಾರಾಮಾರಿಯಲ್ಲಿ ಹೊಡೆತ ತಿಂದು ಗತಿಯಿಲ್ಲದೆ ತಿಮರೋಡಿ ಊರಿಗೆ ಬರುವಂತಾಗಿತ್ತು, ಅಲ್ಲಿದ್ದರೆ ಬದುಕುವುದೇ ಅನುಮಾನ ಎಂದಾತನಿಗೆ ಖಾತ್ರಿಯಾಗಿತ್ತು.

1990ರ ದಶಕದ ಮಧ್ಯ ಭಾಗವೆಂದರೆ ಕರಾವಳಿ ಕರ್ನಾಟಕದಲ್ಲಿ ಕೋಮು ರಾಜಕಾರಣ ಉಚ್ಛ್ರಾಯ ಯುಗ. ಹಿಂದೂ ಜಾಗರಣಾ ವೇದಿಕೆಯ ವಸೂಲಿ-ಮಾರಾಮಾರಿ ದಂಧೆಗೆ ಹೇಳಿಮಾಡಿಸಿದಂತಿದ್ದ ತಿಮರೋಡಿಯ ಬುದ್ಧಿ-ದೇಹ ಆರೆಸ್ಸೆಸ್ ಡಾನ್ ಕಲ್ಲಡ್ಕ ಭಟ್ಟರಿಗೆ ಆಕರ್ಷಕವಾಗಿ ಕಂಡಿತು. ಇಂಥ ಹುಂಬ ಶೂದ್ರರನ್ನು ಸಾಬಿಗಳ ವಿರುದ್ಧ ಛೂಬಿಟ್ಟು ಬೇಳೆ ಬೇಯಿಸಿಕೊಳ್ಳುವ ಸಂಘ ಪರಿವಾರದ ಮುಂದಾಳುಗಳಿಗೆಲ್ಲ ತಿಮರೋಡಿ ಕಲೆಕ್ಷನ್ ಡಾರ್ಲಿಂಗ್‌ನಂತಾಗಿ ಹೋದ! ಹಿಂದೂ ಜಾಗರಣಾ ವೇದಿಕೆಯ ಪುತ್ತೂರು ಜಿಲ್ಲೆ (ಇದು ಸಂಘ ಪರಿವಾರದ ಜಿಲ್ಲೆಯಷ್ಟೇ) ಸಂಚಾಲಕನಾಗಿ ತಿಮರೋಡಿಗೆ ದೀಕ್ಷೆಯೂ ಕೊಡಲಾಯ್ತು.

ಇಂಥದೊಂದು 'ಸ್ಥಾನ-ಮಾನ' ಸಿಕ್ಕಿದ್ದೇ ತಡ, ತಿಮರೋಡಿಯ ಕೇಸರಿ ಶಾಲಿಗೆ ನೆತ್ತರಿನ ಬಣ್ಣ ಬಂದುಬಿಟ್ಟಿತು. 'ರಕ್ತೇಶ್ವರ'ನಂತಾದ ಈತ ತನ್ನ ಗೂಂಡಾ ಗ್ಯಾಂಗನ್ನು ಸಾಬರ ಮೇಲೆ ಛೂಬಿಟ್ಟು ಹಫ್ತಾ ವಸೂಲಿ ಮಾಡತೊಡಗಿದ. ಗೋ ರಕ್ಷಣೆಯ ನೇಪದಲ್ಲಿ ರಹಸ್ಯವಾಗಿ ಗೋ ಮಾರಾಟ ಜಾಲ ಕಟ್ಟಿಕೊಂಡ. ಜಾನುವಾರು ಸಾಗಾಣಿಕೆದಾರರು ಹಣ ಕೊಡದಿದ್ದರೆ ತನ್ನ ಗ್ಯಾಂಗ್ ಬಿಟ್ಟು ಹೊಡೆಸತೊಡಗಿದ. ಈ ಗೋ ದಂಧೆ ಅದೆಷ್ಟು ಹುಲುಸಾಗಿ ಬೆಳೆಯಿತೆಂದರೆ, ನೋಡು-ನೋಡುತ್ತಿದ್ದಂತೆಯೇ ಅಬ್ಬೇಪಾರಿಯಂಥ ತಿಮರೋಡಿ ಕೋಟಿಗೆ ತೂಗತೊಡಗಿದ! ಬೆಳ್ತಂಗಡಿ ಸುತ್ತಲಿನ ಆರೇಳು ಹಳ್ಳಿಗಳಲ್ಲಿ ಲ್ಯಾಂಡ್ ಲಾರ್ಡ್ ಆಗಿಹೋದ!! ಜತೆಗೆ ಸರ್ಕಾರಿ ಭೂಮಿ ಕಂಡ-ಕಂಡಲ್ಲಿ ಕಬಳಿಸಿ ಬೇಲಿ ಜಡೆದುಕೊಂಡ!

ರೌಡಿ ಶೀಟರ್

'ನಾಯಿಗಳಿಗೆ ಮತ್ತು ಮುಸ್ಲಿಮರಿಗೆ ಪ್ರವೇಶವಿಲ್ಲ' ಎಂಬ ಫಲಕ ತನ್ನ ಮನೆಯ ಗೇಟಿಗೆ ನೇತು ಹಾಕಿಕೊಂಡಿದ್ದ ತಿಮರೋಡಿ ಕಮ್ಯುನಲ್ ಅಟ್ಟಹಾಸಕ್ಕೆ ಇಡೀ ಬೆಳ್ತಂಗಡಿ ಬೆದರಿಹೋಯ್ತು! ಎಮ್ಮೆಲ್ಲೆ ಆಗುವ ಆಸೆಯಿಂದ ಅನೈತಿಕ-ಪೊಲೀಸ್‌ಗಿರಿ ಬೇಕಾಬಿಟ್ಟಿಯಾಗಿ ನಡೆಸತೊಡಗಿದ್ದ ಈತನ ಹಾರಾಟಕ್ಕೆ ಬಿಜೆಪಿ ಮತ್ತು ಮೇಲ್ವರ್ಗದ ನಾಯಕಮಣಿಗಳ ಕಣ್ಣಿಗೇ ಕತ್ತಲೆ ಬರುವಂತಾಯ್ತು. ತಮ್ಮ ಶಾಸಕಗಿರಿಯ ಕನಸಿಗೆ ಕೊಳ್ಳಿ ಇಡುತ್ತಿರುವ ಈ ತಿಮರೋಡಿಗೆ ಖೆಡ್ಡಾ ರೆಡಿ ಮಾಡಿಬಿಟ್ಟ. ಪ್ರತಾಪಸಿಂಹ ನಾಯಕ್ ಎಂಬ ಚೆಡ್ಡಿ ಚತುರ.





ತಿಮರೋಡಿ ಕಮ್ಯುನಲ್ ಚಟುವಟಿಕೆಯೇ ಚೆಡ್ಡಿಗಳಿಗೆ ಆತನ ಹಣಿಯಲು ಅಸ್ತ್ರವಾಯ್ತು. ಸದಾನಂದಗೌಡ, ಕಲ್ಲಡ್ಕ ಭಟ್ಟರಂಥವರ ಹಿಡಿದುಕೊಂಡ ಪ್ರತಾಪ್ ನಾಯಕ್ ಬೆಳ್ತಂಗಡಿಯಲ್ಲಿ ತಿಮರೋಡಿ 'ಆಟ' ಮುಗಿಸಲು ಸ್ಕೆಚ್ ಹಾಕಿದರು. ತಿಮರೋಡಿ ಮೇಲೆ ವ್ಯವಸ್ಥಿತವಾದ ರೌಡಿ ಶೀಟ್ ಹಾಕಲಾಯ್ತು. ಕ್ರಿಮಿನಲ್ ತಿಮರೋಡಿ ಜತೆಗಿಟ್ಟುಕೊಂಡರೆ ಬಿಜೆಪಿಗೆ ಮಾರಕ ಎಂಬ ವಾತಾವರಣ ಸೃಷ್ಟಿಸಿದ ಜನಿವಾರಿಗಳು ಆತನನ್ನು ಅವೈಡ್ ಮಾಡುತ್ತ, ಆತನ ಹೆಸರಿಗೆ ಕಡು ಕಪ್ಪು ಮಸಿ ಹಚ್ಚುತ್ತಾ ಹೋದರು. ಹುಚ್ಚು ಹಿಡಿದಂತಾದ ತಿಮರೋಡಿ ಸಂಘ ಪರಿವಾರದ ಸಹವಾಸ ಬಿಟ್ಟು ಹೊರಬಂದ. 2004ರ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಪಕ್ಷೇತರನಾಗಿ ನಿಂತು ಒಂದಿಷ್ಟು ಓಟು ಬಿಜೆಪಿ ಬುಟ್ಟಿಯಿಂದ ತೆಗೆದುಕೊಂಡ.

ದೇವದೂತರ ಜತೆ ಜಗಳ!

ಹಾಗೆ ಸಂಘ ಪರಿವಾರದಿಂದ ದೂರವಾದ ತಿಮರೋಡಿ ಟ್ರೇಡ್‌ಮಾರ್ಕ್ ಕೇಸರಿ ಶಾಲು, ಕೆಂಪು ಕುಂಕುಮ ಮಾತ್ರ ಬಿಡಲಿಲ್ಲ. ಈ ಗೆಟಪ್ಪಿನಲ್ಲಿ ಬ್ರಹ್ಮಕಲಶೋತ್ಸವ, ದೇವಸ್ಥಾನ ಸ್ಥಾಪನೆ, ಗಣೇಶೋತ್ಸವ ಮಾಡುವ ಉದ್ಯೋಗ ಮುಂದುವರಿಸಿದ್ದ. ಇಂಥ ದೇವಕಾರ್ಯಗಳಿಗೆ ಜನರಿಂದ ಕಡ್ಡಾಯವಾಗಿ ದೇಣಿಗೆ ವಸೂಲಿ ಮಾಡುವುದು, ಕೊಡದವರಿಗೆ ಶಿಷ್ಯರಿಂದ ಬಡಿಸುವುದು ತಿಮರೋಡಿಯ ಧಾರ್ಮಿಕ ಬಿಸ್ನೆಸ್‌ನ ತಂತ್ರಗಾರಿಕೆಯಾಯ್ತು. ಈ ಉತ್ಸವಕ್ಕೆಲ್ಲ ಧರ್ಮಸ್ಥಳದ ದೊರೆಗಳಿಂದಲೂ ಡೊನೇಷನ್ ತಿಮರೋಡಿ ತರುತ್ತಿದ್ದ. ಧರ್ಮ ವ್ಯಾಪಾರಿಯನ್ನು ಮುಖ್ಯ ಅತಿಥಿಯಾಗಿ ಉತ್ಸವಕ್ಕೆ ಕರೆ ತರುತ್ತಿದ್ದ.

ಇಷ್ಟು ಅನ್ಯೋನ್ಯವಾಗಿದ್ದ ತಿಮರೋಡಿ ಮತ್ತು ದೇವದೂತರ ನಡುವಿನ ಸಂಬಂಧ ಮೂರ್ನಾಲ್ಕು ವರ್ಷದ ಹಿಂದೆ ಇದ್ದಕ್ಕಿದ್ದಂತೆಯೇ ಹಾಳಾಯ್ತು. ಈ ಧರ್ಮಾತ್ಮರ ದೋಸ್ತಿಗೆ ಭಂಗ ತಂದಿದ್ದು ಭೂದಾಹ! ಉಜಿರೆಯ ಸಿದ್ಧವನದ ಪಕ್ಕದ 45 ಸೆಂಟ್ಸ್ ಜಮೀನನ್ನು ತಿಮರೋಡಿ ಬರೋಬ್ಬರಿ 2 ಕೋಟಿಗೆ ಹಮೀದ್ ಎಂಬವರಿಂದ ಖರೀದಿಸಿದ್ದ. ಸಾಬಿಗಳನ್ನು ಕೀಳಾಗಿ ಕಂಡು ಪಾಲಿಟಿಕಲ್ ಮೈಲೇಜ್ ಪಡೆವ ತಿಮರೋಡಿಗೆ ಅವರ ಹೆಣ್ಣು-ಹೊನ್ನು-ಮಣ್ಣಿಂದ ಮಡಿ-ಮೈಲಿಗೆಯೇನಿಲ್ಲ. ಈ 45 ಸೆಂಟ್ಸ್ ಜಾಗಕ್ಕೆ ಹೋಗಿ-ಬರಲು ದಾರಿ ಇರಲಿಲ್ಲ.

ಧರ್ಮಸ್ಥಳದ ಧರ್ಮ ವ್ಯಾಪಾರಿಗಳ ಜಾಗದಿಂದಲೇ ಸದ್ರಿ ಸ್ಥಳಕ್ಕೆ ಓಡಾಡಬೇಕಿತ್ತು. ಇದು ಖರೀದಿದಾರ ತಿಮರೋಡಿಗೆ ಮೊದಲು ತಿಳಿಯಲಿಲ್ಲ. ಆಸ್ಪತ್ರೆಯೊಂದನ್ನು ಕಟ್ಟುವ ಯೋಚನೆಯಲ್ಲಿದ್ದ ಧರ್ಮ ದೊರೆಗಳು ತಿಮರೋಡಿಯಲ್ಲಿ ಆತ ಜಾಗ ಮಾರಾಟಕ್ಕೆ ಕೇಳಿದರು. ಈತ ಮಾರ್ಕೆಟ್‌ನಲ್ಲಿದ್ದ ಬೆಲೆಗಿಂತ ಎರಡು ಪಟ್ಟು ಹೆಚ್ಚು ರೇಟ್ ಕೇಳಿದ. ಕೆರಳಿದ ಧರ್ಮ ದೇವತೆಗಳು ತಿಮರೋಡಿ ಜಾಗಕ್ಕೆ ಓಡಾಡಲು ದಾರಿ ಕೊಡದೆ ಬೇಲಿ ಹಾಕಿದರು. ಕಂಗಾಲಾದ ತಿಮರೋಡಿಗೆ ಆಗ ತಿಳಿಯಿತು ತನ್ನ ಜಮೀನಿಗೆ ಧರ್ಮ ವ್ಯಾಪಾರಿಗಳ ಜಾಗವೇ ದಾರಿ ಎಂದು! ಹುಂಬ ತಿಮರೋಡಿ ಬೇಲಿ ಕಿತ್ತೆಸೆದ. ಧರ್ಮ ಸಂಸ್ಥಾನದವರು ಮತ್ತೆ ಬೇಲಿ ಹಾಕಿ ದಾರಿ ಬಂದ್ ಮಾಡಿದರು. ಹೀಗೆ ಬೇಲಿ ಹಾಕುವುದು-ತೆಗೆಯುವುದು, ಜಂಗೀ ಕುಸ್ತಿಯಾಗುವುದು ಆಗುತ್ತಲೇ ಇದೆ.

ಧರ್ಮಸ್ಥಳದವರು ಹತ್ತಿರದ ಬೇರೆ ಜಾಗ ಖರೀದಿಸಿ ಆಸ್ಪತ್ರೆ ಕಟ್ಟಿಸಿದರು. ಹಾಗಂತ ತಿಮರೋಡಿಗೆ ತೊಂದರೆ ಕೊಡುವುದೇನೂ ನಿಲ್ಲಲಿಲ್ಲ. ಇದರಿಂದ ಹತಾಶನಾದ ತಿಮರೋಡಿ ಬೇರೆ ದಾರಿಯೇ ಇಲ್ಲದೆ ದೇವರ ಕಡೆಯವರು ಕೇಳಿದ ರೇಟಿಗಿಂತ ಕಡಿಮೆ ಮೊತ್ತಕ್ಕೆ ಜಾಗ ಮಾರುವ ಅನಿವಾರ್ಯತೆ ನಿರ್ಮಾಣ ಆಯಿತು. ತನಗೆ ಹಾನಿ ಮಾಡಿದ್ದ ಧರ್ಮ ಧೂತರ ಮೇಲೆ ಸಿಟ್ಟಾದ ತಿಮರೋಡಿ ಸೇಡು ತೀರಿಕೆಗೆ ಸಮಯ ಸಾಧಿಸುತ್ತಲೇ ಇದ್ದ. ಆಗ ಆತನಿಗೆ ಸಿಕ್ಕ ಆಯುಧವೇ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಕೇಸ್!!

ಸೌಜನ್ಯಾಸ್ತ್ರ

ಸೌಜನ್ಯ ಅತ್ಯಾಚಾರ ಮತ್ತು ಕಗ್ಗೊಲೆ ಬಗ್ಗೆ ನಿಷ್ಪಕ್ಷಪಾತವಾದ ತನಿಖೆ ಆಗಬೇಕೆಂದು ಕಮ್ಯುನಿಸ್ಟರು ಒಂದು ವರ್ಷದಿಂದ ಹೋರಾಟ ನಡೆಸುತ್ತಲೇ ಇದ್ದರು. 'ಪತ್ರಿಕೆ'ಯೂ ಮೊಟ್ಟ ಮೊದಲು ವಿಸ್ತøತ ವರದಿ ಪ್ರಕಟಿಸಿ ಜನಜಾಗೃತಿ ಮಾಡಿಸಿತ್ತು. ಆಗೆಲ್ಲ ಈ ತಿಮರೋಡಿ ತಲೆ ಕೆಡಿಸಿಕೊಂಡಿರಲಿಲ್ಲ. 9-10-2013ರಂದು ಸಿಪಿಐ(ಎಂ)ನ ಜಿಲ್ಲಾ ಮಟ್ಟದ ಹೋರಾಟ ಸಭೆಗೆ 4000 ಜನ ಸೇರಿದ್ದು ಕಂಡು ತಿಮರೋಡಿಗೆ ಉಮೇದಿ ಬಂತು. ಸೌಜನ್ಯ ಕೇಸ್ ಕೈಗೆತ್ತಿಕೊಂಡರೆ ತನಗೆ ತೊಂದರೆ ಕೊಟ್ಟು ಭೂಮಿ ಕಡಿಮೆ ಬೆಲೆಗೆ ಮಾರುವಂಥ ದುರ್ಗತಿ ತಂದ ದೇವಧೂತರಿಗೆ ಬುದ್ಧಿ ಕಲಿಸಬಹುದೆಂದುಕೊಂಡ.

ತಕ್ಷಣ ಟಿವಿ ಚಾನಲ್‌ಗಳ ಸಂಪರ್ಕಿಸಿ ಸಂದರ್ಶನ ನೀಡತೊಡಗಿದ. ಧರ್ಮಸ್ಥಳ ದೊರೆಗಳ ಮೇಲೆ ನೇರಾನೇರ ಆರೋಪ ಹೊರಿಸಿ ಸೌಜನ್ಯ ರೇಪ್ ಮತ್ತು ಮರ್ಡರ್‌ಗೆ ಆ ದೇವರ ಪರಿವಾರದವರೇ ಹೊಣೆಯೆಂದು ಒದರಾಡಿದ. ಕಮ್ಯುನಿಸ್ಟರ 'ಅಂದು ಪದ್ಮಲತಾ ಇಂದು ಸೌಜನ್ಯ' ಎಂಬ ಘೋಷಣೆಯನ್ನೇ ಹೈಜಾಕ್ ಮಾಡಿದ. ಜನಪರ ಹೋರಾಟಗಾರನಂತೆ ನಟಿಸುತ್ತ 'ಸೌಜನ್ಯ ಹೋರಾಟ'ದ ಹೀರೋ ಆಗಿಹೋದ. ಈತ ಹೋದಲ್ಲೆಲ್ಲ ದೇವದೂತರ ಮೂರ್ನಾಲ್ಕು ದಶಕದ ನಿರಂತರ ಪಾಳೆಗಾರಿಕೆಯಿಂದ ರೋಸತ್ತು ಹೋಗಿದ್ದ ಜನರು ಸಾವಿರ-ಸಾವಿರ ಸಂಖ್ಯೆಯಲ್ಲಿ ಸೇರತೊಡಗಿದರು. ಇವರೆಲ್ಲ ಧರ್ಮ ವಸಾಹತುಶಾಹಿಗಳ ಕುಕೃತ್ಯ ಖಂಡಿಸಿ ಹೋರಾಟಕ್ಕೆ ಬರುತ್ತಿದ್ದರೇ ಹೊರತು ತಿಮರೋಡಿಯ ಮೂತಿ ನೋಡಿ ಅಲ್ಲ. ಇದು ಅರ್ಥವಾಗದ ಎಡವಟ್ಟು ತಿಮರೋಡಿ ತಾನೊಬ್ಬ ಮಹಾನ್ ನಾಯಕನೆಂಬ ಭ್ರಮೆಗೆ ಬಿದ್ದ!

ಹೋರಾಟದ ಹಣದ ಲೆಕ್ಕವೆಲ್ಲಿ?

ಸೌಜನ್ಯ ಹತ್ಯೆ ವಿರುದ್ಧ ನಡೆದ ಹೋರಾಟ ಐತಿಹಾಸಿಕ. ಧರ್ಮಸಂಸ್ಥಾನದ ತಳಪಾಯವನ್ನೇ ನಡುಗಿಸಿದ ಹೋರಾಟವದು. ದೇವರ ಹೆಸರಲ್ಲಿ ಅಮಾಯಕ ಹೆಂಗಸರ ಮಾನ-ಪ್ರಾಣ ಹಾಳು ಮಾಡುತ್ತಿದ್ದ, ಅಕ್ರಮವಾಗಿ ದುಡ್ಡು-ಭೂಮಿ ದೋಚುತ್ತಿದ್ದ ಧರ್ಮ ವ್ಯಾಪಾರಿಗಳ ಕುಟುಂಬದ ಮುಖವಾಡ ಕಳಚಿದ ಕೆಚ್ಚೆದೆಯ ಕಿಚ್ಚದು! ಸಂದರ್ಭದ ಪಿತೂರಿಯಿಂದ ಆ ಹೋರಾಟದ ನಾಯಕನಾದವನು ತಿಮರೋಡಿ. ಈ ಹೋರಾಟ ಕೀರ್ತಿ-ಯಶಸ್ಸು ತನ್ನದೆಂದು ಬೀಗುವ ತಿಮರೋಡಿ ಹೋರಾಟಕ್ಕೆ ಸಂಗ್ರಹವಾದ ಹಣದ ಲೆಕ್ಕ ಕೇಳಿದರೆ ಮಾತ್ರ ಸಮರ್ಪಕ ಉತ್ತರ ಕೊಡದೆ ಕಳ್ಳನಂತಾಡುತ್ತಾನೆ.

ಸೌಜನ್ಯ ಹೋರಾಟದ ಪ್ರತಿ ಸಭೆಗೂ ಸಾವಿರಾರು ಜನ ಸೇರುತ್ತಿದ್ದರು. ಅಲ್ಲೆಲ್ಲ ತಿಮರೋಡಿ ಗ್ಯಾಂಗ್ ಹೈಕೋರ್ಟಿಗೆ ಹೋಗಲು, ಸುಪ್ರೀಂಕೋರ್ಟಿಗೆ ಹೋಗಲು, ಸಿಬಿಐ ತನಿಖೆಗೆ ಒತ್ತಾಯಿಸಿ ಸರ್ಕಾರದ ಮಟ್ಟದಲ್ಲಿ ಒತ್ತಡ ತರಲೆಂದು ಲಕ್ಷಾಂತರ ರೂ. ದೇಣಿಗೆ ಸಂಗ್ರಹಿಸುತ್ತಿತ್ತು. ಸುಪ್ರೀಂಕೋರ್ಟ್ ನಿಗಾದಲ್ಲಿ ಸಿಬಿಐ ತನಿಖೆ ನಡೆಸುವಂತೆ ಮಾಡ್ತೇನೆಂದು ತಿಮರೋಡಿ ಭೋಂಗು ಬಿಟ್ಟಿದ್ದೇ ಬಿಟ್ಟಿದ್ದು. ಹೋರಾಟದ ಒಂದು ಘಟ್ಟದಲ್ಲಿ 30 ಸಾವಿರ ಜನ

ಮಹಿಳೆಯರಿಗೆ ಶನಿ

ಭಾನ್ಗಡಿ ಭೂಪ ತಿಮರೋಡಿ ಮಹೇಶ್ ಶೆಟ್ಟಿ ಈಗ ಬೆಳ್ತಂಗಡಿಯಾದ್ಯಂತ ಅಷ್ಟೇ ಅಲ್ಲ, ಇಡೀ ಕರಾವಳಿಯಲ್ಲಿ ಸುದ್ದಿಯಲ್ಲಿದ್ದಾನೆ. ಈ ಬಾರಿ ಆತನ ಅಸಲೀ ಅವತಾರ ಅನಾವರಣ ಆಗಿದೆ. ಸೌಜನ್ಯ ಕೇಸಲ್ಲಿ ಸೌಜನ್ಯದ ಮುಖವಾಡ ಹಾಕಿಕೊಂಡಿದ್ದ ತಿಮರೋಡಿ ಬಿಜೆಪಿಗೆ ಸೇರ್ಪಡೆಯಾಗುತ್ತಲೇ ಕೇಸರಿ ವಿಷ ಕಾರುತ್ತಿದ್ದಾನೆ! ಮಹಿಳೆಯರ ಬಗ್ಗೆ ಗೌರವವಿಲ್ಲದ ತಿಮರೋಡಿ ಸೌಜನ್ಯ ಹೋರಾಟದಲ್ಲಿ ಕಾಣಿಸಿಕೊಂಡಾಗ ಆತನ 'ಬಲ್ಲವರು' ಮುಸಿಮುಸಿ ನಕ್ಕಿದ್ದರು.

ಈ ಹಿಂದೂ ವೀರ ಅನೈತಿಕ-ಪೊಲೀಸ್‌ಗಿರಿ ನೆಪದಲ್ಲಿ ಹಿಂದೂ-ಮುಸ್ಲಿಮ್ ಹುಡುಗಿಯರ ಮಾನಕ್ಕೇ ಕೈಹಾಕಿದವ! ತಿಮರೋಡಿಯ ತಮ್ಮನೊಬ್ಬ ವಿದೇಶದಲ್ಲಿದ್ದಾನೆ. ಆತನ ಹೆಂಡತಿ ಸುರಸುಂದರಿ. ಆಕೆಯ ಮೇಲೆ ತಿಮರೋಡಿಯ ಯಾವ ದೃಷ್ಟಿ ಬಿದ್ದಿದೆಯೋ ಆ ಏಕಪತ್ನಿ ವ್ರತಸ್ಥ ಶ್ರೀರಾಮಚಂದ್ರನಿಗೇ ಗೊತ್ತು! ತಮ್ಮನಿಗೆ ಹೆಂಡತಿ ಬಗ್ಗೆ ಇಲ್ಲಸಲ್ಲದ್ದು ಹೇಳಿ ತಲೆ ಕೆಡಿಸಿದ್ದಾನೆ. ಗಂಡನಿಗೀಗ ಹೆಂಡತಿ ಮೇಲೆ ವಿನಾಕಾರಣ ಸಂಶಯ. ಆಕೆ ಗಂಡ-ಗಂಡನ ಅಣ್ಣನ ಪ್ರತ್ಯಕ್ಷ-ಪರೋಕ್ಷ ಕಾಟ ತಾಳಲಾರದೆ ಕಂಗಾಲಾಗಿ ಹೋಗಿದ್ದಾಳೆ. ಮಹಿಳಾ ಸಂಘಟನೆಯವರನ್ನೂ ಕದ್ದು-ಮುಚ್ಚಿ ಸಂಧಿಸಿ ಸಂಕಟ ಹೇಳಿಕೊಳ್ಳುತ್ತಿದ್ದಾಳೆ. ತಿಮರೋಡಿ ಆಕೆಯ ಮೇಲೆ ಸದಾ ನಿಗಾ ಇಟ್ಟಿದ್ದಾನೆ.

ಕುಂಜರ್ಪ ಗ್ರಾಮದ ಶಶಿಕಲಾ ಶೆಟ್ಟಿಯನ್ನು ತಿಮರೋಡಿ ಸತಾಯಿಸಿದ ಪರಿಯಂತೂ ಹೇಳತೀರದು. ಕಳೆದ ಮೇ ತಿಂಗಳಲ್ಲಿ ಈಕೆಯ ಅಡಿಕೆ-ತೆಂಗು-ರಬ್ಬರ್ ತೋಟದಲ್ಲೊಂದು ದೇವಸ್ಥಾನ ಕಟ್ಟಿ ಮಹಾ ಮೊಕ್ತೇಸರನಾಗುವ ತಲಬು ತಿಮರೋಡಿಗೆ ಕಾಡಿತ್ತು. ರಾತ್ರಿ ಬೆಳಗಾಗುವುದರಲ್ಲಿ ಆಕೆಯ ತೋಟದ ಗಿಡ-ಮರಗಳ ಕಡಿದು ಜಾಗ ಮಾಡಿಕೊಂಡು ದೇವಸ್ಥಾನಕ್ಕೆ ಸಿದ್ಧತೆ ಮಾಡಿದ್ದ ತಿಮರೋಡಿ. ಶಶಿಕಲಾ ಬೆಳ್ತಂಗಡಿ ಠಾಣೆಗೆ ಕಂಪ್ಲೇಂಟು ಕೊಟ್ಟರೂ ತಿಮರೋಡಿಯ ಮಿತ್ರನಾದ ಸಿಪಿಐ ಬಿ.ಆರ್. ಲಿಂಗಪ್ಪ ಅದನ್ನು ಪಡೆಯಲು ನಿರಾಕರಿಸಿದ್ದ. ಸಿವಿಲ್ ಕೇಸಾದ್ದರಿಂದ ಕೋರ್ಟಿಗೆ ಹೋಗು ಎಂದು ದಬಾಯಿಸಿ ಕಳಿಸಿದ್ದ.

ಬರೀ ಹನ್ನೊಂದೇ ದಿನದಲ್ಲಿ ತಿಮರೋಡಿ ದೇವಸ್ಥಾನ ಕಟ್ಟಿಸಿದ್ದ. ದೇವಸ್ಥಾನದ ಉದ್ಘಾಟನಾ ಸಂದರ್ಭದಲ್ಲಿ ರೌಡಿಶೀಟರ್ ತಿಮರೋಡಿ ಮೇಲೆ ಜಾಮೀನು ರಹಿತ ವಾರಂಟ್ ಬೇರೆ ಇತ್ತು. ಆದರೆ ತಿಮರೋಡಿಯ ಹಿತೈಷಿಗಳಾದ ಬೆಳ್ತಂಗಡಿ ಪೊಲೀಸರು ಆತನ ಮುಟ್ಟಲಿಲ್ಲ. ಶಶಿಕಲಾರ ದೂರಿಗೂ ಸ್ಪಂದಿಸಲಿಲ್ಲ. ಆಕೆ ಅನಿವಾರ್ಯವಾಗಿ ಹೈಕೋರ್ಟಿಗೆ ಹೋಗಬೇಕಾಯಿತು. ನ್ಯಾಯಾಲಯ ಈಗ ಕರ್ತವ್ಯಲೋಪಮಾಡಿರುವ ದ.ಕ. ಎಸ್ಪಿ ಡಾ. ಶರಣಪ್ಪ, ಬೆಳ್ತಂಗಡಿ ಸಿಪಿಐ ಲಿಂಗಪ್ಪ ಮತ್ತು ಅಂದು ಕರ್ತವ್ಯದಲ್ಲಿದ್ದ ಎಎಸ್‌ಐ ಬಾಬು ಗೌಡರನ್ನು ಅಮಾನತುಗೊಳಿಸಿ ತನಿಖೆ ನಡೆಸುವಂತೆ ಗೃಹ ಇಲಾಖೆಗೆ ಸೂಚಿಸಿದೆ.

ತಿಮರೋಡಿಯ ಇಂಥ ತರಲೆ ಉಜಿರೆಯ ಪೆಡುಮೆಟ್ಟಾಯ ಯಜಮಾನಿಕೆಯ ದೇವಸ್ಥಾನದ 14 ಎಕರೆ ಜಾಗದ ವಿವಾದದಲ್ಲೂ ನಡೆದಿದೆ. ಆತ ಕಾಲಿಟ್ಟಲ್ಲೆಲ್ಲ ಬಾರಾ ಭಾನ್ಗಡಿಯೇ!

ಸೇರಿದ್ದರು. ಆಗ 100 ಕ್ವಿಂಟಾಲ್ ಅಕ್ಕಿ ಸಂಗ್ರಹವಾಗಿತ್ತು! ಈ ಅಕ್ಕಿ ಬೆಲೆಯೂ ಸೇರಿ ಅಂದು ಒಂದು ಅಂದಾಜಿನಂತೆ 20 ಲಕ್ಷಕ್ಕಿಂತ ಹೆಚ್ಚು ದುಡ್ಡು ಬಟ್ವಾಗಿತ್ತು. ಈವರೆಗೆ ಸರಿ ಸುಮಾರು 35 ಲಕ್ಷವಾದರೂ ಹಣ ಜಮೆಯಾಗಿರುವ ಅಂದಾಜು ಹೋರಾಟವನ್ನು ನಿಕಟವಾಗಿ ನೋಡಿದವರು ಮಾಡುತ್ತಿದ್ದಾರೆ.

ಆದರೆ ಹಣದ ಲೆಕ್ಕ ಮಾತ್ರ ತಿಮರೋಡಿ ಕೇಳಿದರೂ ಕೊಡುವ ಧೈರ್ಯ ಮಾಡುತ್ತಿಲ್ಲ. 'ಲೆಕ್ಕ-ಪತ್ರ ಬೇಕಿದ್ದರೆ ಸೌಜನ್ಯಳ ತಾಯಿ-ತಂದೆಯಲ್ಲಿ ಕೇಳಿ' ಅಂತಾನೆ. ಹಾಗಂತ ಸೌಜನ್ಯ ಕುಟುಂಬಕ್ಕೆ ಬಿಡಿಕಾಸೂ ಕೊಟ್ಟಿಲ್ಲ. ಸೌಜನ್ಯಳ ಪಾಲಕರನ್ನು ಹಿಡಿತದಲ್ಲಿಟ್ಟುಕೊಂಡಿರುವ ತಿಮರೋಡಿ ಅವರನ್ನು ಹಣದ ವಿಷಯದಲ್ಲಿ ಯಾರೊಂದಿಗೂ ಮಾತಾಡದಂತೆ ಮಾಡಿದ್ದಾನೆ. ಸೌಜನ್ಯಳ ಹೆತ್ತವರು "ಮೊದಲು ನ್ಯಾಯ ಸಿಗಲಿ... ಆಮೇಲೆ ಹಣದ ಲೆಕ್ಕಚಾರ ಕೊಡ್ತೇವೆ...." ಎನ್ನುತ್ತಿದ್ದಾರೆ. ಸುಪ್ರೀಂ ಉಸ್ತುವಾರಿಯಲ್ಲಿ ಸಿಬಿಐ ತನಿಖೆಯು ಭೋಂಗು ಬಿಟ್ಟ ಅನ್‌ಪಡ್ ತಿಮರೋಡಿಗೆ ಕಾನೂನಿನ-ಕೋರ್ಟಿನ ಜ್ಞಾನ ಒಂಚೂರೂ ಇಲ್ಲ. ಹೀಗಾಗಿ ತಿಮರೋಡಿ ತರಲೆಯಿಂದಾಗಿ ಸೌಜನ್ಯ ಕೇಸ್ ಹೋರಾಟ-ತನಿಖೆ ದಾರಿ ತಪ್ಪುವಂತಾಗಿದೆ. ಹಾಗೆಂಬುದು ಸಾಮಾಜಿಕ ಬದ್ಧತೆಯಿರುವ ನ್ಯಾಯಕ್ಕೆ ಹಂಬಲಿಸುವ ಬೆಳ್ತಂಗಡಿ ಜನರ ಅನಿಸಿಕೆ. ಒಂದಂತೂ ಖರೆ. ಹಣದ ಪ್ರಶ್ನೆಗೆ ಉತ್ತರ ಕೊಡಬೇಕಾಗಿರುವುದು ತಿಮರೋಡಿಯೇ ಹೊರತು ಬೇರ್‍ಯಾರಲ್ಲ!

ಅನೈತಿಕ ಪೊಲೀಸ್ ಪುಂಡ

ಕಳೆದ ಅಸೆಂಬ್ಲಿ ಎಲೆಕ್ಷನ್ ಹೊತ್ತಲ್ಲಿ ತಿಮರೋಡಿ ಬೆಳ್ತಂಗಡಿಯಿಂದ ಯಡ್ಡಿ ಮಹಾತ್ಮನ ಕೆಜೆಪಿ ಕ್ಯಾಂಡಿಡೇಟಾಗಲು ತಿಪ್ಪರಲಾಗ ಹಾಕಿದ್ದ. ಇದು ಗೊತ್ತಾಗಿದ್ದೇ ತಡ, ಧರ್ಮಸ್ಥಳದ ದೇವರ ಏಜೆಂಟರು ಸ್ವ-ಜಾತಿಯ ಧನಂಜಯ ಕುಮಾರ್‌ನ ಹಿಡಿದುಕೊಂಡು ತಿಮರೋಡಿ ಕೆಜೆಪಿ ಸೇರದಂತೆ ಮಾಡಿಬಿಟ್ಟರು. ಆಗ ಧನಂಜಯ್ ಬಿಜೆಪಿಯ ಬಾಸ್‌ನ ಬಾಯಿಯಂತಿದ್ದರು. ಆನಂತರ ಬಂದ ಪಾರ್ಲಿಮೆಂಟ್ ಎಲೆಕ್ಷನ್ ಹೊತ್ತಲ್ಲಿ ಬಿಜೆಪಿಯಿಂದಲೇ ತಿಮರೋಡಿಗೆ ಆಹ್ವಾನ ಬಂದು ಬಿಜೆಪಿ ಸೇರಲು ಸಾಕ್ಷಾತ್ ಕಲ್ಲಡ್ಕ-ನಳಿನ್‌ನಂಥವರೇ ತಿಮರೋಡಿ ಮನೆ ಬಾಗಿಲಿಗೆ ಹೋಗಿ ಕೇಳಿಕೊಂಡರು. ಬಿಜೆಪಿಯಿಂದೊಮ್ಮೆ ಬೆಳ್ತಂಗಡಿ ಎಮ್ಮೆಲ್ಲೆಯಾಗಿ ಜೀವನದ ಕೊನೆಯಾಸೆ ತೀರಿಸಿಕೊಳ್ಳುವ ತವಕದಲ್ಲಿರುವ ತಿಮರೋಡಿ ಕಲ್ಲಡ್ಕನ ಪಾದಕ್ಕೆ ನೆಗೆದುಬಿದ್ದು ಆಶೀರ್ವಾದವೂ ಪಡೆದುಬಿಟ್ಟ.

ಹಾಗಾಗಿ ತಿಮರೋಡಿ ಪೂರ್ವಾಶ್ರಮದ ಅನೈತಿಕ ಪೊಲೀಸ್‌ಗಿರಿ ಮತ್ತೆ ಶುರು ಹಚ್ಚಿಕೊಂಡಿದ್ದಾನೆ. ಹುಡುಗ-ಹುಡುಗಿ ಜತೆಯಾಗಿ ಕಂಡರೆ ಹಿಡಿದು ಹೊಡೆಯುವುದು, ದನ ಸಾಗಿಸುವರ ಹಿಂಸಿಸಿ ಹಣ ಮಾಡುವುದು, ಹಿಂದೂತ್ವದ 'ರಕ್ಷಣೆ'ಗೆ ಪರಧರ್ಮೀಯರ ರಕ್ತ ಹರಿಸುವುದು ಆರಂಭಿಸಿದ್ದಾನೆ. ಕೆಲವು ದಿನಗಳ ಹಿಂದೆ ತಿಮರೋಡಿಯ ಖಾಸಾ ಗೂಂಡಾಗಳು ಉಜಿರೆ ಬಸ್ ನಿಲ್ದಾಣದಲ್ಲಿ ನಿಂತಿದ್ದ ಮುಸ್ಲಿಮರ ಹುಡುಗ-ಹುಡುಗಿಗೆ ಥಳಿಸಿ ರಕ್ತ ಹರಿಸಿದ್ದಾರೆ. ಮಾನಸಿಕವಾಗಿ ಘಾಸಿಗೊಳಿಸಿ ಕೇಕೆ ಹಾಕಿದ್ದಾರೆ. ಆಗಿದ್ದೇನೆಂದರೆ, ಮೂಡಿಗೆರೆಯ ಮುಸ್ಲಿಮರ ಹುಡುಗ ತನ್ನ ಸೋದರತ್ತೆಯ ಮಗಳೊಂದಿಗೆ ಉಜಿರೆ ಬಸ್ ನಿಲ್ದಾಣದಲ್ಲಿ ನಿಂತಿದ್ದ. ಗಂಡ-ಹೆಂಡತಿಯರಾಗುವ ಅವರ ಯೋಚನೆಗೆ ಹೆತ್ತವರೂ ಒಪ್ಪಿದ್ದಾರೆ. ಎಂಗೇಜ್‌ಮೆಂಟ್ ಮುಗಿದಿದೆ. ಮೂಡಿಗೆರೆಗೆ ಹೋಗಲು ಬಸ್ ಕಾಯುತ್ತಿದ್ದ ಈ ಯುವಕ-ಯುವತಿಯರ ಕಂಡಿದ್ದೇ ತಿಮರೋಡಿ ಅನುಯಾಯಿಗಳಿಗೆ ಹಿಂದೂತ್ವ ರಕ್ಷಣೆಯ ಉಕ್ಕಿ ಬಂದಿದೆ.

ಹುಡುಗ ಸಾಬಿಯಂತೆ ಇವರಿಗೆ ಕಂಡರೆ ಜೊತೆಗಿದ್ದ ಹುಡುಗಿ ಹಿಂದೂವಂತೆ ಗೋಚರಿಸಿದ್ದಾಳೆ. ಹಿಂದೆ-ಮುಂದೆ ಯೋಚಿಸದೆ ಇಬ್ಬರಿಗೂ ಬಡಿದಿದ್ದಾರೆ. ಅವರೆಷ್ಟೇ ತಾವು ಮುಸ್ಲಿಮರು-ಮುಂದೆ ಮದುವೆಯಾಗುವವರು, ಊರಿಗೆ ಹೊರಟಿದ್ದೇವೆಂದು ಗೋಗರೆದರೂ ಅನೈತಿಕ ಪೊಲೀಸ್ ಪಾಪಿಗಳಿಗೆ ಕೇಳಿಸಿಲ್ಲ. ಊರಲ್ಲೆಲ್ಲ ತಿಮರೋಡಿ ಹಿಂಬಾಲಕರೇ ಪುಂಡಾಟ ಮಾಡಿದ್ದಾರೆಂದು ಸುದ್ದಿಯಾಗಿದೆ. ತಕ್ಷಣ ಒಂದಿಷ್ಟು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ತಿಮರೋಡಿ ಮಾತ್ರ "ಹಲ್ಲೆಕೋರರು ನನ್ನ ಹುಡುಗರಲ್ಲ... ಆದರೆ ಆ ಜೋಡಿ ಅಶ್ಲೀಲವಾಗಿ ವರ್ತಿಸುತ್ತಿದ್ದರು...." ಎಂದು ಹಿಂದೂತ್ವದ ಪಾತಕ ಸಮರ್ಥಿಸಿದ್ದಾನೆ.

ಅಲ್ಲಿಗೆ ತಿಮರೋಡಿ ಬೆಳ್ತಂಗಡಿಯಲ್ಲಿ ಹಿಂದೂತ್ವದ ಹಾವಳಿ ಮತ್ತೆ ಆರಂಭಿಸಲು ಮುಹೂರ್ತ ಮಾಡಿದಂತಾಗಿದೆ. ಬೆಳ್ತಂಗಡಿಗೆ ಅದೆಂಥ ಕೇಡು ಕಾದಿದೆಯೋ? ತಿಮರೋಡಿ ತರಲೆಗೆ ಪೊಲೀಸರು ಕಡಿವಾಣ ಹಾಕಿಯಾರಾ? ಹಾಗಂತ ಆತಂಕಿತರಾಗಿರುವ ಬೆಳ್ತಂಗಡಿ ಮಂದಿಯೇ ಪಿಸುಗುಡುತ್ತಿದ್ದಾರೆ. ತಿಮರೋಡಿಯನ್ನು ಸೌಜನ್ಯ ಕೇಸ್‌ನಲ್ಲಿ ವೈಭವೀಕರಿಸಿದವರಿಗೆ ದೇಶ ಸಂಸ್ಥಾನದ ಪಾಳೆಗಾರಿಕೆ ನಿಲ್ಲಿಸಲು ನೆಗಳುಬಾಜಿ ಪಾಳೆಗಾರನಿಗೆ ಸ್ಕೋಪ್ ಕೊಟ್ಟಂತಾಯ್ತೊಂದು ಕಳವಳಪಡುತ್ತಿದ್ದಾರೆ.

■ ವರದಿಗಾರ

ಯಲ್ರೂ ಮೊದ್ಲು ಸಂಸ್ಕೃತ ಕಲಿಬೇಕು ಕಂಡ್ರೀ!

ಥೂತ್ತೇರಿ

ನಮ್ಮ ನಂದಿಮಾರ್ಕ್ ಪತ್ರಿಕಾ ಕಚೇರಿಗೆ ಬಿಜೆಪಿ ಬೀಜದ ಎತ್ತಿನಂತಿರುವ ಭೈರಪ್ಪನವರು ಬಂದಿರುವುದಕ್ಕೆ ಕೃತಾರ್ಥರಂತಾಗಿರುವ ನಂದಿ ವಾರಸುದಾರರು ತನ್ನ ಸಹೋದರನೇ ಬಂದಂತೆ ಸಂಭ್ರಮಿಸಿದರಂತಲ್ಲಾ. ಅದರಲ್ಲೂ ಮುಖ್ಯವಾಗಿ ಪದ್ಮಾವತಿ ಭೈರಪ್ಪನನ್ನು ಅಪರೂಪದ ಪ್ರಶ್ನೆ ಕೇಳಿ ಕನ್ನಡ ಸಾಹಿತ್ಯ ಲೋಕ ಕಂಡರಿಯದ ಉತ್ತರ ಪಡೆದರಂತಲ್ಲಾ. ಭರತ ಖಂಡದ ಸಮಾಜವಾದಿಗಳು ಎಷ್ಟೋ ವರ್ಷದ ಹಿಂದೆಯೇ ಹೇಳಿದ ಮಾತನ್ನ ಒತ್ತಿ ಹೇಳಿದ ಭೈರಪ್ಪ ಇದೀಗ ಅಂತರ್ಜಾತಿ ವಿವಾಹದ ಉದ್ಘಾಟನಾ ಸಮಾರಂಭದ ಅಧ್ಯಕ್ಷರಂತೆ ಮಾತನಾಡಿ, "ಜಾತಿ ಬಿಗುವು ಕಡಿಮೆಯಾಗಬೇಕಾದರೆ, ಕಚೇರಿಯ ಗುಮಾಸ್ತ ಮತ್ತು ಟೈಪಿಸ್ಟು ಮೊದಲು ಮದುವೆಯಾಗಬೇಕು" ಎನ್ನುವಂತಹ ಸಲಹೆ ಕೊಟ್ಟರಂತಲ್ಲಾ.

ಸೇರದ ಗಂಡನಿಗೆ ಮೊಸರಲ್ಲೂ ಕಲ್ಲು ಎನ್ನುವಂತೆ ನಾವು ಭೈರಪ್ಪನ ದೋಷಗಳನ್ನೇ ದೋಸೆ ಹುಯ್ದಂತೆ ಬಳಿಯುತ್ತಾ ಕೂರುವುದರ ಬದಲು ಅವರ ಬದಲಾವಣೆಯನ್ನು ಮೆಚ್ಚಲೇ ಬೇಕು. ಹಿಂದಿರುಗಿ ನೋಡಿದರೆ ಅವರದೇ ಕಗ್ಗಗಳಲ್ಲಿ ವಿಧವೆ ಮರುಮದುವೆಯಾದರೆ ನಿಲ್ಲದ ಬ್ಲೀಡಿಂಗ್ ಆಗುತ್ತೆ. ದಲಿತರು ದೇವಸ್ಥಾನಕ್ಕೆ ನುಗ್ಗಿದರೆ ಪ್ರಜ್ಞೆ ತಪ್ಪಿ ಬೀಳುತ್ತಾರೆ. ಸಮಾನ ಚಿಂತಕರಲ್ಲದ ದಂಪತಿಗಳು ದೂರ ಸರಿಯುತ್ತಾರೆ. ಬ್ರಾಹ್ಮಣ ಕನ್ಯೆ ಗೌಡರ ಹುಡುಗನನ್ನು ಲಗ್ನವಾದರೆ ಅಬಾರ್ಷನ್ ಆಗುತ್ತೆ... ಹೀಗೆ ದಾಖಲಿಸಿಕೊಂಡು ಬಂದ ಭೈರಪ್ಪನವರಲ್ಲಿ ಅಂತರ್ಜಾತಿ ವಿವಾಹದ ಕಲ್ಪನೆ ಸಾರಾಸಗಟು ಖಾಸಗೀಕರಣ, ಮೀಸಲಾತಿ ಮಾಯವಾಗಲು ಮಂತ್ರದಂಡವಂತಲ್ಲಾ. ಇವೆಲ್ಲಾ ಹೊಳೆಯಲು ಇಷ್ಟು ದಿನವಾಗಿ ಹೋಯ್ತಲ್ಲಾ. ಇದನ್ನೆಲ್ಲಾ ಹೇಳಲು ಭೈರಪ್ಪ ಪ್ರಜಾವಾಣಿ ಕಚೇರಿಗೇ ಹೋಗಬೇಕಾಗಿ ಬಂತಲ್ಲಾ. ಇದನ್ನ ಕಂಡ ಕನ್ನಡಪ್ರಭದ ಭಟ್ಟ "ಭೈರಪ್ಪ ಇಲ್ಲಿಗೆ ಬರುವುದಕ್ಕ್ಯಾಗಲಿಲ್ಲವೆ?'' ಎಂದು ಬೇಸರಗೊಂಡನಂತಲ್ಲಾ, ಥೂತ್ತೇರಿ!

* * *

ಈ ಮೋಡ ಮುಸುಕಿದ ವಾತಾವರಣದಿಂದ ಮಬ್ಬಾಡಿದ ಮನಸ್ಸಿಗೆ ಒಂದಿಷ್ಟು ಮನರಂಜನೆ ಬೇಕೆನಿಸಿದ ಕೂಡಲೇ ಈಶ್ವರಪ್ಪ ನೆನಪಾದರು. ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: "ಶ್ರೇಯಾನ್ ಸ್ವಧರ್ಮೋ ವಿಗುಣಃ ಶ್ರೇಯಾನ್..."

"ಹಲೋ?"

"ಹಲೋ ನಮಸ್ಕಾರ ಸಾರ್, ನಾನು ಯಾಹು."

"ಏನ್ರಿ ಯಾಹು?"

"ಕಂಗ್ರಾಜುಲೇಷನ್ ಸಾರ್."

"ಯಾಕ್ರೀ?"

"ನೀವು ಮುಖ್ಯಮಂತ್ರಿಯಾಗ್ತಿರಂತೆ, ಅದ್ಕೆ ಸಾರ್."

"ಯಾರ್ರಿ ಅಂಗದೋರು?"

"ನಿಮ್ಮ ಅಕ್ಕನ ಮಗಳು ಸಾರ್."

"ನಮ್ಮಕ್ಕನ ಮಗಳ್ಯಾರ್ರೀ?"

"ಅದೆ ನಿಮ್ಮದ್ದಿ ಸಾರ್. ಸಾರಿ ಸಾರ್, ಬಿಜೆಪಿ ಭಾಷೆಲಿ ನಿಮ್ಮ ಧರ್ಮಪತ್ನಿ."

"ಅದು ಈಗಲ್ಲ ಕಂಡ್ರಿ, ನಮ್ಮ ಪಾರ್ಟಿ ಅಧಿಕಾರಕ್ಕೆ ಬಂದಾಗ ನಾನು ಮುಖ್ಯಮಂತ್ರಿಯಾಗ್ತಿನಿ."

"ಅದ್ಯಂಗೆ ಸಾರ್?"

''ಉಪ ಮುಖ್ಯಮಂತ್ರಿಯಾದೋರೆಲ್ಲಾ ಮುಖ್ಯಮಂತ್ರಿಯಾಗದಿಲ್ಲವೇನ್ರಿ?''

"ಅಶೋಕನೂ ಉಪ ಮುಖ್ಯಮಂತ್ರಿ ಆಗಿದ್ರಲ್ಲ ಸಾರ್?"

"ಮೊದ್ಲು ನಾನಾಯ್ತಿನಿ, ಆಮೇಲೆ ಅಶೋಕ್."



"ಅವ್ರುರು ನಾನೇ ಮೊದ್ಲು ಅಂತ ಕುಂತಗಂಡ್ರೆ?"

"ಹೈಕಮಾಂಡ್ ತೀರ್ಮಾನ ತಗೊಳತ್ತೆ."

"ಅಂತೂ ಕೋತಿ ಕಜ್ಜಾಯದ ಕತೆಯಾಗಿ ಒಬ್ಬ ನರಿ ತರದ ಬ್ರಾಹ್ಮಣ ಆಯ್ತನೆ."

"ಅದ್ಯಲ್ಲ ಈಗ್ಯಾಕ್ರಿ? ಅಂತಾ ದಿನ ಬಂದಾಗ ಫೋನ್ ಮಾಡಿ."

"ಸಾರಿ ಸಾರ್. ಇನ್ನೊಂದು ವಿಷಯ, ನೀವು ನಿಮ್ಮ ಮೊಬೈಲ್ ಫೋನಿಗೆ ಸಂಸ್ಕೃತ ಶ್ಲೋಕ ಹಾಕಿಸಿಕೊಂಡಿದ್ದೀರಿ. ಅದೂ ಅಲ್ದೆ ಯಲ್ರೂ ಸಂಸ್ಕೃತ ಕಲಿಬೇಕು ಅಂತಿದ್ದಿರಿ. ಯಾಕ್ ಸಾ?"

"ಸಂಸ್ಕೃತ ನಮ್ಮೆಲ್ಲಾ ಭಾಷೆಗೆ ತಾಯಿ ಭಾಷೆ ಕಂಡ್ರೀ"

"ತಾಯಿ ತೀರೋಗಿ ಸಮಾಧಿ ಸೇರಿದಾಳಲ್ಲ ಸಾರ್?"

"ಸೇರಿದ್ರೇನಾಯ್ತೀರಿ? ಅಲ್ಲೇ ಒಂದು ಗುಡಿ ಕಟ್ಟಿ ಸಂಸ್ಕೃತದಲ್ಲಿ ಪೂಜೆ ಮಾಡಿದ್ರಾಯ್ತು."

"ಸಾರ್, ನನಿಗೊಂದು ಸಂಸ್ಕೃತ ಶ್ಲೋಕ ಬರುತ್ತೆ, ಆದ್ರೆ ಅರ್ಥ ಗೊತ್ತಾಗಲ್ಲ, ಹೇಳ್ತಿರಾ ಸಾರ್?"

"ಅದ್ಯಾವುದ್ರಿ ಶ್ಲೋಕ ಹೇಳ್ರಿ ನೋಡನ"

"ಶ್ವಾನೇ ಚತುಷ್ಪಾದ,
ಮೂತ್ರಕಾಲೆ ತ್ರಿಪಾದಃ
ಮೈಥುನಕಾಲೇ ದ್ವಿಪಾದಃ
ಮರಣಕಾಲೇ ಏಕಪಾದಃ ಅಂದ್ರೇನು ಹೇಳಿ ಸಾರ್?"

"ಇದ್ಯಾವುದ್ರಿ ಶ್ಲೋಕ? ನಮ್ಮ ಪೇಜಾವರ ಸ್ವಾಮಿ ಕೇಳಿ ಹೇಳ್ತಿನಿರಿ."

"ಇನ್ನೊಂದು ಶ್ಲೋಕ ಸಾರ್, ಇದರ ಸರಿಯಾದ ಅರ್ಥ ಹೊಳಿತಾಯಿಲ್ಲ. ನಿಮಿಗೇನಾದ್ರು ಗೊತ್ತಾದ್ರೆ ಹೇಳಿ ಸಾರ್."

"ಹೇಳ್ರಿ ಅದೇನು?"

"ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿ ಗೃಹ್ಣಾತಿ ನರೋಪರಾಣಿ !
ತಥಾ ಶರೀರಾಣಿ ವಿಹಾಯ ಜೀರ್ಣಾನಿ
ಅನ್ಯಾನಿ ಸಂಯಾತಿ ನವಾನಿ ದೇಹೀ
ಇದರ ಪೂರ್ಣ ಅರ್ಥ ಹೇಳ್ತಿರಾ ಸಾರ್?"

"ರೀ, ನನ್ನನ್ನೇನು ಸಂಸ್ಕೃತ ಪಂಡಿತ ಅನ್ನಕೊಂಡರೇನ್ರಿ?"

"ಮತ್ತೆ ಕನ್ನಡನೆ ಹೋಯ್ತಾ ಕುಂತದೆ. ಸಂಸ್ಕೃತ ಕಲಿರಿ ಅಂತಿರಲ್ರೀ. ಮೊದ್ಲು ನೀವು ಕಲಿರಿ. ಈಗೇಳಿದ ಶ್ಲೋಕ ಏನು ಗೊತ್ತ?"

"ಅದೇನೇಳ್ರಿ ಜಲ್ದಿ."

"ಜೀರ್ಣವಾದ ಉಡುಪನ್ನ ತ್ಯಜಿಸಿ ಹೊಸದನ್ನ ಧರಿಸೊತರ ಆತ್ಮ ಜೀರ್ಣವಾದ ಶರೀರ ಬಿಟ್ಟು ಹೊಸ ದೇಹ ಸೇರುತ್ತೆ."

"ಅದು ನನಿಗೂ ಗೊತ್ತು ಕಂಡ್ರಿ. ಅರ್ಜುನ ಕೃಷ್ಣನಿಗೇಳ್ತನೆ."

"ಅಲ್ಲ ಸಾರ್, ಕೃಷ್ಣ ಅರ್ಜುನನಿಗೇಳ್ತನೆ, ಆ ಶ್ಲೋಕನ ನಿಮಗೆ ಅನ್ವಯಿಸೋದಾದ್ರೆ, ನೀವೇ ಉಪ ಮುಖ್ಯಮಂತ್ರಿ ದೇಹನ ತ್ಯಜಿಸಿ, ಮುಖ್ಯಮಂತ್ರಿ ದೇಹ ಸೇರೊ ತಯಾರಿ ನಡೆಸಬೇಕು. ಅದಕ್ಕಿಂತ ಮೊದಲು ಸಂಸ್ಕೃತ ಕಲಿಬೇಕು."

"ಅದ್ಯಂಗ್ರಿ ಕಲಿಯದು?"


"ಕಲಿಯದಕ್ಕಿಂತ ಉಪದೇಶ ಸುಲಭ ಅಲ್ಲವೆ?"


"ಹೌದು ಕಂಡ್ರೀ!"

"ಥೂತ್ತೇರಿ!!!" ■

ಮಂಡ್ಯ ಪೊಲಿಟಿಕ್ಸ್

ಅಂಬಿ-ನರೇಂದ್ರರ ನಡುವೆ 'ಟ್ರಾನ್ಸ್‌ಫರ್' ಪ್ರತಿಷ್ಠೆ!





ಮಂಡ್ಯ ಜಿಲ್ಲೆಯಲ್ಲಿ ಅಧಿಕಾರಿಗಳ ವರ್ಗಾವಣೆ ದಂಧೆ ಜೋರಾಗಿಯೇ ನಡೆಯುತ್ತಿದೆ. ವರ್ಗಾವಣೆ ಸೀಸನ್ ಮುಗಿದರೂ ಅಧಿಕಾರಿಗಳ ವರ್ಗಾವಣೆ ಮುಗಿಯುವ ಯಾವ ಲಕ್ಷಣಗಳೂ ಕಾಣುತ್ತಿಲ್ಲ. ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಅಧಿಕಾರಿಗಳ ವರ್ಗಾವಣೆಯನ್ನು ತನ್ನ ಬಲಗೈ ಭಂಟ ಅಮರಾವತಿ ಚಂದ್ರಶೇಖರನ ಸುಪರ್ದಿಗೆ ವಹಿಸಿದ್ದಾರೆ. ಕಡೇ ಅವಧಿಯ ರಾಜಕಾರಣದಲ್ಲಿ ಒಂದಷ್ಟು ಕಾಸು ಮಾಡಿಕೊಳ್ಳುವ ಇರಾದೆಯಲ್ಲಿ ಅಂಬಿಯ ವೀಕ್ನೆಸ್ಸನ್ನೇ ದಂಧೆಯಾಗಿಸಿಕೊಂಡಿರುವ ಅಮರಾವತಿ ಚಂದ್ರ ಜಿಲ್ಲೆಯ ಆಯಕಟ್ಟಿನ ಜಾಗಕ್ಕೆ ಯಾರು ಬಂದು ಒಕ್ಕರಿಸಬೇಕು, ಯಾರು ಎತ್ತಂಗಡಿಯಾಗಬೇಕು ಎಂಬ ಫರ್ಮಾನು ಹೊರಡಿಸುತ್ತಾ ಭರ್ತಿ ಕಪ್ಪ-ಕಾಣಿಕೆ ವಸೂಲಿಯಲ್ಲಿ ಬ್ಯುಸಿಯಾಗಿದ್ದಾನೆ.

ವಿಪರ್ಯಾಸವೆಂದರೆ ಅಮರಾವತಿಯ ಈ ಕುಯುಕ್ತಿಯಿಂದ ಮಂಡ್ಯ ನೆಲದಲ್ಲಿ ಮತ್ತೊಂದು ರಾಜಕೀಯ ಜಿದ್ದಾಜಿದ್ದಿ ಘಟಿಸುತ್ತಿದೆ. ಇಷ್ಟು ದಿನ ಕೃಷ್ಣ ಮತ್ತು ರಮ್ಯಾ ಪಾಳಯಕ್ಕಷ್ಟೆ ಸೀಮಿತವಾಗಿದ್ದ ಅಂಬಿ ಮುನಿಸನ್ನು ಈಗ ಮಳವಳ್ಳಿ ಶಾಸಕ ನರೇಂದ್ರಸ್ವಾಮಿಯತ್ತಲೂ ತಿರುಗುವಂತೆ ಮಾಡಿರುವ ಚಂದ್ರ ಅದಕ್ಕೆ ವರ್ಗಾವಣೆ ದಂಧೆಯನ್ನೆ ಬೇಸ್ ಮಾಡಿಟ್ಟುಕೊಂಡಿದ್ದಾನೆ. 'ಜಿಲ್ಲೆಯಲ್ಲಿ ನರೇಂದ್ರಸ್ವಾಮಿಯ ಹವಾ ಹೆಚ್ಚಾಗುತ್ತಿದ್ದು ವರ್ಗಾವಣೆ ವಿಷಯದಲ್ಲಾದರು ನಾವು ಮೇಲುಗೈ ಸಾಧಿಸದೆ ಹೋದರೆ ನಮ್ಮನ್ನೇ ತುಳಿದು ನರೇಂದ್ರಸ್ವಾಮಿ ಬೇರೂರಿಬಿಡುತ್ತಾನೆ' ಎಂದು ಅಂಬಿಯ ಕಿವಿ ಕಚ್ಚಿರುವ ಅಮರಾವತಿ ಸ್ವಾರ್ಥ ಸಾಧನೆಗೋಸ್ಕರ ಈ ಇಬ್ಬರೂ ಕಾಂಗ್ರೆಸ್ ನಾಯಕರ ನಡುವೆ ಅಂತರ ಹಿಗ್ಗಿಸಿ ಚೆನ್ನಾಗಿ ಗೆಬರಿದ್ದಾನೆ. ಜಿಲ್ಲೆಯಲ್ಲಿ ಮಂಡ್ಯ ಮತ್ತು ಮಳವಳ್ಳಿ ಕ್ಷೇತ್ರಗಳಲ್ಲಿ ಬಿಟ್ಟರೆ ಬೇರೆಲ್ಲೂ ಕಾಂಗ್ರೆಸ್ ಗೆದ್ದಿಲ್ಲ. ಮದ್ದೂರು, ಶ್ರೀರಂಗಪಟ್ಟಣ, ಕೆ.ಆರ್.ಪೇಟೆ, ನಾಗಮಂಗಲದಲ್ಲಿ ಜೆಡಿಎಸ್ ಶಾಸಕರಿದ್ದರೆ, ಪಾಂಡವಪುರದಲ್ಲಿ ರೈತಸಂಘದ ಕೆ.ಎಸ್.ಪುಟ್ಟಣ್ಣಯ್ಯ ಶಾಸಕ. ಉಸ್ತುವಾರಿ ಸಚಿವ ಅಂಬಿಯ ಟ್ರಂಪ್‌ಕಾರ್ಡ್ ಮುಂದಿಟ್ಟುಕೊಂಡು ಅಮರಾವತಿ ಚಂದ್ರ ಈ ಎಲ್ಲಾ ತಾಲ್ಲೂಕುಗಳ ವರ್ಗಾವಣೆ ದಂಧೆಯಲ್ಲಿ ಕೈಯಾಡಿಸಿದ್ದಾನೆ. ಆದರೆ ಮಳವಳ್ಳಿ ಮಟ್ಟಿಗೆ ಅದು ಸಾಧ್ಯವಾಗಿಲ್ಲ. ಯಾಕೆಂದರೆ ಶಾಸಕ ನರೇಂದ್ರಸ್ವಾಮಿ ಗಟ್ಟಿ ರಾಜಕಾರಣಿ. ಸಿಎಂ ಸಿದ್ದರಾಮಯ್ಯನವರ ಆಪ್ತರೂ ಆಗಿರುವ ಮಾಜಿ ಸಚಿವ, ಹಾಲಿ ಶಾಸಕ ನರೇಂದ್ರಸ್ವಾಮಿ ಮಳವಳ್ಳಿ ತಾಲ್ಲೂಕಿನಲ್ಲಿ ಅಮರಾವತಿ ಚಂದ್ರ ಬಾಲ ಬಿಚ್ಚದಂತೆ ಕಟ್ ಮಾಡಿದ್ದಾರೆ. ಒಂದೆಡೆ ಕಾಸು ಗೆಬರುವ ವರ್ಗಾವಣೆ ದಂಧೆ ನಡೆಯುತ್ತಿದ್ದರೆ ಮತ್ತೊಂದೆಡೆ ತಮ್ಮ ಮಾತುಕೇಳುವ ಅಧಿಕಾರಿಗಳನ್ನು ಹಾಕಿಸಿಕೊಂಡು ಜಿಲ್ಲೆಯ ಮೇಲೆ ಹಿಡಿತ ಸಾಧಿಸಲು ಅಂಬಿ-ನರೇಂದ್ರಸ್ವಾಮಿ ನಡುವೆ ಮುಸುಕಿನ ಗುದ್ದಾಟ ನಡೆಯುವಂತೆ ಅಮರಾವತಿ ಚಂದ್ರ ಫಿಟ್ಟಿಂಗ್ ಮಡಗಿದ್ದಾನೆ. ಈ ನಡುವೆ ಜೆಡಿಎಸ್ ಶಾಸಕ-ಸಂಸದರಿಗೂ ಅಮರಾವತಿ ಚಂದ್ರನೇ ಡಿಪ್ಲೊಮ್ಯಾಟಿಕ್ ಮಿನಿಸ್ಟರ್.

ಅಶಾಂತಿ ತಂದಿಟ್ಟ 'ಶಾಂತಾ


ಅಂಬಿ ಮತ್ತು ನರೇಂದ್ರಸ್ವಾಮಿ ನಡುವಿನ ವರ್ಗಾವಣೆ ಗುದ್ದಾಟ ಅತಿರೇಕಕ್ಕೆ ಹೋದದ್ದು ಎಸಿ ಶಾಂತಾ ಹುಲ್ಮನಿ ವಿಚಾರದಲ್ಲಿ. ಮಳವಳ್ಳಿ, ಮದ್ದೂರು, ಮಂಡ್ಯ ತಾಲ್ಲೂಕುಗಳ ವ್ಯಾಪ್ತಿಯನ್ನು ಒಳಗೊಂಡ ಮಂಡ್ಯ ವಿಭಾಗದ ಎಸಿ ಹುದ್ದೆಗೆ ಬಂದಿದ್ದ ಶಾಂತಾ ಹುಲ್ಮನಿ ಹೇಳಿಕೊಳ್ಳುವ ಅಧಿಕಾರಿ ಯೇನಲ್ಲ. ರಾಜಕಾರಣಿಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಕಾರ್ಯನಿರ್ವಹಿಸುತ್ತಿದ್ದ ಶಾಂತಾ ಹುಲ್ಮನಿಯನ್ನು ಉಳಿಸಿಕೊಳ್ಳುವ ಇರಾದೆ ನರೇಂದ್ರಸ್ವಾಮಿಗಿತ್ತು. ಆದರೆ ಅಂಬಿ ಭಂಟ ಅಮರಾವತಿ ಚಂದ್ರ ಶಾಂತಾ ಹುಲ್ಮನಿಯನ್ನು ಎತ್ತಂಗಡಿ ಮಾಡಿ ಆ ಜಾಗಕ್ಕೆ ಧನದಾಹಿ ಆದ ಶಿವಾನಂದಮೂರ್ತಿಯನ್ನು ಪ್ರತಿಷ್ಠಾಪಿಸಲು ಆದಾಗಲೆ ಡೀಲ್ ಮುಗಿಸಿಕೊಂಡಿದ್ದ. ವಿಷಯ ಗೊತ್ತಾಗುತ್ತಿದ್ದಂತೆ ಯಾವುದೇ ಕಾರಣಕ್ಕೂ ಶಾಂತಾ ಹುಲ್ಮನಿ ಎತ್ತಂಗಡಿ ಆಗಬಾರದೆಂದು ಪಣತೊಟ್ಟವರಂತೆ ಆಕೆಯನ್ನು ಉಳಿಸಿಕೊಳ್ಳಲು ನರೇಂದ್ರಸ್ವಾಮಿ ಇನ್ನಿಲ್ಲದ ಹರಸಾಹಸ ಮಾಡಿದ್ದರು. ಆದರೆ ಶಿವಾನಂದಮೂರ್ತಿಯಿಂದ ಭರ್ತಿ ರೊಕ್ಕ ಪೀಕಿದ್ದ ಅಮರಾವತಿ ಚಂದ್ರ ಇನ್ನೇನು ಶಾಂತಾ ಹುಲ್ಮನಿಯನ್ನು ಎತ್ತಂಗಡಿ ಮಾಡಿಸಿಯೇ ಬಿಟ್ಟ ಎನ್ನುವಾಗ ಶಾಸಕ ನರೇಂದ್ರಸ್ವಾಮಿ ಅಧಿಕೃತವಾಗಿ ಎಂಟ್ರಿಯಾಗಿದ್ದರು. ಸಿಎಂ ಸಿದ್ದರಾಮಯ್ಯನವರೊಂದಿಗೆ ಸಾಕಷ್ಟು ಆತ್ಮೀಯವಾಗಿರುವ ನರೇಂದ್ರಸ್ವಾಮಿ ಅಂಬಿಗೆ ಟಾಂಗ್ ಕೊಟ್ಟು ಶಾಂತಾ ಹುಲ್ಮನಿ ವರ್ಗಾವಣೆಯನ್ನು ಮೊದಲ ಹಂತದಲ್ಲಿ ತಡೆದರು. ಮೊದಲ ಅವಧಿಯಲ್ಲಿ ಡಿವೈಎಸ್ಪಿ ಶೋಭಾರಾಣಿ, ತಹಸೀಲ್ದಾರ್ ಮಮತಾ ಮೊದಲಾದ ಅಧಿಕಾರಿಗಳು ಎತ್ತಂಗಡಿಯಾದರೂ ಶಾಂತಾ ಹುಲ್ಮನಿ ಮಾತ್ರ ಎತ್ತಂಗಡಿ ಆಗಿರಲಿಲ್ಲ.

ಮೊದಲ ಅವಧಿಯಲ್ಲಿ ಎತ್ತಂಗಡಿಯಾದ ಡಿವೈಎಸ್ಪಿ ಶೋಭಾರಾಣಿ ಸಾಕಷ್ಟು ರೊಕ್ಕ ಮಾಡಿಕೊಂಡೇ ಮಂಡ್ಯ ಖಾಲಿ ಮಾಡಿದ್ದು. ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ 5 ಕೋಟಿ ಹಣವನ್ನು ಮುಂಡಾಯಿಸಿದ್ದ ಕಾಂಗ್ರೆಸ್‌ನ ಕೆಬ್ಬಳ್ಳಿ ಆನಂದ್ ಪ್ರಕರಣದಲ್ಲಿ ಸಾಕಷ್ಟು ರೊಕ್ಕವನ್ನು ಈಕೆ ಪೀಕಿದ್ದಳು. ಮಂಡ್ಯ ಗಾಂಧಿನಗರದ ಹೊಟ್ಟೆ ವೆಂಕಟೇಶನ ಕೊಲೆ ಕೇಸಿನಲ್ಲಿ ಹೊಸಹಳ್ಳಿಯ ಒಂದಷ್ಟು ಹುಡುಗರನ್ನು ಎತ್ತಾಕಿಕೊಂಡು ಬಂದ ಶೋಭಾ ಮೇಡಂ ಪ್ರಕರಣದಲ್ಲಿ ನಿಮ್ಮನ್ನು ಸೇರಿಸುತ್ತೇನೆ ಎಂದು ಹೆದರಿಸಿಯೇ ಸಾಕಷ್ಟು ರೊಕ್ಕ ಬಾಚಿದ್ದಳು. ಇಂತಹ ಶೋಭಾ ಮೇಡಂ ಇದೀಗ ಮತ್ತಷ್ಟು ಪೊಗರ್‌ದಸ್ತಾದ ಹುಲ್ಲುಗಾವಲು ಬೆಂಗಳೂರನ್ನು ಹೊಕ್ಕಿದ್ದಾಳೆ.

ಮಂಡ್ಯ ಉಪವಿಭಾಗಾಧಿಕಾರಿಯಾಗಿ ಯಾರು ಬರಬೇಕು ಎನ್ನುವುದನ್ನು ನಿರ್ಧರಿಸುವುದು ಜಿಲ್ಲಾ ಉಸ್ತುವಾರಿ ಸಚಿವರಾದ ನೀವೋ ಇಲ್ಲಾ ಮಳವಳ್ಳಿ ನರೇಂದ್ರಸ್ವಾಮಿಯೋ ಎಂದು ಅಮರಾವತಿ ಚಂದ್ರ, ಅಂಬಿಯ ಕಿವಿಕಚ್ಚಿದ್ದ. ಹಾಗಾಗಿ ಅಂಬಿ ಇದನ್ನು ಪ್ರತಿಷ್ಠೆಯನ್ನಾಗಿ ತೆಗೆದುಕೊಂಡು ಶಾಂತಾ ಹುಲ್ಮನಿ ಜಾಗಕ್ಕೆ ಶಿವಾನಂದಮೂರ್ತಿ ಕೂರಿಸಲು ಟೊಂಕ ಕಟ್ಟಿ ಸಿದ್ಧರಾಗಿದ್ದರು. ಈ ಹಿಂದೆಯೇ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ಶಂಕರ್‌ರವರ ವರ್ಗಾವಣೆ ವಿಷಯವಾಗಿ ಸಚಿವ-ಶಾಸಕರ ನಡುವಿನ ಸಂಘರ್ಷದಿಂದ ಇಕ್ಕಟ್ಟಿಗೆ ಸಿಲುಕಿದ ಸಿಎಂ ಈ ಬಾರಿ ಸಚಿವ ಅಂಬಿಗೆ ತಿಳಿಹೇಳಿ ಸ್ವ-ಪಕ್ಷದ ಶಾಸಕರಾಗಿರುವ ನರೇಂದ್ರಸ್ವಾಮಿ ಜೊತೆ ಸೌಜನ್ಯದಿಂದ ವರ್ತಿಸುವಂತೆ ತಾಕೀತು ಮಾಡಿದ್ದರು. ಆದರೂ ಅಂಬಿ ತನ್ನ ಚೆಂಬಲಿಗರ ಮಾತಿಗೆ ಮಣೆಹಾಕುತ್ತಿದ್ದ ವೈಖರಿ ನರೇಂದ್ರಸ್ವಾಮಿಗೆ ಬೇಸರ ತರಿಸಿತ್ತು. ಶಾಂತಾ ಹುಲ್ಮನಿಯನ್ನು ಎತ್ತಂಗಡಿ ಮಾಡಿಸದೆ ಬಿಡರು ಎಂಬ ಸುಳಿವು ಸಿಗುತ್ತಿದ್ದಂತೆಯೇ ನರೇಂದ್ರಸ್ವಾಮಿ ಒಂದು ಮಸ್ತ್ ಟ್ವಿಸ್ಟ್ ಕೊಟ್ಟಿದ್ದರು. ಏನೆಂದರೆ, ಅಂಬಿ ಟೀಮು ಹುಲ್ಮನಿಯನ್ನು ಎತ್ತಂಗಡಿ ಮಾಡಿಸುವ ಮುನ್ನವೇ ತಾವೇ ಆಕೆಯನ್ನು ವರ್ಗಾ ಮಾಡಿಸಿ ಆ ಜಾಗಕ್ಕೆ ದಲಿತ ವರ್ಗಕ್ಕೆ ಸೇರಿದ ಹಿಂದೆ ಶ್ರೀರಂಗಪಟ್ಟಣದಲ್ಲಿ ತಹಸೀಲ್ದಾರ್ ಆಗಿ ಕೆಲಸ ಮಾಡಿದ್ದ ಅರುಳ್‌ಕುಮಾರ್ ಎಂಬಾತನನ್ನು ತಂದೇ ಬಿಟ್ಟರು. ಆ ಮೂಲಕ ಶಿವಾನಂದಮೂರ್ತಿಯಿಂದ ಕಾಸು ತಿಂದಿದ್ದ ಅಮರಾವತಿ ಚಂದ್ರನಿಗೆ ಹಾಗೂ ಅಂಬಿ ಪಾಳಯಕ್ಕೆ ಬೇರೊಂದು ರೀತಿಯಲ್ಲಿ ಶಾಕ್ ನೀಡಿದ್ದರು. ಒಟ್ಟಿನಲ್ಲಿ ನರೇಂದ್ರಸ್ವಾಮಿ ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆದುರುಳಿಸಿದ್ದಾರೆ. ನಂಜನಗೂಡು ತಾಲ್ಲೂಕು ಪಂಚಾಯತ್ ಇಒ ಆಗಿದ್ದ ಅರುಳ್‌ಕುಮಾರ್ ಮಂಡ್ಯ ಉಪವಿಭಾಗಾಧಿಕಾರಿಯಾಗಿ ವರ್ಗವಾಗುವಲ್ಲಿ ಸ್ವತಃ ಸಿಎಂ ಸಿದ್ದರಾಮಯ್ಯನವರ ಶಿಫಾರಸ್ಸು ಕೆಲಸ ಮಾಡಿರುವುದರಿಂದ ಸಚಿವ ಅಂಬಿಕೂಡ ಸುಮ್ಮನಾಗದೆ ಬೇರೆ ವಿಧಿ ಇರಲಿಲ್ಲ. ಅಮರಾವತಿ ಚಂದ್ರನಿಗೆ ಇದು ಭರ್ಜರಿ ಮುಖಭಂಗವೇ ಸರಿ.

ಯಾರೀತ ಅರುಳ್‌ಕುಮಾರ್

ಅರುಳ್‌ಕುಮಾರ್ ದಲಿತವರ್ಗಕ್ಕೆ ಸೇರಿದ್ದು,



ಚಾಮರಾಜನಗರ ಮೂಲದವರು. ಈ ಹಿಂದೆ ಶ್ರೀರಂಗಪಟ್ಟಣ ತಹಸೀಲ್ದಾರ್ ಆಗಿದ್ದಾಗ ಸಾಕಷ್ಟು ಆಕ್ಟೀವ್ ಆಗಿದ್ದವರು. ಒಳ್ಳೆಯ ಅಧಿಕಾರಿ ಎಂದು ಜನ ಸರ್ಟಿಫಿಕೇಟು ಕೊಡುವಷ್ಟು ಉತ್ತಮನೇನು ಅಲ್ಲದೇ ಹೋದರೂ ತೀರಾ ಭ್ರಷ್ಟನೇನಲ್ಲ. ಸುಮಾರು 2 ವರ್ಷ ಅಲ್ಲಿ ಸೇವೆ ಸಲ್ಲಿಸಿದ್ದ ಅರುಳ್ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡನ ಜೊತೆ ಚೆನ್ನಾಗಿದ್ದು, ಆತನ ಮಾತು ಮೀರುತ್ತಿರಲಿಲ್ಲ. ಹಾಗಾಗಿ ಶಾಸಕರ ಭಂಟರು ತಾಲ್ಲೂಕಿನಾದ್ಯಂತ ನಡೆಸುತ್ತಿದ್ದ ಅಕ್ರಮ ಕ್ವಾರಿಗಳನ್ನು ತಡೆಯುವ ಗೋಜಿಗೆ ಆತ ಎಂದೂ ಮುಂದಾಗಿರಲಿಲ್ಲ. ಈ ಬಗ್ಗೆ ರೈತ ಸಂಘದ ಕಾರ್ಯಕರ್ತರು ಸಾಕಷ್ಟು ಪ್ರತಿಭಟನೆ ನಡೆಸಿದರೂ ಅರುಳ್ ಶಾಸಕರ ಸುಬ್ಬದಲ್ಲೇ ಸಿಕ್ಕಿಹಾಕಿಕೊಂಡಿದ್ದ.


ಕಳೆದ ಒಂದೂವರೆ ದಶಕಗಳಿಂದ ಶ್ರೀರಂಗಪಟ್ಟಣದಲ್ಲೇ ಅಂಡು ಹಾಕಿಕೊಂಡು ಕುಳಿತಿರುವ ಕಂದಾಯ ಅಧಿಕಾರಿಗಳಾದ ಶಿವರಾಜ್ ಮತ್ತು ದೊಡ್ಡಯ್ಯ ಜೋಡಿ ಸರ್ವೆ ನಂ ಬದಲಾಯಿಸಿ ಆರ್‌ಟಿಸಿಗಳನ್ನು ತಿದ್ದಿ, ಅನ್ಯಖಾತೆ ಬದಲಾವಣೆ ಮಾಡುವುದರಲ್ಲಿ ಸಾಕಷ್ಟು ಎಕ್ಸಪರ್ಟ್‌ಗಳು. ಒಬ್ಬೊಬ್ಬನೂ ಕೋಟಿ-ಕೋಟಿಗಳಿಗೆ ತೂಗುತ್ತಾರೆ. ಅಂತಹ ಕಂದಾಯಾಧಿಕಾರಿಗಳ ಉಪಟಳದಿಂದ ತಪ್ಪಾದ ತಮ್ಮ ಸರ್ವೆ ನಂ., ಆರ್‌ಟಿಸಿಗಳನ್ನು ತಿದ್ದುಪಡಿ ಮಾಡಿಕೊಡಿ ಎಂದು ಅರ್ಜಿ ಸಲ್ಲಿಸಿ ಅಲವತ್ತುಕೊಂಡಾಗ ಈ ಅರುಳ್ ಕುಮಾರ್ ಕೋರ್ಟು ಕಚೇರಿ ಅಲೆಯುವಂತೆ ಮಾಡಿದ್ದರು ಎಂಬ ಆರೋಪ ಈಗಲೂ ಅಲ್ಲಿನ ರೈತರಿಂದ ಕೇಳಿಬರುತ್ತದೆ.

ಕೆಆರ್‌ಎಸ್ ರಸ್ತೆಯಲ್ಲಿರುವ ಹುಲ್ಲುಕೆರೆ ಗ್ರಾಮದ ಬಳಿ ಜುವಾರಿ ಗಾರ್ಡನ್ ಸಿಟಿ ಎಂಬ ಹೆಸರಿನ ಐಷಾರಾಮಿ ರೆಸಾರ್ಟ್ ಹಾಗೂ ರಿಯಲ್ ಎಸ್ಟೇಟ್ ಕಂಪನಿ ಬೆಳಗೊಳ ಪೇಪರ್ ಕಾರ್ಖಾನೆಗೆ ಸೇರಿದ ಜಾಗವನ್ನು ಎಕರೆಗಟ್ಟಲೆ ಒತ್ತುವರಿ ಮಾಡಿಕೊಂಡಿದೆ. ಈ ಬಗ್ಗೆ ಹುಲ್ಲುಕೆರೆ, ಮಜ್ಜಿಗೆಪುರ, ಬಸ್ತಿಪುರ, ಕೆಆರ್‌ಎಸ್‌ನ ಸಾವಿರಾರು ರೈತರು ರೈತನಾಯಕ ಕೆ.ಎಸ್.ನಂಜುಂಡೇಗೌಡರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಒತ್ತುವರಿ ಮಾಡಿರುವ ಜಮೀನಿನ ಬಗ್ಗೆ ಸರ್ವೆ ನಡೆಸಿ ಎಂದು ಒತ್ತಾಯಿಸಿದಾಗಲೂ ತಹಸೀಲ್ದಾರ್ ಆಗಿದ್ದ ಅರುಳ್‌ಕುಮಾರ್ ಕ್ಯಾರೆ ಎಂದಿರಲಿಲ್ಲ. ಜುವಾರಿ ಕಂಪನಿಯ ಬಂಡವಾಳಶಾಹಿಗಳ ಪರ ಅರುಳ್‌ಕುಮಾರ್ ನಿಂತರೆಂಬ ಆರೋಪ ಇಂದಿಗೂ ಅವರ ಮೇಲಿದೆ.

ಅರುಳ್‌ಕುಮಾರ್ ಶ್ರೀರಂಗಪಟ್ಟಣದ ತಹಸೀಲ್ದಾರ್ ಆಗಿದ್ದಾಗ ಕೆಪಿಸಿಸಿ ಸದಸ್ಯ ರವೀಂದ್ರ ಶ್ರೀಕಂಠಯ್ಯ ಮಾಡಿದ್ದ ಆರೋಪ ಆಗ ಸಾಕಷ್ಟು ಸೌಂಡ್ ಮಾಡಿತ್ತು. ಕಳೆದ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ ತಹಸೀಲ್ದಾರ್ ಆಗಿದ್ದ ಅರುಳ್‌ಕುಮಾರ್ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡರ ಅಣತಿಯಂತೆ ಸಾವಿರಾರು ಮತದಾರರನ್ನು ಚುನಾವಣಾ ಮತದಾರರ ಪಟ್ಟಿಯಿಂದ ಕೈ ಬಿಟ್ಟಿದ್ದಾರೆ ಎಂದು ಬಹಿರಂಗವಾಗಿ ಆರೋಪಿಸಿದ್ದರು. ಅಂಬಿ ಮುನಿಸಿನಿಂದ ಕಾಂಗ್ರೆಸ್ ಟಿಕೆಟ್ ಇಂಡುವಾಳು ಸಚ್ಚಿದಾನಂದನ ಮಾವ ಶೆಟ್ಟಹಳ್ಳಿ ಲಿಂಗರಾಜನಿಗೆ ದಕ್ಕಿದ್ದರಿಂದ ಪಕ್ಷೇತರನಾಗಿ ಸ್ಪರ್ಧಿಸಿದ್ದ ರವೀಂದ್ರ ಶ್ರೀಕಂಠಯ್ಯ ಭಾರೀ ಪೈಪೋಟಿಯನ್ನೇ ನೀಡಿದ್ದರು. ಆದರೂ ಜೆಡಿಎಸ್‌ನ ರಮೇಶ್‌ಬಾಬು 11 ಸಾವಿರ ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದರು. ಆತ್ಮಾವಲೋಕನ ಸಭೆಯಲ್ಲಿ 'ತಹಸೀಲ್ದಾರ್ ಅರುಳ್‌ಕುಮಾರ್, ರಮೇಶ್‌ಬಾಬುನ ಛೇಲಾ ಆಗಿದ್ದು ಆತನ ಅಣತಿಯಂತೆ ಸಾವಿರಾರು ಮತದಾರರನ್ನು ಕೈ ಬಿಟ್ಟಿದ್ದಾರೆ. ಅವರನ್ನು ಸುಮ್ಮನೆ ಬಿಡುವುದಿಲ್ಲ' ಎಂದು ರವೀಂದ್ರ ಶ್ರೀಕಂಠಯ್ಯ ಅಬ್ಬರಿಸಿದ್ದರು.

ಈ ಹಿಂದೆ ರಾಜಕಾರಣಿಗಳ ಬಾಲಬಡುಕ ಎಂಬ ಅಪವಾದ ಮೆತ್ತಿಸಿಕೊಂಡಿರುವ ಅರುಳ್ ಕುಮಾರ್ ಈಗಲಾದರೂ ಅವನ್ನೆಲ್ಲಾ ಬಿಟ್ಟು ಎಲ್ಲಾ ವರ್ಗದ ಜನರ ಕೆಲಸ ಮಾಡುವಂತಾದರೆ ಪ್ರಭಾವಿಗಳ ಕೆರೆ ಭೂಮಿ ಒತ್ತುವರಿ, ನರ್ಸಿಂಗ್ ಹೋಂಗಳಲ್ಲಿ ನಡೆಯುತ್ತಿರುವ ವೈದ್ಯರ ಧನದಾಹಕ್ಕೆ ಬ್ರೇಕ್ ಹಾಕಬಹುದು. ಒಟ್ಟಿನಲ್ಲಿ ಅಂಬಿ-ನರೇಂದ್ರಸ್ವಾಮಿ ನಡುವಿನ ಜಿದ್ದಾಜಿದ್ದಿನಲ್ಲಿ ಲಾಭ ಆದದ್ದು ಅರುಳ್ ಕುಮಾರ್‌ಗೆ.

■ ನಾಗೇಶ್



ಪುಸ್ತಕ ನಿಷೇಧ ಖಂಡನೀಯ

ಇತ್ತೀಚೆಗೆ ಡಾ.ಕೆ.ಎಸ್.ನಾರಾಯಣಾಚಾರ್ಯ ಎಂಬ ಬ್ರಾಹ್ಮಣವಾದಿ 'ವಾಲ್ಮೀಕಿ ಯಾರು?' ಎಂಬ ಪುಸ್ತಕವನ್ನು ಬರೆದು, ಅದರಲ್ಲಿ ರಾಮಾಯಣವನ್ನು ಬರೆದ ವಾಲ್ಮೀಕಿ ಬೇಡ/ನಾಯಕ ತರಹದ ನೀಚ ಸಮುದಾಯದಲ್ಲಿ ಜನಿಸಿದವನಲ್ಲ, ಬದಲಾಗಿ ಶ್ರೇಷ್ಠ ಬ್ರಾಹ್ಮಣ ಜಾತಿಯಲ್ಲಿ ಜನಿಸಿದವನು ಎಂಬ ವಾದವನ್ನು ಮಂಡಿಸಿದ್ದ. ಮಾತ್ರವಲ್ಲ "ಪಾಮರನಾದ ಬೇಡನೊಬ್ಬ ದಿಢೀರನೆ ಕಾವ್ಯ ಬರೆದ ರೀತಿ ಇದೆಂದು ಹೇಳುವುದು ಹಾಸ್ಯಾಸ್ಪದವಾಗಿದೆ..." ಎಂದು 'ಬೇಡ ಸಮುದಾಯವನ್ನು ಅವಮಾನಿಸಿದ್ದ. ಅದೇ ಕೃತಿಯಲ್ಲಿ ಪರಿಶಿಷ್ಟ ಮತ್ತು ದಲಿತ ಸಮುದಾಯದವರನ್ನೂ 'ವಿಕೃತ ಬುದ್ಧಿಯವರು' ಎಂದು ಹೀಯಾಳಿಸಿದ್ದ.

ಸಹಜವಾಗಿಯೇ ನಾರಾಯಣಾಚಾರ್ಯನ ಈ ಪುಸ್ತಕದ ವಿರುದ್ಧ ರಾಜ್ಯದ ಬೇಡ ಸಮುದಾಯದವರು ಮತ್ತು ಇತರೆ ಪ್ರಗತಿಪರರು ಪ್ರತಿಭಟಿಸಿದ್ದರು. ಆ ಕಾರಣಕ್ಕೇ ಇತ್ತೀಚೆಗೆ ರಾಜ್ಯ ಸರ್ಕಾರ ನಾರಾಯಣಾಚಾರ್ಯನ ಈ ಪುಸ್ತಕವನ್ನು ನಿಷೇಧಿಸಿದೆ.

ನಮ್ಮ ಪ್ರಕಾರ ನಾರಾಯಣಾಚಾರ್ಯನ ಪುಸ್ತಕವನ್ನು ಖಂಡಿಸಬೇಕು ನಿಜ. ವಿಮರ್ಶೆಯನ್ನೂ ಮಾಡಬೇಕು. ಬೇಕಿದ್ದರೆ ಆತ ಮಂಡಿಸಿರುವ ತರ್ಕದ ವಿರುದ್ಧ ಇನ್ನೊಂದು ಕೃತಿಯನ್ನು ರಚಿಸಿ ಸತ್ಯವನ್ನು ಜನರ ಮುಂದಿಡಬೇಕು.

ಆದರೆ ಯಾವ ಕಾರಣಕ್ಕೂ ಯಾವುದೇ ಪುಸ್ತಕವನ್ನಾಗಲಿ, ಸಿನಿಮಾ-ನಾಟಕವನ್ನಾಗಲಿ, ಕಲಾಕೃತಿಯನ್ನಾಗಲಿ, ವಿಭಿನ್ನ ಚಿಂತನೆಯನ್ನಾಗಲಿ ನಿಷೇಧಿಸಬಾರದು.

ಇದು ನಮ್ಮ ಬಳಗದ ನಿಚ್ಚಳ ಅಭಿಪ್ರಾಯ. ಆ ಕಾರಣಕ್ಕೇ ನಾರಾಯಣಾಚಾರ್ಯ ಎಂಬ ಕೋಮುವಾದಿ ಮತ್ತು ಜಾತಿವಾದಿಯ ಪುಸ್ತಕವನ್ನು ಖಂಡಿಸುತ್ತಲೇ ಆ ಪುಸ್ತಕದ ಮೇಲಿನ ನಿಷೇಧವನ್ನೂ ನಾವು ಖಂಡಿಸುತ್ತೇವೆ. ಕೂಡಲೇ ರಾಜ್ಯ ಸರ್ಕಾರ ಈ ನಿಷೇಧವನ್ನು ಹಿಂದೆ ಪಡೆಯಬೇಕು.

■ ಲಂಕೇಶ್ ಬಳಗ

ದುರ್ಗದ ಕಾಡಿಗೆ ಫಾರೆಸ್ಟರ್ ದುಗ್ಗಪ್ಪನೇ ಕಂಟಕ!

ಚಿತ್ರದುರ್ಗ ಜೋಗಿಮಟ್ಟಿ ಕಾಯ್ದಿಟ್ಟ ಅರಣ್ಯ ಪ್ರದೇಶದ ಬೆಲೆಬಾಳುವ ನೀಲಗಿರಿ ಮರಗಳು ಸದ್ದಿಲ್ಲದೆ ಕಣ್ಮರೆಯಾಗುತ್ತಿವೆ. ಇಲ್ಲಿಂದ ಹೊರಡುವ ಒಂದೊಂದು ಲಾರಿಯೂ ನೂರಾರು ನೀಲಗಿರಿ ದಿಮ್ಮಿಗಳನ್ನು ಹೊತ್ತೊಯ್ದು ದುರ್ಗದ ಮ್ಯಾದಾರ ಬೀದಿಯಲ್ಲೊ, ಬೆಂಗಳೂರಿನ ಕಲಾಸಿಪಾಳ್ಯದಲ್ಲೊ ಬಿಕರಿ ಮಾಡಿ ಲಕ್ಷಾಂತರ ಗಂಟನೊಂದಿಗೆ ವಾಪಸ್ಸಾಗುತ್ತಿವೆ. ಸಂರಕ್ಷಿತ ಅರಣ್ಯವೆಂದು ಘೋಷಣೆಯಾಗಿದ್ದರೂ ಇಲ್ಲಿನ ಪ್ರಾಣಿಗಳಿಗೆ ಯಾವ ರಕ್ಷಣೆಯೂ ಇಲ್ಲ. ರಾತ್ರೋರಾತ್ರಿ ಪ್ರಾಣಿಗಳ ದೇಹ ಅರೆಬರೆ ಮಣ್ಣಿನಲ್ಲಿ ಹೂತುಹೋಗಿರುತ್ತದೆ ಇಲ್ಲವೇ ಸುಟ್ಟು ಕರಕಲಾಗಿರುತ್ತದೆ. ಇನ್ನು ಈ ವ್ಯಾಪ್ತಿಯ ಬುಡಕಟ್ಟು ಜನಾಂಗಗಳ ಬವಣೆಯನ್ನಂತು ಕೇಳುವುದೇ ಬೇಡ. ನಿತ್ಯ ನಿರಂತರ ಕಿರುಕುಳ, ವಂಚನೆ ತಪ್ಪಿದ್ದಲ್ಲ. ಇಷ್ಟೆಲ್ಲಾ ಅಪರಾ-ತಪರಾದ ಮೂಲಗಳ ಬೆನ್ನತ್ತಿ ಹೋಗುವ ಪ್ರತಿಯೊಂದು ದಾರಿಯೂ ಕೊನೆಗೆ ಹೋಗಿ ತಲುಪುವುದು ದುಗ್ಗಪ್ಪನೆಂಬ ಭ್ರಷ್ಟಾತಿಭ್ರಷ್ಟ ಫಾರೆಸ್ಟರ್ ಬುಡಕ್ಕೆ. ಹೌದು, ಬೇಲಿಯೇ ಎದ್ದು ಹೊಲ ಮೇಯುವಂತೆ ಅರಣ್ಯ ರಕ್ಷಿಸಬೇಕಾದ ಫಾರೆಸ್ಟರ್ ದುಗ್ಗಪ್ಪನೇ ತನ್ನ ತಮ್ಮಂದಿರನ್ನು ಮುಂದಿಟ್ಟುಕೊಂಡು 'ಕಾಡುಗಳ್ಳ'ನಾಗಿದ್ದಾನೆ!

ಇವನ ಕೆರಿಯರ್ ಪೂರ್ತಿ ಇಂಥಾ ಕಪ್ಪುಚುಕ್ಕೆಗಳೇ ಎದ್ದು ಕಾಣುತ್ತವೆ. ಚಿಕ್ಕಮಗಳೂರು ಎನ್.ಆರ್.ಪುರದಲ್ಲಿ ಫಾರೆಸ್ಟರ್ ಆಗಿದ್ದಾಗ ಇದೇರೀತಿ ತೇಗದ ಮರ ಕಡಿದು ಮಾರಾಟ ಮಾಡುವಾಗ ರೆಡ್‌ಹ್ಯಾಂಡಾಗಿ ತಗುಲಿಕೊಂಡು ಸಸ್ಪೆಂಡ್ ಆಗಿ, ಕೊನೆಗೆ ಚಿತ್ರದುರ್ಗಕ್ಕೆ ವರ್ಗವಾಗಿದ್ದ. ಅದೇನೊ ಅಂತಾರಲ್ಲ, 'ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ಹೇಳಿದ್ದೂ ಹಾಲು ಅನ್ನ' ಹಾಗೆ ಚಿತ್ರದುರ್ಗದ ಸೆರಗು ಸೇರಿಕೊಂಡದ್ದು ಅವನ 'ನಾಟ'ಗಳ್ಳತನಕ್ಕೆ ಮತ್ತಷ್ಟು ಸಲೀಸಾಗಿತ್ತು. ಏಕೆಂದರೆ ಈತ ಮೂಲತಃ ಇದೇ ಚಿತ್ರದುರ್ಗ ಜಿಲ್ಲೆಯವನು. ಅಲ್ಲದೆ ಇಲ್ಲಿನ ಕುಲಸ್ಥ ರಾಜಕಾರಣಿಗಳಾದ ಹೊಳಲ್ಕೆರೆ ಮಾಜಿ ಶಾಸಕ ಚಂದ್ರಪ್ಪ ಮತ್ತು ಹೊಸದುರ್ಗ ಮಾಜಿ ಶಾಸಕ ಗೂಳಿಹಟ್ಟಿ ಚಂದ್ರಶೇಖರನ ಬಲಾಢ್ಯ ಬೆಂಬಲವೂ ಸಿಕ್ಕಂತಾಗಿತ್ತು. ಹಾಗಾಗಿ ಒಮ್ಮೆ ಸಸ್ಪೆಂಡಾಗಿದ್ದರೂ ಮರ ಕಡಿಯುವ ಚಟವನ್ನು ಬಿಡಲಿಲ್ಲ. ಚಿತ್ರದುರ್ಗದ ಕುರುಚಲು ಗುಡ್ಡಗಳಿಗೆ ಇಂಥಾ ದುಗ್ಗಪ್ಪ ಗಂಟುಬಿದ್ದಿದ್ದೇ ತಡ ಎರೇಹಳ್ಳಿ, ಕೆನ್ನೆಡ್ಲ, ಕಕ್ಕೇರು, ಉಪ್ಪನಾಯಕನಹಳ್ಳಿ ಹೊಸೂರು ಅರಣ್ಯ ವ್ಯಾಪ್ತಿಯ ದಿವಿನಾದ ನೀಲಗಿರಿ ಮರಗಳು ಬುಡ ಕತ್ತರಿಸಿಕೊಂಡು ಧರೆಗುರುಳತೊಡಗಿದ್ದವು.


ಮಾಜಿ ಶಾಸಕರಾದ ಹೊಳಲ್ಕೆರೆ ಚಂದ್ರಪ್ಪ ಮತ್ತು ಹೊಸದುರ್ಗದ ಗೂಳಿಹಟ್ಟಿಯ ಸ್ವಜಾತಿ ಬೆಂಬಲದ ಜೊತೆಗೆ ಇವನ ಹೆಂಡತಿಯ ಸಂಬಂಧಿಕರು ಸರ್ಕಾರದ ಆಯಕಟ್ಟಿನ ಹುದ್ದೆಗಳಲ್ಲಿರುವುದನ್ನೇ ಬಂಡವಾಳ ಮಾಡಿಕೊಂಡಿರುವ ಫಾರೆಸ್ಟರ್ ದುಗ್ಗಪ್ಪ ಇಲಾಖೆಯ ಉನ್ನತ ಅಧಿಕಾರಿಗಳಿಗೂ ಕ್ಯಾರೆ ಎನ್ನದಷ್ಟು ಕೊಬ್ಬಿ ಹೋಗಿದ್ದಾನೆ. ಮೊದಲು ಈತ ಇದ್ದದ್ದು ಚಿತ್ರದುರ್ಗ ರೇಂಜಿನಲ್ಲೇ ಆದರೂ ಸಮೃದ್ಧ ಹೊಳಲ್ಕೆರೆ ರೇಂಜಿಗೆ ಕಣ್ಣಿಟ್ಟ ದುಗ್ಗಪ್ಪ ತನ್ನೆಲ್ಲಾ ರಾಜಕೀಯ ಮತ್ತು ಅಧಿಕಾರಶಾಹಿ ಪ್ರಭಾವ ಬೀರಿ ಅಲ್ಲಿಗೆ ಡೆಪ್ಯುಟೇಷನ್ ಮಾಡಿಸಿಕೊಂಡು ಬಂದಿದ್ದ. ಅಲ್ಲಿಂದಲೂ ದಬ್ಬಿಸಿಕೊಂಡು ಜೋಗಿಮಟ್ಟಿ ಅರಣ್ಯವ್ಯಾಪ್ತಿಗೆ ವಕ್ಕರಿಸಿಕೊಂಡ ದುಗ್ಗಪ್ಪ ಮಾಡಿದ ಮೊದಲ ಕೆಲಸವೆಂದರೆ ತನ್ನ ತಮ್ಮಂದಿರಿಗೆ ಲಾರಿ ಕೊಡಿಸಿ ನಾಟಾಗಳ್ಳತನ ದಂಧೆಯಲ್ಲಿ ಭರ್ಜರಿ ಟ್ರೈನಿಂಗ್ ಕೊಟ್ಟು ಪಳಗಿಸಿದ್ದು. ಅವನ ತಮ್ಮಂದಿರ ಲಾರಿಗಳು ಇಲ್ಲಿ ಹಗಲುರಾತ್ರಿ ಎನ್ನದೆ ನಿರಂತರವಾಗಿ ಕುಯ್ಯ್‌ಗುಟ್ಟುತ್ತಿರುತ್ತವೆ. ಮೊನ್ನೆ ಅದೇ ಲಾರಿಯಲ್ಲೆ ಕೆನ್ನೆಡ್ಲು ಅರಣ್ಯ ಪ್ರದೇಶದಲ್ಲಿದ್ದ ನೀಲಗಿರಿ ತೋಪನ್ನೆಲ್ಲ ಕಡಿದು ತುಂಬಿಸಿಕೊಂಡು ಬೆಂಗಳೂರಿನ ಕಲಾಸಿಪಾಳ್ಯದಲ್ಲಿ ಅನ್‌ಲೋಡ್ ಮಾಡಿಬಂದಿದ್ದ.



ದುಗ್ಗಪ್ಪನ 'ಕಾಡಾ'ಟ ಕೇವಲ ಮರಗಳಿಗಷ್ಟೆ ಸೀಮಿತವಾದದ್ದಲ್ಲ. ಅರಣ್ಯದ ಸಕಲಷ್ಟು ಸಂಪತ್ತನ್ನೂ ಇನ್ನಿಲ್ಲದಂತೆ ಗೆಬರುವುದೇ ತನ್ನ ಆಜನ್ಮ ಸಿದ್ಧಹಕ್ಕು ಎಂದು ನಂಬಿಕೊಂಡಿದ್ದಾನೆ. ಇತ್ತೀಚೆಗಷ್ಟೆ ಹೊಸೂರು ಗ್ರಾಮದ ವ್ಯಾಪ್ತಿಯ ಕಾಡಲ್ಲಿ ಎರಡು ಕರಡಿಗಳು ಸತ್ತು ಬಿದ್ದಿದ್ದವು. ಅದು ಸಹಜ ಸಾವಂತೂ ಆಗಿರಲಿಲ್ಲ. ಅಂಥಾ ಸಮಯದಲ್ಲಿ ಪ್ರಾಣಿಗಳ ದೇಹದ ಪಂಚನಾಮೆ ಮಾಡಿ ಪ್ರಾಣಿಗಳ ಸಾವಿಗೆ ಸೂಕ್ತ ಕಾರಣರಾದವರನ್ನು ಹುಡುಕಿ ಶಿಕ್ಷಿಸಬೇಕಾದ್ದು ಅರಣ್ಯ ಇಲಾಖೆಯ ಕರ್ತವ್ಯ. ಆದರೆ ಅಂತಹ ಸಾಹಸಕ್ಕೆ ಕೈಹಾಕಿದ್ದೇ ಆದರೆ ಸುತ್ತಿಬಳಸಿ ತನ್ನ ಬುಡಕ್ಕೇ ಬಂದು ನಿಲ್ಲುತ್ತದೆ ಎಂಬುದು ದುಗ್ಗಪ್ಪನಿಗೆ ಸ್ಪಷ್ಟವಾಗಿ ತಿಳಿದಿತ್ತು. ಹಾಗಾಗಿ ರಾತ್ರೋರಾತ್ರಿ ಒಂದು ಕರಡಿ ದೇಹವನ್ನು ಅರಣ್ಯದಲ್ಲೇ ಸುಟ್ಟು ಹಾಕಿಸಿದ್ದ. ಮತ್ತೊಂದನ್ನು ಅಲ್ಲೇ ಪಕ್ಕದಲ್ಲಿ ಟ್ರಂಚಿನಲ್ಲಿ ಬೇಕಾಬಿಟ್ಟಿ ಹೂತು ಕೈತೊಳೆದುಕೊಂಡಿದ್ದ. ಅಕಸ್ಮಾತ್ತಾಗಿ ಮಣ್ಣಿನಲ್ಲಿ ಹೂತಿಟ್ಟಿದ್ದ ಕರಡಿಯ ದೇಹ ಜನರ ಕಣ್ಣಿಗೆ ಬಿದ್ದು ಇಡೀ ರಾದ್ಧಾಂತ ಬಟಾಬಯಲಾಗಿತ್ತು. ಹಿರಿಯ ಅಧಿಕಾರಿಗಳವರೆಗೆ ಸುದ್ದಿ ಮುಟ್ಟಿದ್ದರಿಂದ ತನಿಖೆ ನಡೆಸಿ ಕಾಡುಪ್ರಾಣಿ ಕೊಂದವರನ್ನು ಪತ್ತೆ ಮಾಡುವ ಕಾಯಕ ದುಗ್ಗಪ್ಪನ ಹೆಗಲೇರಿತ್ತು. ಎಳೆದಷ್ಟೂ ತನ್ನ ಪೈಜಾಮದ ಲಾಡಿಯೇ ಹೊರಕ್ಕೆ ಬರುತ್ತೆ ಎಂಬುದು ದುಗ್ಗಪ್ಪನಿಗೆ ಗೊತ್ತಿದ್ದುದರಿಂದ ಅಸಲೀ ಕೊಲೆಗಡುಕರನ್ನು ಹಿಡಿಯುವ ಬದಲು ಹೊಸೂರಿನ ಮುಗ್ಧ ರೈತರನ್ನು ಕರಡಿ ಸಾವಿನ ಪ್ರಕರಣದಲ್ಲಿ ಫಿಟ್ ಮಾಡಿ ಎಫ್.ಐ.ಆರ್ ಬರೆಸಿಬಿಟ್ಟ. ಇವನ ಕಾಟ ತಾಳದೆ ನಿಷ್ಪಾಪಿ ರೈತರು ಊರು ತೊರೆದು ತಲೆ ಮರೆಸಿಕೊಳ್ಳಬೇಕಾಗಿದೆ. ದುಗ್ಗಪ್ಪನ ಲಂಪಟತನವನ್ನು ಬೆತ್ತಲಾಗಿಸಲು ಹಾಗೂ ನಿಂತ ಜಾಗದಲ್ಲೇ ಅವನನ್ನು ಮನೆಗೆ ಕಳುಹಿಸಲು ಇದೊಂದು ಕರ್ತವ್ಯಲೋಪ ಸಾಕು. ಆದರೂ ಜಿಲ್ಲಾ ಅರಣ್ಯಾಧಿಕಾರಿ ಚಂದ್ರಶೇಖರನಾಯಕ, ಎ.ಎಸ್.ಎಫ್ ಶ್ರೀನಿವಾಸ್, ಆರ್.ಎಫ್.ಓ ಮೊಹಮ್ಮದ್ ಬಶೀರ್‌ರಂಥ ದಕ್ಷ ಅಧಿಕಾರಿ ಎನಿಸಿಕೊಂಡವರೂ ಇವನ ಪ್ರಭಾವದ ಮುಂದೆ ಗಪ್‌ಚುಪ್ ಆಗಿದ್ದಾರೆ.

ಹಾಗೆ ನೋಡಿದರೆ, ಇವನು ತೊಟ್ಟ ಯೂನಿಫಾರ್ಮ್ ಕಳಚಲು ಇಂತಹ ಹತ್ತಾರು ಭಾನಗಡಿಗಳ ಸಾಕ್ಷಿ ಇವೆ. ಕಸವನಹಳ್ಳಿ ಅರಣ್ಯ ಪ್ರದೇಶದಲ್ಲಿ ಪ್ರಭಾವಿ ರೈತನೊಬ್ಬ ಐದು ಎಕರೆ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಉಳುಮೆ ಮಾಡುತ್ತಿದ್ದ. ಇದು ಇಲಾಖೆಯ ಗಮನಕ್ಕೆ ಬಂದು ಒತ್ತುವರಿ ಅರಣ್ಯಭೂಮಿಯನ್ನು ತೆರವುಗೊಳಿಸಿ ನೀಲಗಿರಿ, ತೇಗ, ಹೊನ್ನೆ ಸಸಿಗಳನ್ನು ನೆಡಲಾಗಿತ್ತು. ಅವೆಲ್ಲ ಬೆಳೆದು ನಿಂತಿದ್ದವು. ಆದರೆ ದುಗ್ಗಪ್ಪ ಇಲ್ಲಿಗೆ ವಕ್ಕರಿಸುತ್ತಿದ್ದಂತೆಯೇ ಆ ರೈತನಿಂದ 30 ಸಾವಿರ ಲಂಚ ಪಡೆದು ಅವನ ಸುಪರ್ದಿಗೆ ಭೂಮಿ ಒಪ್ಪಿಸಿದ್ದಲ್ಲದೆ ಉಳುಮೆಗೆ ಅನುಕೂಲ ಮಾಡಿಕೊಡಲು ಬೆಳೆದುನಿಂತಿದ್ದ ಮರಗಳನ್ನು ತಾನೇ ಮುಂದೆ ನಿಂತು ಕಡಿಸಿದ್ದ. ಆ ಮರಗಳನ್ನು ಮಾರಿಕೊಂಡ ಹಣ ಯಾರಪ್ಪನ ತಿಜೋರಿ ಸೇರಿತೆಂಬುದನ್ನು ಬಿಡಿಸಿ ಹೇಳುವ ಅಗತ್ಯವೇ ಇಲ್ಲ.

ಇಲ್ಲಿನ ಅರಣ್ಯವ್ಯಾಪ್ತಿ ಬುಡಕಟ್ಟು ಜನಾಂಗಗಳಿಗಂತೂ ಫಾರೆಸ್ಟರ್ ದುಗ್ಗಪ್ಪನ ಹೆಸರು ಕೇಳಿದರೇ ನಡುಕ ಹುಟ್ಟುತ್ತದೆ. ಆ ಪರಿ ಮುಕ್ಕಿ ತಿನ್ನುತ್ತಿದ್ದಾನೆ. ಅರಣ್ಯ ಇಲಾಖೆಯಿಂದ ಬುಡಕಟ್ಟು ಪಂಗಡಗಳ ಸ್ವಾವಲಂಬನೆಗೆಂದು ಬಿಡುಗಡೆಯಾಗುವ ಸೌಲಭ್ಯಗಳೆಲ್ಲ ಇವನ ಬಕಾಸುರ ಬಾಯಿ ಸೇರುತ್ತಿವೆ. ಎಸ್‌ಸಿ, ಎಸ್‌ಟಿ ಪಂಗಡದವರೇ ಹೆಚ್ಚಾಗಿರುವ ಕಕ್ಕೇರು ಗ್ರಾಮದ ಜನರಿಗೆ ಮನೆ ಕಟ್ಟಿಕೊಳ್ಳಲು ಅಥವಾ ಗೃಹಕೈಗಾರಿಕೆ ನೆರವಾಗಲೆಂದು ಸರ್ಕಾರ ಪ್ರತಿ ಕುಟುಂಬಕ್ಕೆ 12 ಬೊಂಬುಗಳನ್ನು ನೀಡುತ್ತಿದೆ. ಆದರೆ ಅವುಗಳಲ್ಲಿ ಫಲಾನುಭವಿಗಳ ಕೈ ಸೇರುವುದು ಒಂದೊ, ಎರಡೊ ಮಾತ್ರ. ಇನ್ನುಳಿದವೆಲ್ಲ ದುಗ್ಗಪ್ಪನ ಲೇಬಲ್ ಅಂಟಿಸಿಕೊಂಡು ದುರ್ಗದ ಮ್ಯಾದಾರ ಓಣಿಯಲ್ಲಿ ಬಿಕರಿಯಾಗುತ್ತಿವೆ. ಅಲ್ಲದೆ ಅವರಿಗೆ ನೀಡಲಾಗುವ 400 ಸಬ್ಸಿಡಿ ಗ್ಯಾಸ್ ಸಿಲಿಂಡರ್‌ಗಳಿಗೂ ಕತ್ತರಿ ಹಾಕುವ ದುಗ್ಗಪ್ಪ ಒಂದೊಂದಕ್ಕೂ ಸಾವಿರಾರು ರೂಪಾಯಿ ವಸೂಲು ಮಾಡುತ್ತಿದ್ದಾನೆ. ಇವನ ಅಟ್ಟಹಾಸ ಎಂತದ್ದೆಂದರೆ ಇಲ್ಲಿನ ಗ್ರಾಮ ಪಂಚಾಯತಿಗೆ



200 ಸೋಲಾರ್ ಬೀದಿದೀಪಗಳು ಮಂಜೂರಾಗಿದ್ದಾಗಲೂ ಗ್ರಾಮ ಪಂಚಾಯಿತಿಯಿಂದಲೇ ಕಮೀಶನ್ ಕಬಳಿಸಿದ್ದ.

ಇನ್ನು ಪ್ಲಾಂಟೇಶನ್ ಪ್ರೊಟೆಕ್ಷನ್ ಸ್ಕೀಮ್‌ನಲ್ಲಿ ಪ್ರತಿ ತಿಂಗಳು ಏನಿಲ್ಲವೆಂದರೂ ಲಕ್ಷಾಂತರ ರೂಪಾಯಿ ಜೇಬಿಗಿಳಿಸಿಕೊಳ್ಳುತ್ತಾನೆ. ಈ ಸ್ಕೀಮಿನಡಿ ಅರಣ್ಯ ಪ್ರದೇಶದಲ್ಲಾಗುವ ಲೂಟಿ ತಪ್ಪಿಸಲು ಮತ್ತು ಸಸಿಗಳನ್ನು ಆರೈಕೆ ಮಾಡಲು 25 ಜನ ವಾಚರ್‌ಗಳನ್ನು ದಿನಗೂಲಿ ಆಧಾರದಲ್ಲಿ ನೇಮಕ ಮಾಡಿಕೊಳ್ಳಬೇಕೆನ್ನುವುದು ಸರ್ಕಾರದ ನಿಯಮ. ಆದರೆ ಕಳ್ಳಲೆಕ್ಕದಲ್ಲಿ ಪಿಎಚ್‌ಡಿ ಪಡೆದಿರುವ ದುಗ್ಗಪ್ಪ ಅಕೌಂಟ್ ಪುಸ್ತಕಗಳಲ್ಲಿ 25 ಬೋಗಸ್ ಹೆಸರನ್ನು ತೋರಿಸುತ್ತಾನಾದರೂ ನೇಮಕ ಮಾಡಿಕೊಂಡಿರೋದು ಕೇವಲ 6 ಜನರನ್ನು ಮಾತ್ರ. ಅವರಿಗಾದರೂ ನಿಯತ್ತಾಗಿ ಸಂಬಳ ನೀಡುತ್ತಾನ? ಅದೂ ಇಲ್ಲ! ಸರಕಾರ ಈ ವಾಚರ್‌ಗಳಿಗೆ ನೀಡುವ ದಿನಗೂಲಿಯಂತೆ ತಿಂಗಳಿಗೆ 7 ಸಾವಿರ ಸಂದಾಯವಾಗಬೇಕು. ಆದರೆ ದುಗ್ಗಪ್ಪ ಪ್ರತಿ ವಾಚರ್‌ಗೆ ದಯಪಾಲಿಸೋದು 4 ಸಾವಿರ ಮಾತ್ರ. ಲೆಕ್ಕ ನೀಡದೆ 19 ಜನ ಬೇನಾಮಿ ಹೆಸರಿನ ವಾಚರುಗಳ 1.33 ಲಕ್ಷ ರೂಪಾಯಿ ಮತ್ತು 6 ಜನರ ಸಂಬಳದಿಂದ ಕಿತ್ತುಕೊಂಡ 18 ಸಾವಿರ ರೂಪಾಯಿಗೆ ದುಗ್ಗಪ್ಪನೇ ಒಡೆಯ.


ಈ ದುಗ್ಗಪ್ಪನ ಧನದಾಹ ಎಂತದ್ದೆಂಬುದಕ್ಕೆ ಕಸವನಹಳ್ಳಿಯ ಪ್ಲಾಂಟೇಷನ್ನೇ ಸಾಕ್ಷಿ. ಇಲ್ಲಿ ನಾಲ್ಕು ವರ್ಷದ ಹಿಂದೆಯೇ ಒಂದು ಪ್ಲಾಂಟೇಶನ್ ಮಾಡಲಾಗಿದೆ. ಹೊಂಗೆ, ಸಿಮಾರೋಬ, ಆಲ, ಅರಳಿ ಸಸಿಗಳನ್ನು ನೆಟ್ಟು ಬೆಳೆಸಲಾಗುತ್ತಿದೆ. ಅದೇರೀತಿ ಇಲ್ಲಿಯೇ ಮತ್ತೊಂದು ಪ್ಲಾಂಟೇಷನ್ ಮಾಡುವಂತೆ ಸರ್ಕಾರ ಆದೇಶಿಸಿತ್ತು. ಅದರ ಸಂಪೂರ್ಣ ಜವಾಬ್ದಾರಿ ದುಗ್ಗಪ್ಪನ ಹೆಗಲೇರಿತ್ತು. ಆದರೆ ಈತ ಹೊಸ ಪ್ಲಾಂಟೇಷನ್ ಮಾಡುವ ಬದಲು ಈ ಮೊದಲೇ ಇದ್ದ 4 ವರ್ಷದ ಹಿಂದಿನ ಹಳೆಯ ಪ್ಲಾಂಟೇಶನ್ನೆ ಹೊಸದೆಂದು ಬದಲಾಯಿಸಿ ಭರ್ಜರಿ ದುಡ್ಡು ಬಾಚಿಕೊಂಡಿದ್ದ.


ಭೀಮಸಮುದ್ರ, ಮೆದಿಕೇಪುರ ಅರಣ್ಯ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿದ್ದಾಗ ಅಲ್ಲಿ ನಡೆಯುತ್ತಿದ್ದ ಅಕ್ರಮ ಗಣಿಗಾರಿಕೆಯ 'ತೌಡು' ಇವನ ಬಾಯನ್ನು ಭಯಂಕರವಾಗೇ ಬಂದು ಸೇರುತ್ತಿತ್ತು. ಅದಿರು ಸಾಗಾಣಿಕೆ ಲಾರಿಗಳಿಗೆ ಈ ಭೂಪನೇ ಪರ್ಮಿಟ್ಟು ನೀಡಬೇಕಾಗಿತ್ತಾದ್ದರಿಂದ ದುಗ್ಗಪ್ಪನ ಕಮಾಯಿಯ ಗ್ರಾಫು ಎಗ್ಗಿಲ್ಲದಂತೆ ಏರಿತ್ತು. ಒಂದೊಂದು ಲಾರಿಯಿಂದಲೂ 20 ರೂಪಾಯಿಯಂತೆ ಆಮೇದ್ಯ ನೆಕ್ಕುತ್ತಿದ್ದ ಈತ ದಿನದಾಂತ್ಯಕ್ಕೆ ಮೈನಿಂಗ್ ಲಾರಿಗಳಿಂದ 2000 ರೂಪಾಯಿ ಕಮಾಯಿ ಕಂಡ ನಂತರವೇ ಮನೆಗೆ ಹೋಗುತ್ತಿದ್ದ. ಒಮ್ಮೊಮ್ಮೆ ಪರ್ಮಿಟ್ ಮೀರಿದ ಲಾರಿಗಳೇನಾದರು ಇವನ ಕೈಗೆ ಸಿಕ್ಕಿಕೊಂಡರೆ ಮುಲಾಜಿಲ್ಲದೆ 40 ರಿಂದ 50 ಸಾವಿರ 'ಭಕ್ಷೀಸು' ಕಕ್ಕಿಸುತ್ತಿದ್ದ. ದುಗ್ಗಪ್ಪ ಅಲ್ಲಿಂದಲೇ ಅರಣ್ಯ ಇಲಾಖೆಯ ಗೂಳಿಯಂತಾದದ್ದು. ಅಂಥಾ ಹಡಬೇ ರೊಕ್ಕದಲ್ಲೆ ತಮ್ಮಂದಿರಿಗೆ ಲಾರಿ ಕೊಡಿಸಿ, ತಾನೊಂದು ಸ್ವಿಫ್ಟ್ ಕಾರು ಖರೀದಿಸಿ ಮೆರೆದಾಡುತ್ತಿರೋದು. ಯಾವಾಗ ದುಗ್ಗಪ್ಪ ಮೈನಿಂಗ್ ಮಾಫಿಯಾದಿಂದ ದುಂಡಗಾಗತೊಡಗಿದನೊ, ಪ್ರತಿದಿನ ಕಮಾಯಿಸುವ ಲಂಚವೇ 40 ರಿಂದ 50 ಸಾವಿರ ಗಡಿದಾಟಿತು. ದುಗ್ಗಪ್ಪನ ಮೋಜಿನಾಟ ಬಯಲಾದದ್ದೇ ತಡ ಮೇಲಧಿಕಾರಿಗಳು ಹೊಳಲ್ಕೆರೆಯಿಂದಲೇ ಕಿತ್ತೊಡೆದು ದುರ್ಗಕ್ಕೆ ದಬ್ಬಿದ್ದರು. ಹಾಗೆ ಬಂದವನ ಧನದಾಹಕ್ಕೆ ಚಿತ್ರದುರ್ಗದ ಜೋಗಿಮಟ್ಟಿ ಕಾಯ್ದಿಟ್ಟ ಅರಣ್ಯ ಪ್ರದೇಶವೇ ಬಲಿಯಾಗುತ್ತಿರೋದು ದುರಂತ. ಇಲಾಖೆ ಈಗಲಾದರೂ ಎಚ್ಚೆತ್ತುಕೊಂಡು ದುಗ್ಗಪ್ಪನ ದುಬ್ಬಕ್ಕೆ ಬಾರಿಸದಿದ್ದರೆ ಅರಣ್ಯ ಸಂಪತ್ತನ್ನು ಮುಕ್ಕುವುದಷ್ಟೇ ಅಲ್ಲ, ಇಲಾಖೆಯ ಮಾನವನ್ನು ಮೂರು ಕಾಸಿಗೆ ಹರಾಜಾಕೋದು ಗ್ಯಾರಂಟಿ.

■ ಟಿ.ಎನ್.ಷಣ್ಮುಖ

ವಿ. ಭಟ್ಟ ಮತ್ತು ಅತ್ಯಾಚಾರಿ ಭಟ್ಟ

ಸಾಮಾಜಿಕ ಹೋರಾಟಗಾರ್ತಿ ಎನ್.ಪ್ರಭಾ ಅವರ ವಿರುದ್ಧ ಕಟ್ಟಾ ಕೊಳಕು ಅಭಿಪ್ರಾಯವನ್ನು ಫೇಸ್‌ಬುಕ್ ಎಂಬ ಸಾಮಾಜಿಕ ತಾಣದಲ್ಲಿ ವ್ಯಕ್ತಪಡಿಸಿದಕ್ಕೆ ಪೊಲೀಸರು ಅತ್ಯಾಚಾರಿ ವಿ.ಆರ್.ಭಟ್ ಎಂಬ ಆರೆಸ್ಸೆಸ್ ಕ್ರಿಮಿಯನ್ನು ಬಂಧಿಸಿದ್ದಾರೆ. ಆದರೆ ಇದು ಪತ್ರಿಕಾ ವಲಯದಲ್ಲಿ ಎಂತಹ ಆತಂಕ ಮೂಡಿಸಿದೆ ಎಂದರೆ ಪ್ರಭಾ ಅವರ ಕಾನೂನಾತ್ಮಕ ಕ್ರಮದ ವಿರುದ್ಧ ಅವರೆಲ್ಲರೂ ಕೆಂಡಕಾರುತ್ತಿದ್ದಾರೆ.






ಅದರಲ್ಲೂ ವಿಶ್ವೇಶ್ವರ ಭಟ್ಟರು ತಮ್ಮ 'ಕನ್ನಡ ಪ್ರಭಾ' ಪತ್ರಿಕೆಯಲ್ಲಿ ಮಹಿಳಾ ಹೋರಾಟಗಾರ್ತಿ ಪ್ರಭಾ ಅವರ ವಿರುದ್ಧ ತಮ್ಮ ಸಿಬ್ಬಂದಿಯಿಂದ ಪ್ರತಿನಿತ್ಯ ಒಂದು ವಿಶೇಷ ಲೇಖನವನ್ನು ಬರೆಸಿ ಅದನ್ನು ಪ್ರಕಟಿಸುತ್ತಾ ಅತ್ಯಾಚಾರಿ ಭಟ್ಟನ ಪರ ವಕಾಲತ್ತು ವಹಿಸುತ್ತಿರುವಂತಿದೆ. ವಿಶ್ವೇಶ್ವರ ಭಟ್ಟರು ಈಗ ಯಾವನ ಪರ ನಿಂತಿದ್ದಾರೋ ಆತನೇ ಹಿಂದೊಮ್ಮೆ ತಮ್ಮ ಮತ್ತು ತಮ್ಮ ಸಿಬ್ಬಂದಿಯ ಬಗ್ಗೆ ಎಂತೆಂತಹ ಮಾತುಗಳನ್ನು ತನ್ನ ಬ್ಲಾಗ್‌ನಲ್ಲಿ ಬರೆದಿದ್ದ ಎಂಬುದು ಪಾಪ ಅವರಿಗೆ ಗೊತ್ತಿರುವಂತಿಲ್ಲ. ಅವರೆಲ್ಲರ ಗಮನಕ್ಕೆ ಅತ್ಯಾಚಾರಿ ಭಟ್ಟ ಬರೆದಿದ್ದನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ:

"'ಅಂಡೆಪಿರ್ಕಿ' ಎಂಬ ಪದವನ್ನು ತಿಂಗಳಾನುಗಟ್ಟಲೆ ಧಾರಾವಾಹಿಯಂತೆ 'ವಿಜಯ ಕರ್ನಾಟಕ'ದಲ್ಲಿ ಕೊರೆದಿದ್ದ ಭಟ್ಟರು ಅಲ್ಲಿಯೂ, ಈಗಿರುವ 'ಕನ್ನಡಪ್ರಭ'ದಲ್ಲಿಯೂ ರಿಚರ್ಡ್ ಬ್ರಾನ್ಸನ್ ಮತ್ತು ಜಹಾಂಗೀರ್ ಇಂತಹ ಕೆಲವು ವಿಷಯಗಳನ್ನು ಬಿಟ್ಟು ಬೇರೇ ಯಾವುದರ ಹುಡುಕಾಟಕ್ಕೆ ತೊಡಗಿಕೊಳ್ಳಲಿಲ್ಲ, ಹೆಚ್ಚೆಂದರೆ ಚೀನಾ ಗೋಡೆಯ ಮೇಲೆ ನಡೆದು ನಡೆದಿದ್ದು-ನಿಂತಿದ್ದು, ಪ್ರಧಾನಿಯ ಜೊತೆ ವಿಮಾನಯಾನದಲ್ಲಿ ಸಹಯಾತ್ರೆ ಮಾಡಿದ್ದು, ಇಂಥಾ ಹೈಲೆವೆಲ್ ಪ್ರವಾಸಗಳ ಕುರಿತು ಕೆಲವು ದಿನ ಕೊರೆದಿದ್ದು-ಕೊಚ್ಚಿಕೊಂಡಿದ್ದು ಬಿಟ್ಟರೆ ಕನ್ನಡ ಸಾಹಿತ್ಯದ ಮಜಲುಗಳ ಮತ್ತು ಅದರ ಆಳ-ವಿಸ್ತಾರಗಳ ಬಗೆಗಿನ ಪರಿಜ್ಞಾನವಿತ್ತೆ ಭಟ್ಟರಿಗೆ ಸಿದ್ಧಿಸಲಿಲ್ಲ ಎಂಬುದನ್ನು ಅನೌಪಚಾರಿಕವಾಗಿ ಒಪ್ಪಬೇಕಾದ ವಿಷಯವಾಗಿದೆ.

'ಕುಳಿತೋದದೆಯುಂ ಕಾವ್ಯ ಪರಿಣತಮತಿಗಳ್' ಎಂದ ಕನ್ನಡ ಕವಿಯ ಒಕ್ಕಣೆಯಂತೇ, ಕುಳಿತಲ್ಲೇ ಏನನ್ನೂ ಓದದೇ ಕೆಲವರು ಪಂಡಿತರಾಗಲೂಬಹುದು ಎಂಬುದು ಅಂದೇ ಸಾಧ್ಯವಾಗಿತ್ತು ಎನಿಸುತ್ತದಲ್ಲಾ? ಅಂತೆಯೇ ಭಟ್ಟರೂ ಕೂಡ ಹಾಗೇ ಪಂಡಿತವರ್ಗದಲ್ಲಿ ಸೇರಿರುವುದರ ಜೊತೆಗೆ ಮಹಾಪಂಡಿತ ಎಂಬ ಬಿರುದನ್ನೂ ಪಡೆಯಲು ಅವಿರತ ತೊಡಗಿಕೊಂಡಿರುವುದು ವೇದ್ಯವಾಗುತ್ತದೆ. ಹೀಗಾಗಿ ಅವರು ಆಗಾಗ ಹಿರಿಯ ಕವಿ-ಸಾಹಿತಿಗಳ ಸುತ್ತ ಮತ್ತು ಯಾವುದೋ ಕೆಲವೊಂದು ಪದಗಳ ಸುತ್ತ ಗಿರಕಿಹೊಡೆಯಲು ಆರಂಭಿಸಿ ತಲೆಸುತ್ತು ಬಂದು ಸುಸ್ತಾದವರಂತೆ ಕಾಣಿಸುತ್ತಾರೆ! ರಾಜಕೀಯದಲ್ಲಿ ಪ್ರಭಾವಲಯ ಸೃಷ್ಟಿಸುವುದರಲ್ಲಿ ಮತ್ತು ತಾನು 'ಮಹಾಪಂಡಿತ' ಎನಿಸಿಕೊಳ್ಳುವ ತಂತ್ರಗಾರಿಕೆಯಲ್ಲಿ ಅವರಿಗೆ ಪ್ರಾವೀಣ್ಯತೆ ಇದೆ ಎಂಬುದು ಸುಳ್ಳಲ್ಲ. ಹಾಗೆಂದೇ ಗಿಂಡಿ ಹಿಡಿದವರು, ಪ್ರಪಂಚ ಬೆತ್ತಲು ಮಾಡುವವರು, ಬುದ್ಧಬುದಿಕೆ ಬಾರಿಸುವವರು, ರೀಡರ್ಸ್ ಡೈಜೆಸ್ಟ್ ಲೇಖನಗಳನ್ನು ಕನ್ನಡಕ್ಕೆ ಭಟ್ಟಿ ಇಳಿಸುವವರು ಮೊದಲಾದವರೆಲ್ಲಾ ಸದಾ ಬೆತ್ತವನ್ನೋ ಕತ್ತಿಯನ್ನೋ ಹಿಡಿದ 'ಕರಗ'ದ ವ್ರತಧಾರಿಗಳಂತೇ ಅವರ ಸುತ್ತ 'ಸಭಾರತ್ನ'ಗಳಾಗಿ ಶೋಭಿಸುತ್ತಾರೆ!"

ಮಾಧ್ಯಮ ಸಹೋದ್ಯೋಗಿಗಳಾದ ವಿಶ್ವೇಶ್ವರ ಭಟ್ಟರಿಗೆ ಮತ್ತು ಅವರ ಸಿಬ್ಬಂದಿಗಳಿಗೆ ತಾವು ಎಂತಹ ಮಸಲತ್ತುಗಾರನ ಪರ ವಕಾಲತ್ತು ವಹಿಸಿದ್ದೇವೆ ಎಂಬುದು ಈಗಲಾದರೂ ಅರ್ಥವಾಗಲಿ ಎಂದು ಆಶಿಸುತ್ತೇವೆ. ಇಲ್ಲವೆಂದರೆ ಮಹಿಳೆಯರಿಗೆ ಗೌರವ, ನ್ಯಾಯ, ಮರ್ಯಾದೆ ಕೊಡುವ ಮೌಲ್ಯಗಳಿಗಿಂತ ವಿಕೃತಿಗೆ ಜನಿವಾರದ ಗಂಟೇ ಮುಖ್ಯವಾಗಿದೆ ಎಂದು ಪ್ರಜ್ಞಾವಂತರು ನಿರ್ಧರಿಸುವ ಅನಿವಾರ್ಯತೆ ಎದುರಾಗುತ್ತದೆ. ಅಲ್ಲವೇ...

ಪಕ್ಷಕ್ಕೆ ಕೈ! ಗೂಟದ ಕಾರಿಗೆ ಜೈ!!



ಎಲ್ಲಿಯತನಕ ಪರಮೇಶ್ವರ್ ಕಾಟವಿರುತ್ತೋ ಅಲ್ಲೀತನಕ ಜೆಡಿಎಸ್, ಬಿಜೆಪಿಗಳ ಪಾಲಿಗೆ ನಿರುದ್ಯೋಗ ಭತ್ಯೆಯೂ ನಿಲ್ಲುವುದಿಲ್ಲ...!

ಕೊಂಚ ಆಚ್ಚರಿಯೆನಿಸಿದರೂ ಸಿದ್ದು ಸರ್ಕಾರದ ಬಗ್ಗೆ ರಾಜಕೀಯ ಕಾರಿಡಾರ್‌ಗಳಲ್ಲಿ ಕೇಳಿಬರುವ ಕುಚೋದ್ಯವಿದು. ಅಂದರೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ವಿರೋಧ ಪಕ್ಷಗಳಿಗಿಂತಲೂ ಪಾರ್ಟಿ ಅಧ್ಯಕ್ಷರೇ ದೊಡ್ಡ ತಲೆನೋವು!

ಅದನ್ನು ರಾಜಕಾರಣದ ಪರಿಭಾಷೆಯಲ್ಲಿ ಥ್ರೆಟ್ ಅನ್ನುವವರೂ ಇಲ್ಲದಿಲ್ಲ. ಅಂದರೆ ಭೀತಿ. ಸಾಮಾನ್ಯವಾಗಿ ಮುಖ್ಯಮಂತ್ರಿಯಾದವರಿಗೆ ಬೆದರಿಕೆಯಿರುವುದು ವಿರೋಧ ಪಕ್ಷಗಳಿಂದ. ರಾಜಕೀಯವಾಗಿ ಆಳುವ ಸರ್ಕಾರದ ಪ್ರತಿ ಹುಳುಕನ್ನೂ ವಿರೋಧ ಪಕ್ಷಗಳು ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತವೆ. ಆದರೆ ಕರ್ನಾಟಕದ ವಿಷಯದಲ್ಲಿ ಪಕ್ಷದ ಅಧ್ಯಕ್ಷನೇ ಸರ್ಕಾರದ ಪಾಲಿಗೆ ವಿರೋಧಿ, ಪೀಡಕ, ಕಂಟಕ, ಭಂಜಕ!

ಸದ್ಯ ಡೀನೋಟಿಫಿಕೇಷನ್ ಹಿಡಿದು ಬಿಜೆಪಿ ಸಿದ್ದು ಬುರುಡೆಗೆ ಬಿಸಿನೀರು ಕಾಯಿಸುತ್ತಿದೆ. ಅತ್ಯಾಚಾರಗಳ ವಿಷಯದಲ್ಲಿ ಪ್ರತಿನಿತ್ಯ ಮೀಡಿಯಾಗಳ ತಲೆ ನೋವಿದೆ. ಒಂದೆಡೆ ನೆರೆ ಮತ್ತೊಂದೆಡೆ ಬರ. ಸಾಲದ್ದಕ್ಕೆ ಒಂದಲ್ಲ ಮೂರು ಕ್ಷೇತ್ರಗಳಲ್ಲಿ ಉಪ ಚುನಾವಣೆಯ ಸಂಕಷ್ಟ. ಸೋತರೆ ಸರ್ಕಾರಕ್ಕೆ ಪ್ರಾಣಸಂಕಟ. ಇಂಥಾದ್ದರಲ್ಲಿ ಆಳುವ ಪಕ್ಷದ ಅಧ್ಯಕ್ಷನೊಬ್ಬ ಯಾಪಾಟ ಹೊಣೆಗಾರಿಕೆಯಿಂದ ವರ್ತಿಸಬೇಕು; ಯಾವ ವಿಷಯದಲ್ಲಿ ತಲೆ ಕೆಡಿಸಿಕೊಳ್ಳಬೇಕು?

ಕಾಂಗ್ರೆಸ್ ಸೌಭಾಗ್ಯದ ಐಸಿರಿ ಕಂಡು ಅರಿಷಡ್ವರ್ಗಗಳೇ ನಾಚಬೇಕು. ಪಕ್ಷಾಧ್ಯಕ್ಷ ಪರಮೇಶ್ವರ್‌ಗೆ ತನ್ನ ಹುಟ್ಟುಹಬ್ಬದ ಹುಚ್ಚು. ಊರ ತುಂಬಾ ಕಟೌಟು. ಮುಖ್ಯಮಂತ್ರಿಯೇ ತಲೆತಗ್ಗಿಸುವಂತೆ ಪಾರ್ಟಿ ಅಧ್ಯಕ್ಷನ ಬರ್ತ್‌ಡೆ ಬ್ಯಾಷ್. ಸರ್ಕಾರದ ಸಾಧನೆಗಳನ್ನು ಜನತೆಗೆ, ತಲುಪಿಸಬೇಕಾದ ಸರ್ಕಾರದ ಕಾರ್ಯಕ್ರಮಗಳ ಕುರಿತು ಪ್ರಚಾರ ಮಾಡಬೇಕಾದ, ಅದಕ್ಕೆ ತಕ್ಕಂತೆ ಪಾರ್ಟಿ ಕಟ್ಟಲು ಹೆಣಗಬೇಕಾದ, ಲೋಕಸಭೆಯಲ್ಲಿ ವಿರೋಧ ಪಕ್ಷವಾಗುವುದಕ್ಕೂ ಬೆಂಬಲ ಸಾಲದೆ, ಪರದಾಡುವ ಪಕ್ಷದ ದುರ್ಗತಿ ಬಗ್ಗೆ ಕಿಂಚಿತ್ತೂ ತಲೆಕೆಡಿಸಿಕೊಳ್ಳದೆ ಸಂಘಟನಾವಿಹೀನ ಅಧ್ಯಕ್ಷನೊಬ್ಬ ಅದ್ಯಾವ ಮುಖಹೊತ್ತು ತನ್ನ ಬರ್ತ್‌ಡೆ ಆಡಂಬರಕ್ಕಿಳಿಯಬಲ್ಲ?

ಹಾಳಾಗಲಿ; ತನ್ನ ಹುಟ್ಟುಹಬ್ಬದ ವೇದಿಕೆಯಿಂದ ಪರಮೇಶ್ವರ್ ಆಡಿದ ಮಾತುಗಳಾದರೂ ಎಂಥಾದ್ದು?

'ಪಕ್ಷದ ಅಧ್ಯಕ್ಷರಾದವರೇ ಮುಖ್ಯಮಂತ್ರಿಯಾಗುವುದು ಸಾಮಾನ್ಯ. ಆದರೆ ಅಂಥ ಅವಕಾಶ ನನ್ನ ಕೈತಪ್ಪಿತು. ನನ್ನ ಕ್ಷೇತ್ರದ ಮತದಾರರು ನನ್ನ ಕೈಹಿಡಿಯಲಿಲ್ಲ, ಒಂದು ವೇಳೆ ಯಾವುದೇ ಅಧಿಕಾರ ಸಿಗದೇ ಹೋದರೂ ನನಗೆ ಬೇಸರವಿಲ್ಲ. ಪಾಲಿಗೆ ಬಂದದ್ದು ಪಂಚಾಮೃತ...!'


ಇದರರ್ಥ ಪಕ್ಷದ ಅಧ್ಯಕ್ಷ ಸ್ಥಾನವೆಂಬುದು ಪರಮೇಶ್ವರ್ ಪಾಲಿಗೆ ಹೆಮ್ಮೆಯ ಹುದ್ದೆಯಲ್ಲ. ಅದು ಪಾಲಿಗೆ ಬಂದ ಪಂಚಾಮೃತ ಮಾತ್ರ. ಕ್ಷೇತ್ರದಲ್ಲಿ ಗೆಲ್ಲಲಾಗದೆ ಮುಖ್ಯಮಂತ್ರಿಯಾಗಲು ಸಾಧ್ಯವಿಲ್ಲ ಎಂಬ ಸ್ಪಷ್ಟ ತಿಳಿವಳಿಕೆಯಿದ್ದೂ ಮುಖ್ಯಮಂತ್ರಿಯಾಗುವ ದುರಾಸೆ. ಈಗಿರುವ ಜವಾಬ್ದಾರಿಯುತ ಹುದ್ದೆಯ ಬಗ್ಗೆ ಜಿಗುಪ್ಸೆ, ಪಕ್ಷ ಬೇರೆ ಯಾವುದೇ ಅಧಿಕಾರ ಅಂದರೆ ಮಂತ್ರಿಗಿರಿ ಕೊಟ್ಟರೂ ಅದೇ ಮುಖ್ಯ ಎಂಬ ಹಪಾಹಪಿ!

ತಮಾಷೆಯೆಂದರೆ ಪರಮೇಶ್ವರ್‌ರ ಈ ಹೇಳಿಕೆಗೆ ಪತ್ರಿಕೆಗಳು 'ಯಾವ ಹುದ್ದೆ ಕೊಟ್ಟರೂ ನಿಭಾಯಿಸುವೆ' ಎಂಬ ಹೆಡ್ಡಿಂಗ್ ಕೊಟ್ಟವೆ.

ಪಕ್ಷದ ಅಧ್ಯಕ್ಷನೇ ತನ್ನ ಸ್ಥಾನಮಾನ ಮರೆತು 'ಯಾವ ಹುದ್ದೆ ಕೊಟ್ಟರೂ ನಿಭಾಯಿಸುತ್ತೇನೆ' ಎನ್ನುವುದೇ ಆ ಪಕ್ಷದ ದುರ್ಗತಿಯನ್ನು ಸೂಚಿಸುವುದಿಲ್ಲವೆ? ಅಂದರೆ ಪರಮೇಶ್ವರ್‌ಗೆ ಮುಖ್ಯಮಂತ್ರಿ ಸ್ಥಾನಕ್ಕೆ ಪರ್ಯಾಯವಾದ, ರಾಜಕೀಯವಾಗಿ ಸಿಎಂ ಹುದ್ದೆಗೆ ಸರಿಸಾಟಿಯಾದ ಪಕ್ಷದ ಅಧ್ಯಕ್ಷಗಿರಿಯೆಂಬುದು ಪಾಲಿಗೆ ಬಂದ ಕರ್ಮ ಪಂಚಾಮೃತ!

ಇತ್ತ ಬಿಜೆಪಿ ಅಧ್ಯಕ್ಷ ಜೋಷಿಯನ್ನೇ ನೋಡಿ. ಉಪ ಚುನಾವಣೆಯಲ್ಲಿ ನಾವೇ ಗೆಲ್ಲುತ್ತೇವೆಂದು ಘರ್ಜಿಸುತ್ತಾರೆ. ಕಾಂಗ್ರೆಸ್ ಸರ್ಕಾರದ ವೈಫಲ್ಯ ಹಣಿಯುತ್ತಾರೆ. ಕೇಂದ್ರ ಮಂತ್ರಿ ಸದಾನಂದಗೌಡರೇ, ಪರಮೇಶ್ವರ್ ಬರ್ತ್‌ಡೆ ಎಂಬುದು ಸಿದ್ದು ಸರ್ಕಾರದ ಪಾಲಿಗೆ 'ಡೆತ್ ಡೇ' ಎಂದು ಹೀಯಾಳಿಸಿದ್ದು ಗೊತ್ತಿದ್ದೂ ಪರಮೇಶ್ವರ್ ಉಪಚುನಾವಣೆ ಬಗ್ಗೆ ಚಕಾರವೆತ್ತುವುದಿಲ್ಲ. ಸರ್ಕಾರದ ಸಾಧನೆಗಳ ಬಗ್ಗೆ ಒಂದೇ ಒಂದು ಮಾತಿಲ್ಲ, ಮೋದಿ ಸರ್ಕಾರದ ವಿರುದ್ಧ, ವಿರೋಧಿಗಳ ಅಪಪ್ರಚಾರದ ವಿರುದ್ಧ, ಕಾರ್ಯಕರ್ತರ ಆತ್ಮವಿಶ್ವಾಸ ಉಬ್ಬಿಸುವ, ಮತದಾರರನ್ನು ಮೆಚ್ಚಿಸುವ ಒಂದೇ ಒಂದು ಮಾತಾಡುವುದಿಲ್ಲ,

ಪಕ್ಷದ ಅಧ್ಯಕ್ಷನೊಬ್ಬ ತಾನೇ ಮುಖ್ಯಮಂತ್ರಿಯಾಗಬೇಕು. ಪಾರ್ಟಿ ಅಧ್ಯಕ್ಷ ಸ್ಥಾನ ಮನಸ್ಸಿಲ್ಲದೆ ದಕ್ಕಿದ ಕರ್ಮ, ಯಾವ ಹುದ್ದೆ ಕೊಟ್ಟರೂ ನಿಭಾಯಿಸುತ್ತೇನೆ ಎಂಬರ್ಥದಲ್ಲಿ ಮಾತಾಡುತ್ತಾನೆಂದರೆ ಅಂಥ ಪಕ್ಷಕ್ಕೆ ಮತ್ತು ಸರ್ಕಾರಕ್ಕೆ ಎದುರಾಳಿ ಪಾರ್ಟಿಗಳೇ ಬೇಕಿಲ್ಲ, ಏಕೆಂದರೆ ಆ ಕೆಲಸವನ್ನು ಆ ಪಕ್ಷದ ಅಧ್ಯಕ್ಷನೇ ಮಾಡಿರುತ್ತಾನೆ. ಹಾಗೆ ನೋಡಿದರೆ ಪ್ರಾರಂಭದಿಂದಲೂ ಪರಮೇಶ್ವರ್ ಇದನ್ನೇ ಮಾಡುತ್ತಾ ಬಂದರು. ಕೆಪಿಸಿಸಿ ಕಚೇರಿಗೆ ಬಂದಿದ್ದೇ ಸಿದ್ದು ಸಂಪುಟದ ಮಂತ್ರಿಗಳ ವಿರುದ್ಧ ಹರಿಹಾಯ್ದರು. ಪಕ್ಷದ ಕಚೇರಿಯಲ್ಲಿ ಕಾರ್ಯಕರ್ತರ ಕಷ್ಟ ಕೇಳುವಷ್ಟೂ ತಾಳ್ಮೆ ಇಲ್ಲದವರು ಮಂತ್ರಿಗಳಾಗುವುದಕ್ಕೇ ಲಾಯಕ್ಕಲ್ಲ ಎಂದು ಗುಡುಗಿದ್ದು ಮೇಲುನೋಟಕ್ಕೆ ಪಕ್ಷದ ಕಳಕಳಿಯಾಗಿ ಕಂಡಿತ್ತು, ಆದರೆ ಅರಮನೆ ಮೈದಾನದಲ್ಲಿ ನಡೆದ ಕಾಂಗ್ರೆಸ್ ಪರಿಶಿಷ್ಟ ಜಾತಿ ಸಮಾವೇಶದ ಹೊತ್ತಿಗದು ಸಿದ್ದು ಸರ್ಕಾರದ ವಿರುದ್ಧದ




ಮುದ್ದಹನುಮೇಗೌಡ

ರಣಕಹಳೆಯಾಗಿ ಮೊಳಗಿತ್ತು. ಸರ್ಕಾರ ದಲಿತರನ್ನು ಕಡೆಗಣಿಸಿದರೆ ನಾನು ಕೈಕಟ್ಟಿ ಕೂರುವುದಿಲ್ಲ; ಪರಿಶಿಷ್ಟ ವರ್ಗದ ಅಭಿವೃದ್ಧಿಗಾಗಿ ಮಂತ್ರಿಗಳು ತಲೆಕೆಡಿಸಿಕೊಳ್ಳುತ್ತಲೇ ಇಲ್ಲ ಎಂಬರ್ಥದ ಮಾತುಗಳು ಪರಮೇಶ್ವರ್ ಬಾಯಿಂದಲೇ ಹೊರಬಿದ್ದಿತ್ತು,

ಇನ್ನು ಮೀಡಿಯಾಗಳು ಕೇಳಬೇಕೆ? ಪರಮೇಶ್ವರ್ ಸಿದ್ದು ಸರ್ಕಾರದ ವಿರುದ್ಧ ಕಿಡಿಕಾರಿದರೆಂದೂ, ದಲಿತರ ವಿರುದ್ಧ ಸಿದ್ದು ಸರ್ಕಾರ ನಿರ್ಲಕ್ಷ್ಯ ತಾಳಿದೆಯೆಂದೂ ಬರೆದು ಬಿಟ್ಟವು!

ಅಷ್ಟಕ್ಕೂ ಕಾಂಗ್ರೆಸ್ ಪರಿಶಿಷ್ಟರ ಸಮಾವೇಶಕ್ಕೆ ಶ್ರೀನಿವಾಸ್ ಪ್ರಸಾದ್, ಮಹದೇವಪ್ಪ ಆಂಜನೇಯರಂಥವರೇ ಆಗಮಿಸಿದ್ದರಾದರೂ ತಾನು ಭಾಷಣ ಮಾಡುವತನಕ ಅವರ್‍ಯಾರೂ ಕಾಯಲಿಲ್ಲ ಎಂಬುದೇ ಪರಮೇಶ್ವರ್ ಹೊಟ್ಟೆ ಸಂಕಟಕ್ಕೆ ಕಾರಣವಾಗಿತ್ತು. ಬಹುಶಃ ಕೊನೆಯಲ್ಲಿ ಭಾಷಣಕ್ಕೆ ನಿಂತ ಪರಮೇಶ್ವರ್ ಮಾತಾಡುವವರೆಗೂ ಅವರೆಲ್ಲ ಕಾದು ಕೂತಿದ್ದರೆ ಸಾಹೇಬರ ವರಸೆಯೇ ಬೇರೆಯಿರುತ್ತಿತ್ತೇನೊ!

ಇದಾದನಂತರವಂತೂ ಪರಮೇಶ್ವರ ಅವಕಾಶ ಸಿಕ್ಕಾಗಲೆಲ್ಲ ಡಿಸಿಎಂ ಗಿರಿಯ ಮಂತ್ರ ಜಪಿಸತೊಡಗಿದರು. ಇವತ್ತು ಪರಮೇಶ್ವರ್ ಹುಟ್ಟುಹಬ್ಬದ ರೂವಾರಿಯಾಗಿರುವ ಮಾಜಿ ಐಎಎಸ್ ಶಿವರಾಂ ಬಿಜಾಪುರದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ನಿಂತು ಪಕ್ಷದ ಅಧಿಕೃತ ಅಭ್ಯರ್ಥಿಯನ್ನು ಸೋಲಿಸಿದರು. ತನ್ನ ನಂಬಿಕಸ್ತ ಬಂಟನನ್ನು ಕಣದಿಂದ ವಾಪಸ್ಸು ಪಡೆಯಲು ಪರಮೇಶ್ವರ್ ಕಾಟಾಚಾರಕ್ಕೂ ಯತ್ನಿಸಲಿಲ್ಲ, ವಿಪರ್ಯಾಸವೆಂದರೆ ತನ್ನ ಪರಮಾಪ್ತ ಮುದ್ದು ಹನುಮೇಗೌಡರನ್ನು ತುಮಕೂರಿನಿಂದ ಗೆಲ್ಲಿಸಿಕೊಂಡಿದ್ದೇ ಪರಮೇಶ್ವರ್ ಸಾಧನೆಯಾಗಿತ್ತು, ಸಿದ್ದು-ಪರಮೇಶ್ವರ್ ಜಟಾಪಟಿಯಿಂದಾಗಿ ಹದಿನೈದಕ್ಕೂ ಅಧಿಕ ಸ್ಥಾನ ಗೆಲ್ಲಬೇಕಿದ್ದ ಕಾಂಗ್ರೆಸ್ ಒಂಭತ್ತಕ್ಕಿಳಿಯಿತು.



ಕೆ. ಶಿವರಾಂ

ಗೆದ್ದ ಮುದ್ದುಹನುಮೇಗೌಡ ಮಾಡಿದ ಮೊದಲ ಕೆಲಸವೇ ಪರಮೇಶ್ವರ್ ಡಿಸಿಎಂ ಆಗಬೇಕೆಂದು ಬಹಿರಂಗ ಚೇಷ್ಟೆಗಿಳಿದದ್ದು. ಇಷ್ಟಾಗ್ಯೂ ಪರಮೇಶ್ವರ್‌ನನ್ನು ಎಮ್ಮೆಲ್ಸಿ ಮಾಡುವಲ್ಲಿ ಸಿದ್ದು ಪ್ರಯತ್ನವೇ ದೊಡ್ಡದಾಗಿತ್ತು. ಎಮ್ಮೆಲ್ಸಿಯಾಗಿ ಪರಮೇಶ್ವರ್ ಒಂದೇ ಒಂದು ದಿನ ಪರಿಷತ್ತಿನಲ್ಲಿ ಬಾಯಿ ಬಿಡಲಿಲ್ಲ. ಬರ, ಅತ್ಯಾಚಾರ, ನೆರೆ, ಬೆಲೆ ಏರಿಕೆ ಇತ್ಯಾದಿ ಅಸಂಖ್ಯಾತ ಸಮಸ್ಯೆಗಳಿದ್ದೂ, ಒಂದೇ ಒಂದು ದಿನ ಸರ್ಕಾರದ ಹೋರಾಟದ ಕುರಿತಂತೆ ಚಕಾರವೆತ್ತಲಿಲ್ಲ, ಸಮರ್ಥನೆಗೂ ನಿಲ್ಲಲಿಲ್ಲ. ಪಕ್ಷದ ಅಧ್ಯಕ್ಷನಾಗೇ ಡಿಸಿಎಂ ಗಿರಿಗೆ ಹಪಹಪಿಸುವ ಪರಮೇಶ್ವರ್‌ಗೆ ಎಮ್ಮೆಲ್ಸಿಗಿರಿಯ ಬೆಲೆ ಕೂಡ ಗೊತ್ತಾದ ಹಾಗಿಲ್ಲ.


ಬರ್ತ್‌ಡೆ ಎಂಬುದು ಸರ್ಕಾರದ ಪಾಲಿಗೆ ಡೆತ್‌ಡೇ ಎಂಬ ಸದಾನಂದಗೌಡರ ಹೀಯಾಳಿಕೆಗೆ ಪರಮೇಶ್ವರ್ ಕುಚೇಷ್ಟೆಗಿಂತ ಸಮರ್ಥನೆ ಬೇಕೆ?

● ರಾ. ಸೋಮನಾಥ್

ಜುಟ್ಟು-ಜನಿವಾರಗಳಿಂದ ದೇಶಕ್ಕೆ ಮುಕ್ತಿ ಸಿಕ್ಕ ದಿನವೇ ಅದು ನಿಜವಾದ ಸ್ವಾತಂತ್ರ್ಯ

ಒಂದು ಪತ್ರ

ಬ್ರಿಟಿಷರ ದಾಸ್ಯತ್ವದಿಂದ ದೇಶಕ್ಕೆ ಸ್ವಾತಂತ್ರ್ಯ ದೊರೆತು ಬರೋಬ್ಬರಿ 67 ವರ್ಷಗಳೇ ಸರಿಯುತ್ತಿದ್ದರೂ ನಿಜ ದಾಸ್ಯತ್ವದಿಂದ ನಾವಿನ್ನೂ ಹೊರಬರದೇ ಯಾವ ಧೂಮ್ ಧಾಮ್ ಸ್ವಾತಂತ್ರ್ಯವನ್ನಾಚರಿಸಿ ಏನು ಪ್ರಯೋಜನ? ಬ್ರಿಟಿಷರ ಅಧಿಕಾರೀ ದಾಸ್ಯತ್ವಕ್ಕಿಂತ ಜುಟ್ಟು ಜನಿವಾರಗಳಡಿಯ ಬೌದ್ಧಿಕ ದಾಸ್ಯತ್ವವೇ ಅತ್ಯಂತ ಹೀನಕರ. ಇದರಿಂದ ಹೊರಬರಲಾಗದೇ ಸಿಂಬಳಕ್ಕೆ ಸಿಕ್ಕ ನೊಣಗಳಂತೆ ಅಲ್ಲೇ ಅಂಟಿ ಒದ್ದಾಡುವ ಈ ಬೌದ್ಧಿಕ ಜೀತದಿಂದ ಮುಕ್ತಿಯೇ ಇಲ್ಲವೇ?



ಇದನ್ನೇ ಸಾಮಾಜಿಕ ಹೋರಾಟಗಾರ್ತಿ ಎನ್. ಪ್ರಭಾರವರು ಸಾಮಾಜಿಕ ಕಳಕಳಿಯಿಂದ ಹೇಳಿದ್ದು. ಇದನ್ನೇ ನೆಪವಾಗಿಸಿಕೊಂಡು ಮಾತಾಡಿದ (ಕೀಳಾಗಿ ಎನ್ನುವ ಪದವನ್ನಿಲ್ಲಿ ಬಳಸಲಾರೆ; ಅದು ಇಂತವರ ಸಹಜಾತಿಸಹಜ ಪ್ರತಿಕ್ರಿಯೆ) ವಿ.ಆರ್. ಭಟ್ಟನ ಆರ್ಭಟ ನಿಜಕ್ಕೂ ಖಂಡನೀಯ. ಬೆಳಗ್ಗೆ ಎದ್ದು ಟಿವಿ ಆನ್ ಮಾಡಿದರೆ ಸಾಕು ಭವಿಷ್ಯ ರಾಶಿಫಲ, ಬೊಗಳೆ ಪರಿಹಾರ ಹೇಳುವ ಜೋತಿಷಿಗಳದ್ದೇ ಕಾರುಬಾರು. ಏನಾದರೂ ನಾಗರಪಂಚಮಿ, ಚೌತಿ ಎಂದು ವಿಶೇಷ ದಿನಗಳು ಬಂತೆಂದರೆ ಇಡೀ ದಿನ ಗುರೂಜಿ-ಜ್ಯೋತಿಷಿಗಳಿಂದ ಅವುಗಳ ಬಗ್ಗೆ ಸುಳ್ಳುಸುಳ್ಳೇ ಮೌಢ್ಯ ಸಾರುವಂತಹ ಕಾರ್ಯಕ್ರಮಗಳ ಪ್ರಸಾರ. ಮೊನ್ನೆಯ ನಾಗರಪಂಚಮಿ ದಿನ ಕನ್ನಡದ ಟಿವಿ ಚಾನೆಲ್ ಒಂದರಲ್ಲಿ ಒಬ್ಬ ಜ್ಯೋತಿಷಿ ಮನುಷ್ಯರಲ್ಲಿ ತಿಂಗಳು ತಿಂಗಳು ಋತುಚಕ್ರ ಇದ್ದಂತೆ ಮೊಟ್ಟೆಯಿಟ್ಟು, ಮರಿಮಾಡುವ ನಾಗಗಳಿಗೂ ಇದೆಯೆಂಬಂತೆ ಮಾತಾಡಿದ್ದ. ಹುತ್ತದ ಮಣ್ಣು ಯಾಕೆ ಔಷಧೀಯ ಗುಣವುಳ್ಳದ್ದೆಂದರೆ, ಪ್ರತಿ ತಿಂಗಳು ಋತುಮತಿಯಾದ ನಾಗಗಳು ಸ್ರವಿಸುವಂತಹ ಪದಾರ್ಥದ ಅಂಶವೇ ಅದಕ್ಕೆ ಕಾರಣವಂತೆ. ಮಕ್ಕಳಾಗದವರು ನಾಗನ ಪೊರೆ ತಿಂದರೆ ನೂರಕ್ಕೆ ನೂರು ಮಕ್ಕಳು ಗ್ಯಾರಂಟಿಯಂತೆ. ಇವನ ಮಾತನ್ನ ಕೇಳಿ ಮರುದಿನ ಎಷ್ಟು ಮಂದಿ ಹುತ್ತ ಅಗೆದರೋ, ಎಷ್ಟು ಮಂದಿ ಪೊರೆ ಹುಡುಕ ಹೋದರೋ ಗೊತ್ತಿಲ್ಲ.

ಪ್ರಭಾರವರು ಹೇಳಿದಂತೆ ಶಂಕುಸ್ಥಾಪನೆಯಿಂದ ಹಿಡಿದು ರಾಕೆಟ್ ಉಡ್ಡಯನದವರೆಗೂ ಇವರುಗಳು ಬಿತ್ತಿದ ದರಿದ್ರಮೌಢ್ಯಗಳ ಅಧೀನರು ನಾವು. ಇಂತವನ್ನೆಲ್ಲ ಬೌದ್ಧಿಕ ದಾಸ್ಯತ್ವವೆನ್ನದೇ ಇನ್ನೇನನ್ನಲು ಸಾಧ್ಯ?

ಈ ಬ್ರಾಹ್ಮಣರಲ್ಲಿ ಪ್ರಮುಖವಾಗಿ ಮೂರು ವರ್ಗಗಳಿವೆ. ಒಂದು ಸಮಾಜದ ಒಳಿತಿಗಾಗಿ ಮಾನವೀಯ ವಾಗಿ ಸ್ಪಂದಿಸುವಂತಹ ಸಣ್ಣ ಗುಂಪಾದರೆ ಇನ್ನೊಂದು ಪುರೋಹಿತಶಾಹಿ ಅಜೆಂಡಾವನ್ನು ಜಾರಿಗೊಳಿಸಲು ತವಕಿಸುವ ಹಾಗು ಅದಕ್ಕೆ ಕುಂದಾಗದಿರಲು ಕು-ತಂತ್ರಗಳನ್ನು ರೂಪಿಸುವಂತಹ ಗುಂಪು. ಇದೂ ಕೂಡ ಸಣ್ಣದೇ ಆದರೂ ಅದರ ಹಿಡಿತ ಹಾಗು ಮಾಡುವಂತಹ ಹಾನಿ ಮಾತ್ರ ಭಯಂಕರವಾದದ್ದು.


ಮತ್ತೊಂದು ಗುಂಪು ಕಡು ಸನಾತವಾದಿಗಳಾಗಿಲ್ಲದೇ ಎಂತಹ ಸನ್ನಿವೇಶಕ್ಕೂ ಬಾಗುವಂತವರು. ಈ ಹಿಂದೆಯೂ ವಿ.ಆರ್. ಭಟ್ಟನಂತೆ ಮಹಿಳೆಯರ ಬಗ್ಗೆ ಕೊಳಕುತನವನ್ನು ಪ್ರದರ್ಶಿಸಿದ್ದ, ತುಚ್ಛವಾಗಿ ಮಾತಾಡಿದ್ದವರನ್ನು ಖಂಡಿಸದೆ ಪರೋಕ್ಷವಾಗಿ ಅವರೊಂದಿಗೆ ಸಹಮತವಿರುವಂತೆ ತಮ್ಮ ಮೌನದ ಮೂಲಕ ವರ್ತಿಸುವ ದೊಡ್ಡ ಸಂಖ್ಯೆಯ ಗುಂಪು ಇದು. ನಮ್ಮ ದೇಶದ ಸಾಮಾಜಿಕ ಪರಿವರ್ತನೆಯಲ್ಲಿ ರಾಜಾ ರಾಮಮೋಹನ್ ರಾಯ್, ನಂಬೂದರಿಪ್ಪಾಡ್, ಕುದ್ಮುಲ್ ರಂಗರಾಯರಂತವರಿದ್ದ ಮೊದಲಿನ ಗುಂಪಿನ ಪಾತ್ರ ಹಾಗು ತ್ಯಾಗ ಬಲು ದೊಡ್ಡದು. ಎರಡನೆಯ ಗುಂಪು ಧಾರ್ಮಿಕ ದ್ವೇಷ ಸಾಧನೆಗಾಗಿ ಬೌದ್ಧರ ಕಗ್ಗೊಲೆ ನಡೆಸಿದ ಶಂಕರಾಚಾರ್ಯನಿಂದ ಹಿಡಿದು ವಿ.ಆರ್. ಭಟ್ಟನ ತನಕ ಇದ್ದರೆ ಮೂರನೆಯದು ನಮ್ಮ ಸುತ್ತಮುತ್ತಲೇ ಇರುವಂಥವರದ್ದು.

ಅಂದಹಾಗೆ ಈ ವಿ.ಆರ್. ಭಟ್ಟನೆಂಬ ಕ್ರಿಮಿ ಮಹಿಳೆರ ಜುಟ್ಟು ಹಿಡಿದು ಅತ್ಯಾಚಾರ ಮಾಡಬೇಕೆಂದು ಕರೆಕೊಟ್ಟಿದ್ದಾನೆ. ಆತನ ಮಾತಿನಲ್ಲಿರುವ ಧಾರ್ಷ್ಟ್ಯತನ, ಮಹಿಳೆಯರ ಬಗೆಗಿರುವ ಕೀಳು ಮನೋಸ್ಥಿತಿಯನ್ನು ಗಮನಿಸಿದರೇ ಈತನ ಸಂಸ್ಕೃತಿ ಎಂಥಾದ್ದೆಂದು ಅರ್ಥವಾಗುತ್ತದೆ. ಹೇಗಿದ್ದರೂ ಅನಾದಿಕಾಲದಿಂದಲೂ ಮಹಿಳೆಯರು ಹಾಗು ಶೂದ್ರರನ್ನು ಪಾಣೆಗೂ ಕಡೆಯಾಗಿ "ಗೌರವಿಸುತ್ತಿದ್ದ" ಸಂಸ್ಕೃತಿಯ ಗುತ್ತಿಗೆದಾರನಲ್ಲವೇ ಆತ.

"ಒಂದಾನೊಂದು ಕಾಲದಲ್ಲಿ ಯಾವ ಕೆಟ್ಟಗಳಿಗೆಯಲ್ಲಿ ಕೇರಳದ ರಾಜ ಇವರಿಗೆ ಆಸರೆ ನೀಡಿದನೋ ಅಲ್ಲಿಂದ ಈ ದೇಶದ ಗ್ರಹಗತಿ ಚೆನ್ನಾಗಿಲ್ಲ" ಎಂದು ಮುಸಲ್ಮಾನರಿಗೆ ಹೇಳುವ ನೀಚ ಭಟ್ಟನ ಮಾತು ಭಾರತಕ್ಕೆ ಪರಾವಲಂಬಿ ಬಂದಳಿಕೆಯಂತೆ ಬಂದು ವಕ್ಕರಿಸಿದ ಇವನ ಆರ್ಯ-ಚಾಣಕ್ಯ ಕುಲಬಾಂಧವರಿಗೇನೇ ಹೇಳಿಮಾಡಿಸಿದಂತಿದೆ. ಇದನ್ನಾತ ಮೊದಲು ಅರ್ಥ ಮಾಡಿಕೊಳ್ಳಲಿ.

- ಶಿ ಪುತ್ತೂರು, ದ.ಕ

ಯಾತನಾಮಯ 'ಯಾನ'



ಎಸ್.ಎಲ್.ಭೈರಪ್ಪನವರ ಹೊಸ ಕಾದಂಬರಿ 'ಯಾನ' ವನ್ನು ಬುಧವಾರ ಓದಿ ಮುಗಿಸಿದೆ. ಕೊನೆಯ ಪುಟ ಮುಗಿಸಿ ಎವಿಹಾಕಿದಾಗ ಒಂದು ರೀತಿಯ ಬೇಸರ ಆವರಿಸಿ ಕೊಂಡಿತು. ಇದೆಂತಹ ಕಾದಂಬರಿ, ಇದಕ್ಕೆ ಅರ್ಥ-ತರ್ಕ ಯಾವುದೂ ಇಲ್ಲವಲ್ಲ, ಬರಹ ಶೈಲಿಯೂ ಸಪ್ಪೆಯಾಗಿದೆ ಯಲ್ಲಾ... ಅನ್ನಿಸಿತು. ಟೈಮ್ ವೇಸ್ಟ್ ಮಾಡಿದೆ ಎನಿಸಿತು.

ಈಗ ಎಲ್ಲರಿಗೂ ಗೊತ್ತಿರುವಂತೆ 'ಯಾನ' ಒಂದು ಬಾಹ್ಯಾಕಾಶ ನೌಕೆಯಲ್ಲಿ ನಡೆಯುವ ಕತೆ. ಒಂದು ಸ್ತರದಲ್ಲಿ ಇದು 'ಸೈನ್ಸ್ ಫಿಕ್ಷನ್'ನಂತಿದ್ದರೂ ಅದಲ್ಲ, ಬದಲಾಗಿ ಇದೊಂದು ಕತೆಯಷ್ಟೇ. ಈ ಕತೆಯಲ್ಲಿ ಸುದರ್ಶನ ಮತ್ತು ಉತ್ತರಾ ಪ್ರಮುಖ ಪಾತ್ರಧಾರಿಗಳು. ಇವರಿಬ್ಬರನ್ನು ಭಾರತದ ಬಾಹ್ಯಾಕಾಶ ಕೇಂದ್ರದವರು ಒಂದು ನೌಕೆಯಲ್ಲಿ ಇರಿಸಿ ಸೌರ್ಯಮಂಡಲದ ಆಚೆ ಇರುವ ಸೆಂಟಾರಿಸ್ ನಕ್ಷತ್ರ ಮಂಡಲಕ್ಕೆ ಕಳುಹಿಸುತ್ತಾರೆ. ಆ ಯಾನವು ನೂರಾರು ವರ್ಷಗಳ ಕಾಲ ಸಾಗುವುದರಿಂದ ಸುದರ್ಶನ ಮತ್ತು ಉತ್ತರಾಳಿಗೆ ನೌಕೆಯಲ್ಲೇ ಮಕ್ಕಳನ್ನು ಪಡೆಯಬೇಕೆಂದು, ಭೂಮಿ ಉರುಳಿದಂತೆ ನೌಕೆಯಲ್ಲೇ ಹಲವು ಮಾನವರ ಸಮುದಾಯ ಸೃಷ್ಟಿಸಬೇಕೆಂದೂ ಆದೇಶಿಸಿರುತ್ತಾರೆ.

ಕಾದಂಬರಿ ಪ್ರಾರಂಭವಾಗುವುದು ಸುದರ್ಶನ ಮತ್ತು ಉತ್ತರಾಳ ಮಕ್ಕಳಾದ ಆಕಾಶ ಮತ್ತು ಮೇದಿನಿ (ಅಂದರೆ ಭೂಮಿ) ನಡುವಿನ ಪ್ರೇಮಸಲ್ಲಾಪದೊಂದಿಗೆ. ಆದರೆ ಇವರಿಬ್ಬರು ಅಕ್ಕ ತಮ್ಮನಾಗಿರುವುದರಿಂದ ಇವರಿಬ್ಬರ ನಡುವೆ ಮದುವೆ ಸಾಧ್ಯವೇ? ಎಂಬ ತರ್ಕ ಪ್ರಾರಂಭವಾಗುತ್ತದೆ.

ಕಾದಂಬರಿಯ ಹೀರೋ ಸುದರ್ಶನ ಓರ್ವ ವಿಜ್ಞಾನಿಯಾಗಿದ್ದರೆ ಹೀರೋಯಿನ್ ಉತ್ತರಾ ಭಾರತದ ವಾಯುಸೇನೆಯಲ್ಲಿ ಫೈಟರ್ ಪೈಲೆಟ್ ಆಗಿರುವಾಕೆ. ಅವಿವಾಹಿತನಾದ ಸುದರ್ಶನ ಎರಡು ಲವ್ ಅಫೇರ್‌ಗಳ ಅನುಭವ ಹೊಂದಿರುವವನು. ಆದರೆ ಉತ್ತರಾ ಮದುವೆಗೂ ಮುನ್ನ ಲೈಂಗಿಕ ಸಂಬಂಧ ನಿಷೇಧ ಎಂದೇ ನಂಬಿರುವವಳು. ಪ್ರಸ್ತುತ ಯಾನದಲ್ಲಿ ಆಕೆಯನ್ನು ಕಳುಹಿಸುವ ಮುನ್ನ ಇನ್ನೊಂದು ಯಾನಕ್ಕೆ ಆಕೆ ಆಯ್ಕೆಯಾಗಿರುತ್ತಾಳೆ. ಆ ಯಾನದ ಸಂದರ್ಭದಲ್ಲಿ ಆಕೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿ ತನ್ನ ದೇಹದ ಮೇಲಾಗುವ ಪರಿಣಾಮವನ್ನು ದಾಖಲಿಸಬೇಕೆಂದು ಬಾಹ್ಯಾಕಾಶ ಕೇಂದ್ರದವರು ಸೂಚಿಸುತ್ತಾರೆ. ಆಗ ಆಕೆ ಯಾದವ್ ಎಂಬ ಮತ್ತೊಬ್ಬ ಪೈಲೆಟ್‌ನೊಂದಿಗೆ ಒಂದು ದೇವಸ್ಥಾನದಲ್ಲಿ ಗೌಪ್ಯವಾಗಿ ಮದುವೆಯಾಗಿ ಆ ಪ್ರಯೋಗದಲ್ಲಿ ಭಾಗವಹಿಸಿರುತ್ತಾಳೆ.

ಭೂಮಿಗೆ ಎಂದೂ ಹಿಂದಿರುಗದ ಬಾಹ್ಯಾಕಾಶ ಯಾನದಲ್ಲಿ ಭಾಗವಹಿಸಬೇಕೆಂದು ಆಕೆಯನ್ನು ಕೋರಿದಾಗ ತನ್ನೊಂದಿಗೆ ತನ್ನ 'ಪತಿ' ಯಾದವ್ ಕೂಡ ಬರುವುದಾದರೆ ತನ್ನ ಒಪ್ಪಿಗೆ ಇದೆ ಎಂದು ಸೂಚಿಸುತ್ತಾಳೆ. ಆದರೆ ಯಾದವ್‌ನಿಗೆ ಭೂಮಿ, ತನ್ನ ಒಡಹುಟ್ಟಿದವರು, ನಗರ, ರಸ್ತೆ ಜಗಳ ಇತ್ಯಾದಿಗಳನ್ನು ಬಿಟ್ಟುಹೋಗುವ ಮನಸ್ಸಾಗುವು ದಿಲ್ಲವಾದ್ದರಿಂದ ಆತ ನಿರಾಕರಿಸುತ್ತಾನೆ. ಉತ್ತರಾ ತನ್ನನ್ನೇ ಯಾದವ್ ನಿರಾಕರಿಸುತ್ತಿದ್ದಾನೆ ಎಂದು ಅರ್ಥೈಸುತ್ತಾಳೆ.

ಯಾನ ಪ್ರಾರಂಭವಾದ ನಂತರ 'ಭಗ್ನಪ್ರೇಮಿ'ಯಾಗಿರುವ ಉತ್ತರಾ ಸುದರ್ಶನನೊಂದಿಗೆ ಕೂಡಿ ಮಕ್ಕಳನ್ನು ಪಡೆಯಲು ನಿರಾಕರಿಸುತ್ತಾಳೆ, ಭೂಮಿಯ ಮೇಲೆ ಮಾಡಿಕೊಂಡ ಒಪ್ಪಂದಕ್ಕೆ ಬಾಹ್ಯಾಕಾಶದಲ್ಲಿ ಬೆಲೆ ಇಲ್ಲ ಎಂದು ವಾದಿಸುತ್ತಾಳೆ. ಆಕೆಯ ನಿರಾಕರಣೆಯಿಂದ ರೋಸತ್ತ ಸುದರ್ಶನ ಆಧ್ಯಾತ್ಮದತ್ತ ತನ್ನ ಗಮನವನ್ನು ಕೇಂದ್ರೀಕರಿಸುತ್ತಾನೆ.

ಹಾಗಾದರೆ ಆಕಾಶ ಮತ್ತು ಮೇದಿನಿ ಯಾರ ಮಕ್ಕಳು, ಅವರಿಬ್ಬರೂ ಒಡಹುಟ್ಟಿದವರೇ. . . ಎಂಬೆಲ್ಲ ಪ್ರಶ್ನೆಗಳಿಗೆ ಕಾದಂಬರಿಯ ಅಂತ್ಯದಲ್ಲಿ ಉತ್ತರಗಳು ಸಿಗುತ್ತವೆ. ಇದು ಈ ಕಾದಂಬರಿಯ ಸಾರಾಂಶ.


ಭೈರಪ್ಪನವರ 'ಆವರಣ' ಎಂಬ - ಕಾದಂಬರಿಯೂ ಅಲ್ಲದ ಇತಿಹಾಸವೂ ಅಲ್ಲದ - ಕೃತಿಯಲ್ಲಿ ಇದ್ದಂತೆ 'ಯಾನ'ದಲ್ಲಿ ಅನ್ಯ ಧರ್ಮಿಯರ ವಿರುದ್ಧ ಮಸಲತ್ತಿಲ್ಲ; 'ಕವಲು' ಕಾದಂಬರಿಯಲ್ಲಿರುವಷ್ಟು ಮಹಿಳೆಯರ ಅವಹೇಳನವಿಲ್ಲ, ಅಷ್ಟರಮಟ್ಟಿಗೆ ಇದು ಸಹ್ಯ. ಆದರೆ 'ಯಾನ'ದಲ್ಲೂ ಭೈರಪ್ಪ ಫೈಟರ್ ಪೈಲೆಟ್ ಆಗಿರುವ ಉತ್ತರಾಳನ್ನು ಓರ್ವ ಗೃಹಿಣಿ ಮಟ್ಟಕ್ಕೆ ಇಳಿಸುತ್ತಾರೆ; ಪೈಲೆಟ್ ಆಗಿ ಆಕೆಯ ಸಾಧನೆಗಿಂತ ಆಕೆಯ ಪಡೆಯುವ ಶಕ್ತಿಗೆ ಪ್ರಾಮುಖ್ಯತೆ ಕೊಡುತ್ತಾರೆ. ಅಷ್ಟೇ ಅಲ್ಲದೆ 'ಯಾನ'ದಲ್ಲೂ ಒಂದು ರೀತಿಯಲ್ಲಿ ಭೈರಪ್ಪನವರ ವ್ಯಕ್ತಿತ್ವದಲ್ಲಿರುವ ಬ್ರಾಹ್ಮಣ್ಯ ಕುರಿತ ವ್ಯಸನ ಮುಂದುವರೆದಿದೆ ಎಂದರೆ ತಪ್ಪಾಗಲಾರದು.

ಅದಕ್ಕಿಂತ ಆತಂಕ ಹುಟ್ಟಿಸುವುದು ಮಹಿಳೆಯರ ಮೇಲಿನ ಅತ್ಯಾಚಾರ ಕುರಿತಂತೆ ಈ ಕಾದಂಬರಿಯಲ್ಲಿ ಮೂಡಿಬರುವ ಹಲವು ಸಾಲುಗಳು. ಅದಕ್ಕೆ ಒಂದೆರಡು ಉದಾಹರಣೆಗಳನ್ನು ಇಲ್ಲಿ ನೀಡಲಾಗಿದೆ:

(ಉತ್ತರಾ ಸುದರ್ಶನನೊಂದಿಗೂ ದೈಹಿಕವಾಗಿ ಕೂಡಲು ನಿರಾಕರಿಸಿ, ರಕ್ಷಿಸಿಟ್ಟಿರುವ ಅಂಡಾಣುಗಳ ಪ್ರಯೋಜನವನ್ನೂ ಪಡೆದು ಗರ್ಭ ಧರಿಸಲು ನಿರಾಕರಿಸಿ ಯಾನದ ಇಡೀ ಯೋಜನೆಯನ್ನೇ ವಿಫಲಗೊಳಿಸುವ ಹಂತದಲ್ಲಿದ್ದಾಳೆ. ಆಗ ಆಕೆಯ ಬಗ್ಗೆ ಸುದರ್ಶನ ಹೀಗೆ ಯೋಚಿಸುತ್ತಾನೆ)

"ಮೇಲೆ ಬಿದ್ದು ಯಾಕೆ ಬಲಾತ್ಕಾರ ಮಾಡಬಾರದು?... ಆಕೆ ಕೊಸರಬಹುದು. ಅಸಹಕರಿಸಬಹುದು. ಪುಂಡರು ಬಲಾತ್ಕರಿಸುವಾಗ ಸಭ್ಯ ಹೆಂಗಸರೆಲ್ಲ ಹೀಗೆಯೇ ಕೊಸರುತ್ತಾರೆ. ಅಸಹಕರಿಸಿ ನುಲಿಯುತ್ತಾರೆ. ಕಠಿಣ ಭಂಗಿ ತಾಳುತ್ತಾರೆ. ಕಚ್ಚುತ್ತಾರೆ. ಪರಚುತ್ತಾರೆ. ಆದರೂ ಪುಂಡರು ವಶಪಡಿಸಿಕೊಳ್ಳಲ್ಲವೆ? ನಾನೂ ಹಾಗೆ ಮಾಡಿದರಾಯಿತು. ಇಷ್ಟು ದಿನದ ಬಯಕೆ ಒಮ್ಮೆಯಾದರೂ ಈಡೇರುತ್ತೆ... ಇದು ನನ್ನ ಬಯಕೆಯ ಪೂರೈಕೆ ಮಾತ್ರವಲ್ಲ, ದೇಶಸೇವೆಯೂ ಹೌದು. ಇಡೀ ದೇಶದ ಹೆಮ್ಮೆಯ ಯೋಜನೆಯನ್ನು ಸಫಲಗೊಳಿಸುವ ವಿಧಾನ ಎಂಬ ಸಮರ್ಥನೆ ಮತ್ತೆ ಮತ್ತೆ ಮೂಡಿ ಮನಸ್ಸಿಗೆ ಶಕ್ತಿ ತುಂಬುತ್ತಿತ್ತು.

ನಾಲ್ಕು ದಿನದ ನಂತರ ಹೆಂಗಸನ್ನು ಅವಳ ಇಚ್ಛೆಗೆ ವಿರುದ್ಧವಾಗಿ ಆಕ್ರಮಿಸುವುದು ತಪ್ಪಲ್ಲವೆ? ಎಂಬ ನೈತಿಕ ಪ್ರಶ್ನೆ ಹಗುರವಾಗಿ ಕಾಡತೊಡಗಿತು. ಈ ವಿಷಯದಲ್ಲಿ ಮಾತ್ರವಲ್ಲ, ಹೆಂಗಸು ಗಂಡಸು ಎಂಬ ಭೇದವಿಲ್ಲದೆ ಯಾರನ್ನೂ ಅವರ ಇಚ್ಛೆಗೆ ವಿರೋಧವಾಗಿ ಒತ್ತಾಯಿಸುವುದು ತಪ್ಪು ಎನ್ನಿಸತೊಡಗಿತು. ಆದರೆ ಇವಳು ನನ್ನ ಹೆಂಡತಿ.



ಶಾಸ್ತ್ರೋಕ್ತವಾಗಿ ಅಥವಾ ನೋಂದಣಿ ಪ್ರಕಾರವಾಗಿ ಮದುವೆಯಾಗದಿದ್ದರೂ ಈ ಯಾನದಲ್ಲಿ ನಾವಿಬ್ಬರೂ ಕೂಡಿ ಮಾಡಬೇಕಾದ ಕರ್ತವ್ಯಗಳೇ ನಮ್ಮನ್ನು ದಂಪತಿಗಳನ್ನಾಗಿ ಬಂಧಿಸಿರುವಾಗ ನಾನು ಅವಳನ್ನು ಅವಳು ನನ್ನನ್ನು ಒತ್ತಾಯಿಸಿದರೆ, ಆಕ್ರಮಿಸಿದರೆ ಬಲಾತ್ಕಾರ ಹೇಗಾದೀತು? ಯಾವುದಕ್ಕೋ ಮುನಿಸಿಕೊಂಡು ಅವಳು ಹಟಮಾಡಿದರೆ ಬಲ ಪ್ರಯೋಗಿಸಿ, ಸುಖ ಪಡೆದು ಸುಖ ಕೊಡುವುದು ಬಲಾತ್ಕಾರವೂ ಆಗುಲ್ಲ, ಅತ್ಯಾಚಾರವಂತೂ ಆಗೋದೇ ಇಲ್ಲ ಎಂಬ ಸಮರ್ಥನೆ ಹುಟ್ಟಿಕೊಂಡಿತು."

ಕಾದಂಬರಿಯ ಇನ್ನೊಂದು ಕಡೆ ಇಂಗಾ ಎಂಬ ಸುದರ್ಶನನ ಜರ್ಮನ್ ಪ್ರೇಯಸಿ ಅವನಿಗೆ ಅತ್ಯಾಚಾರ ಮತ್ತು ಬಲಾತ್ಕಾರ ನಡುವಿನ ವ್ಯತ್ಯಾಸವನ್ನು ಹೀಗೆ ವಿವರಿಸುತ್ತಾಳೆ:

"ಹೇಳ್ತೀನಿ ಕೇಳು. ಯಾವ ಅತ್ಯಾಚಾರದಲ್ಲೂ ಹೆಂಗುಸು ತೃಪ್ತಿ ಕಾಣೂದಿಲ್ಲ ಅನ್ನೂದು ತಪ್ಪು. ವ್ಯತ್ಯಾಸವಿಷ್ಟೇ: ಅತ್ಯಾಚಾರಿಯು ತನ್ನ ಸುಖವನ್ನು ತಲುಪಿದನಂತರ ಅವಳನ್ನ ಕೈ ಬಿಡ್ತಾನೆ. ಅವಳನ್ನೂ ಸುಖಕ್ಕೆ ತಲುಪಿಸೂದು ತನ್ನ ಕರ್ತವ್ಯ ಅಂತ ಬಲಾತ್ಕಾರಿಯು ಆರ್ದ್ರನಾಗಬಹುದು. ಗಂಡಸು ತನ್ನನ್ನು ಬಲಾತ್ಕರಿಸಲಿ ಅಂತ ಎಷ್ಟೋ ಹೆಂಗಸರು ಬಯಸುತ್ತಾರೆ. ಬಲಾತ್ಕರಿಸೂದು ಗಂಡುಪ್ರಾಣಿಯ ಸ್ವಭಾವ. ಹಕ್ಕು. ಬಲಾತ್ಕರಿಸುವ ಹೆಂಗಸರೇನೂ ಕಡಿಮೆ ಇಲ್ಲ."

1970ರಲ್ಲಿ ಭೈರಪ್ಪನವರು 'ಗೃಹಭಂಗ'ದಲ್ಲಿ ರಚಿಸಿದ ನಂಜಮ್ಮನಿಂದ ಇಲ್ಲಿಯತನಕ ಸಾಗಿಬಂದಿರುವ ನೈತಿಕ ಅಧಃಪತನಕ್ಕೆ ಇದು ಸಾಕ್ಷಿ ಎನ್ನಬಹುದೇ?

ಒಟ್ಟಾರೆಯಾಗಿ 'ಯಾನ' ಒಂದು ಯಾತನಾಮಯ ಓದು!

ವಿಚಿತ್ರವೆಂದರೆ ಭೈರಪ್ಪನವರ ಅತ್ಯುತ್ತಮ ಕೃತಿಯಾದ 'ಗೃಹಭಂಗ' ಇಲ್ಲಿಯವರೆಗೂ ಹದಿಮೂರನೇ ಮುದ್ರಣವನ್ನು ಮಾತ್ರ ಕಂಡಿದ್ದರೆ, ಅವರ ಕೆಟ್ಟ ಕೃತಿಗಳಾದ 'ಆವರಣ' ಮೂವತ್ತೇಳನೇ ಮುದ್ರಣವನ್ನೂ, 'ಕವಲು' ಇಪ್ಪತ್ತಾರನೇ ಮುದ್ರಣವನ್ನೂ ಕಂಡಿರುವುದು!

● ಸಾವಂತ್ರಿ

ಕೆಪಿಎಸ್‌ಸಿ ಹಗರಣ: ಗೆದ್ದು ಸೋತ ಸರ್ಕಾರ

ಯಾವುದು ಆಗಬಾರದು ಅಂತ ಪ್ರಜ್ಞಾವಂತ ಮನಸ್ಸುಗಳು ಚಿಂತಿಸುತ್ತಿದ್ದವೋ ಅದು ಕೊನೆಗೂ ಸಂಭವಿಸಿಬಿಟ್ಟಿದೆ. ವ್ಯಾಪಕ ಹಗರಣ, ಅವ್ಯವಹಾರದ ಕಾರಣಕ್ಕಾಗಿ 2011ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ಸ್ ನೇಮಕಾತಿಗಾಗಿ ಕೆಪಿಎಸ್‌ಸಿ ಸಲ್ಲಿಸಿದ್ದ ಅಂತಿಮ ಆಯ್ಕೆಪಟ್ಟಿಯನ್ನು ಸರ್ಕಾರ ಸಾರಾಸಗಟಾಗಿ ತಳ್ಳಿ ಹಾಕಿದೆ. ಆಗಸ್ಟ್ 7ರಂದು ನಡೆದ ಸಂಪುಟ ಸಭೆಯ ನಿರ್ಮಾನದಂತೆ ಈಗ ಇಡೀ ಪ್ರಕ್ರಿಯೆಯನ್ನು, ಅಂದರೆ ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ, ವ್ಯಕ್ತಿತ್ವ ಸಂದರ್ಶನ ಎಲ್ಲವನ್ನೂ ಹೊಸದಾಗಿ ನಡೆಸಬೇಕು. ನೂತನ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದಲೂ, ಅದರಲ್ಲೂ ಮುಖ್ಯವಾಗಿ ಸಿಎಂ ಸಿದ್ದರಾಮಯ್ಯನವರು ಈ ಹಗರಣದ ಕುರಿತು ಹಾಗೂ ಆಯ್ಕೆಯಾಗಿದ್ದ ಬಡ, ಅಮಾಯಕ ಅಭ್ಯರ್ಥಿಗಳ ಕುರಿತು ಕೊಂಚ ಕಾಳಜಿ ತೋರುತ್ತಲೇ ಬಂದಿದ್ದರಿಂದ ಕುತಂತ್ರದ ಬಲಿಪಶುಗಳಾಗುವ ಭೀತಿಯಲ್ಲಿದ್ದ ಪ್ರತಿಭೆಗಳು ನ್ಯಾಯದ ಭರವಸೆ ಉಳಿಸಿಕೊಂಡಿದ್ದರು. ಆದರೆ ಅದೆಷ್ಟು ವ್ಯವಸ್ಥಿತವಾಗಿ ಪ್ರಕರಣವನ್ನು ರಾಜಕೀಯಗೊಳಿಸಲಾಗಿತ್ತೆಂದರೆ ಯಾರದೇ ಸರ್ಕಾರ ಅಸ್ತಿತ್ವಕ್ಕೆ ಬಂದರೂ ನೇಮಕಾತಿಯನ್ನು ರದ್ದುಗೊಳಿಸದೆ ವಿಧಿಯೇ ಇಲ್ಲದಂತೆ ಆರೋಪಗಳನ್ನು ಸಜ್ಜುಗೊಳಿಸಲಾಗಿತ್ತು, ಆದರೂ ಸಿದ್ದರಾಮಯ್ಯನವರ ಸರ್ಕಾರ ಅರ್ಹರಿಗೆ ಅನ್ಯಾಯವಾಗಬಾರದು ಎಂಬ ಧೋರಣೆ ತಳೆದಿದ್ದರಿಂದಲೇ ಎಂದೋ ಇತಿಶ್ರೀ ಕಾಣಬೇಕಿದ್ದ ಪ್ರಕರಣ ಇಲ್ಲಿಯವರೆಗೂ ಮುಂದುವರೆದಿದ್ದು ಸುಳ್ಳಲ್ಲ. ಆದರೆ ಆ ಬದ್ಧತೆಯನ್ನು ಕಾಯ್ದುಕೊಳ್ಳಲಾಗದ ಅಸಹಾಯಕತೆಗೆ ಸಿದ್ದು ಸರ್ಕಾರ ಸಿಲುಕಿದ್ದು ವಿಪರ್ಯಾಸವೇ ಸರಿ. ನೆಗಡಿಗೆ ಔಷಧಿ ತೆಗೆದುಕೊಳ್ಳುವುದು ಅಪರಾಧವೇನೂ ಅಲ್ಲ; ಆದರೆ, ಮೂಗನ್ನೇ ಕತ್ತರಿಸಿ ಹಾಕುವ ಕ್ರಮವಿದೆಯಲ್ಲ, ಅದು ಎಷ್ಟರ ಮಟ್ಟಿಗೆ ಸರಿ?

ಹಾಗೆ ನೋಡಿದರೆ, ಪರಿಶುದ್ಧ ನೇಮಕಾತಿ ಎಂಬ ರೂಢಿಯೇ ಕೆಪಿಎಸ್‌ಸಿ ಆವರಣದಲ್ಲಿಲ್ಲ. 1998, 1999, 2004ರ ಪ್ರೊಬೆಷನರ್ಸ್ ನೇಮಕಾತಿಗಳಿಂದ ಹಿಡಿದು ಸಣ್ಣಪುಟ್ಟ ನೇಮಕಾತಿಗಳವರೆಗೆ ಕೆಪಿಎಸ್‌ಸಿ ಭಾನಗಡಿಗಳ ಪಟ್ಟಿ ಬೆಳೆಯುತ್ತಲೇ ಸಾಗುತ್ತಿದೆ. ಆಯೋಗದ ಅಧ್ಯಕ್ಷರಾಗಿದ್ದಂತವರೇ (ಉದಾ: ಡಾ. ಕೃಷ್ಣ) ಜೈಲು ಸೇರುವಷ್ಟು ಅಕ್ರಮ ತಾಣ ಅದು. ಇದೇರೀತಿ ಕಟ್ಟುನಿಟ್ಟಿನ ಕ್ರಮಕೈಗೊಳ್ಳುವುದಾದರೆ ಕೆಪಿಎಸ್‌ಸಿಯ ಇಲ್ಲಿವರೆಗಿನ ಪ್ರತಿಯೊಂದು ನೇಮಕಾತಿಯನ್ನೂ ರದ್ದುಗೊಳಿಸಬೇಕಾಗುತ್ತದೆ. ಹೀಗಿರುವಾಗ ಕೇವಲ 2011ರ ನೇಮಕಾತಿಯ ಬಗ್ಗೆಯೇ ರವಾಕಿತ್ತು ಕಟು ಧೋರಣೆ ರಾಜಕೀಯ ವಲಯದಿಂದ [illegible] ಎಂಬ ಹದ್ಯಂತ್ರವನ್ನು 'ಪತ್ರಿಕೆ'ಯಲ್ಲಿ ಈ ಹಿಂದೆಯೇ (ಮಾರ್ಚ್



5, 2014ರ ಸಂಚಿಕೆಯಲ್ಲಿ) ವರದಿಗಾರ ದೊಡ್ಡಿಪಾಳ್ಯ ನರಸಿಂಹಮೂರ್ತಿಯವರು ಎಳೆಎಳೆಯಾಗಿ ಬಿಡಿಸಿಟ್ಟಿದ್ದರು.

2011ರಲ್ಲಿ ಅಂದಿನ ಸರ್ಕಾರ 362 ಗೆಜೆಟೆಡ್ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿತ್ತು, ಕೇವಲ 362 ಹುದ್ದೆಗಳಿಗೆ ಬಂದ ಅರ್ಜಿಗಳ ಸಂಖ್ಯೆ 1,38,800! ಅದರಲ್ಲಿ 91,367 ಮಂದಿ ಪ್ರಿಲಿಮಿನರಿ ಪರೀಕ್ಷೆ ಬರೆದರು. ಇವರಲ್ಲಿ 1:20 ರ ಅನುಪಾತದಲ್ಲಿ 7188 ಮಂದಿಯನ್ನು ಮುಖ್ಯ ಪರೀಕ್ಷೆಗಾಗಿ ಆಯ್ಕೆ ಮಾಡಲಾಯಿತು. 2012ರ ಡಿಸೆಂಬರ್‌ನಲ್ಲಿ ಮುಖ್ಯ ಪರೀಕ್ಷೆ ನಡೆದು 1085 ಮಂದಿಯನ್ನು (1:3 ರ ಅನುಪಾತದಲ್ಲಿ) ಸಂದರ್ಶನದ ಮೂಲಕ ಅಂತಿಮ ವ್ಯಕ್ತಿತ್ವ ಪರೀಕ್ಷೆಗೆ ಆರಿಸಲಾಗಿತ್ತು. ಆದರೆ ಈ ಆಯ್ಕೆ [illegible] ಕೆಪಿಎಸ್‌ಸಿ ಇತಿಹಾಸದಲ್ಲೇ ಅಚ್ಚರಿ ಮೂಡಿಸುವಂತದ್ದಾಗಿತ್ತು, ಯಾಕೆಂದರೆ, [illegible] 362 ಹುದ್ದೆಗಳಲ್ಲಿ ಎಸ್‌ಸಿ, ಎಸ್‌ಟಿ, ಮೈನಾರಿಟಿ ಹಿನ್ನೆಲೆಯ ಸುಮಾರು 90 ಅಭ್ಯರ್ಥಿಗಳು ಆಯ್ಕೆಯಾಗಿದ್ದರು! ಇವರ ಪೈಕಿ ಕಡುಬಡತನದ, ಆರ್ಥಿಕವಾಗಿ ತೀರಾ ಯಾತನಾಮಯ ಬದುಕು ಸಾಗಿಸುತ್ತಿರುವ ಅಭ್ಯರ್ಥಿಗಳೂ ಇದ್ದರು. ಈ ಹಿಂದಿನ ಯಾವ ಆಯ್ಕೆಯಲ್ಲೂ ಈ ಪ್ರಮಾಣದ ಅಂಕಿಅಂಶಗಳು ಸಿಗುವುದಿಲ್ಲ, ನಿರ್ಲಕ್ಷಿತ ಸಮುದಾಯಗಳ ಅಭ್ಯರ್ಥಿಗಳು ಮಾತ್ರವಲ್ಲ ಸಾಮಾನ್ಯ ವರ್ಗದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಲ್ಲೂ ಬಡವರೇ ಹೆಚ್ಚಾಗಿದ್ದರು. ಎಚ್‌ಡಿ ಕೋಟೆ ತಾಲ್ಲೂಕಿನ ರವಿ ಎಂಬ ಸೋಲಿಗರ ಹುಡುಗ ಈ ಬಾರಿ ಆಯ್ಕೆಯಾಗಿದ್ದ, ಆತನಿಗೆ ಲಕ್ಷಗಟ್ಟಲೆ ಲಂಚ ಕೊಡುವ ಸಾಮರ್ಥ್ಯ ಹಾಗಿರಲಿ, ಓದಲು ಬೇಕಾದ ಪುಸ್ತಕಗಳನ್ನು ಕೊಳ್ಳಲೂ ಕಾಸಿಲ್ಲ. ಆತನ ಕಾಲಿನಲ್ಲಿರುವ ಹರಿದ ಹವಾಯ್ ಚಪ್ಪಲಿಗಳು ಆತನ ಇಡೀ ಕತೆಯನ್ನು ಹೇಳುತ್ತವೆ.

ಕೀರ್ತನ ಎಂಬ ಮಡಿವಾಳ ಸಮುದಾಯದ ಅಭ್ಯರ್ಥಿ ಹಾಲಿ ಒಂದು ಬಳೆಶಾಪ್ ಇಟ್ಟುಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದಾಳೆ. ತನ್ನ ಬಳೆ ಶಾಪಿನಲ್ಲಿ ಕೂತೇ ಕೆಪಿಎಸ್‌ಸಿ ಪರೀಕ್ಷೆಗೆ ತಯಾರಿ ನಡೆಸಿ. ಅಂತೂಇಂತೂ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಳು. ಕೆಂಪಹೊನ್ನಯ್ಯ ಎಂಬ ಅಭ್ಯರ್ಥಿಯ ಕತೆ ಮತ್ತಷ್ಟು ದಾರುಣವಾದುದು. ಈತ ಹುಟ್ಟುಕುರುಡ. ಪರೀಕ್ಷೆ ಬರೆಯಲು ಒಬ್ಬ ಹೈಸ್ಕೂಲ್ ವಿದ್ಯಾರ್ಥಿಯನ್ನು ಸಹಾಯಕನನ್ನಾಗಿ ನೇಮಿಸಿಕೊಂಡು ಆತನ ಮೂಲಕ ಬರೆಸಿ ಆಯ್ಕೆಯಾಗಿ ಅಧಿಕಾರಿಯಾಗುವ ಕನಸು ಕಾಣುತ್ತಿದ್ದ. ಇಂಥಾ ಅದೆಷ್ಟೊ ದಾರುಣ ಬದುಕುಗಳೆಲ್ಲ ಗೆಜೆಟೆಡ್ ಅಧಿಕಾರಿಗಳಾಗಿ ಹಸನುಗೊಳ್ಳುವ ಅಂತಿಮ ಖುಷಿಯಲ್ಲಿದ್ದವು. ಆದರೆ ಸರ್ಕಾರದ ನಿರ್ಧಾರದಿಂದ ಅವರೆಲ್ಲರ ಕನಸುಗಳು ನಿಂತ ನೆಲದಲ್ಲೇ ಹೂತು ಹೋದಂತಾಗಿವೆ. 'ಕೈಯಿಂದ ತುತ್ತು ಕಿತ್ತು, ಬಿತ್ತು ಬತ್ತ ತಾ' ಎನ್ನುವಂತೆ ಕಳೆದ ಬಾರಿ ಆಯ್ಕೆಯಾದವರಿಗೆಲ್ಲ ವಯೋಮಿತಿ ಸಡಿಲಿಕೆ ನೀಡಿ ಮತ್ತೊಮ್ಮೆ ಪರೀಕ್ಷೆ ಬರೆಯಲು ಅನುವು ಮಾಡಿಕೊಡುವ ಭರವಸೆಯನ್ನೇನೊ ಸರ್ಕಾರ ನೀಡಿದೆ. ಆದರೆ ಸುಖಾಸುಮ್ಮನೆ ವ್ಯರ್ಥವಾಗುವ ಪರಿಶ್ರಮ, ಈ ಮೂರು ವರ್ಷದಲ್ಲಿ ಹೆಚ್ಚಾಗಿರುವ ಸ್ಪರ್ಧೆಗೆ ಸರ್ಕಾರ ಏನು ಪರಿಹಾರ ಕೊಟ್ಟೀತು?

ಭ್ರಷ್ಟಾಚಾರದಲ್ಲಿ ತೊಡಗಿದ್ದವರಿಗೆ ಶಿಕ್ಷೆಯಾಗಬೇಕಾದ್ದು ಎಷ್ಟು ನ್ಯಾಯೋಚಿತವೋ ಇಂಥಾ ಅಮಾಯಕ ಅಭ್ಯರ್ಥಿಗಳಿಗೆ ಅನ್ಯಾಯವಾಗದಂತೆ ತಡೆಯಬೇಕಾದ್ದು ಜವಾಬ್ದಾರಿಯುತ ಸರ್ಕಾರದ ಹೊಣೆಯಾಗಿತ್ತು. ಈ ಹಿಂದೆ ಒಂದೇ ಕುಟುಂಬದ ಐದಾರು ಮಂದಿ ಸಾಲುಸಾಲಾಗಿ ಆಯ್ಕೆಯಾಗಿದ್ದಂತಹ ಸಂದರ್ಭದಲ್ಲೂ ಇಂಥಾ ಕಠಿಣ ನಿರ್ಧಾರ ಹೊರಬಂದಿರಲಿಲ್ಲ. ಇಡೀ ನೇಮಕಾತಿಯನ್ನು ಸಾಮಾನ್ಯೀಕರಿಸಿ ನೋಡುವುದಕ್ಕಿಂತ ಭ್ರಷ್ಟಾಚಾರದಲ್ಲಿ ಪಾಲ್ಗೊಂಡ ಆರೋಪ ಹೊತ್ತಿದ್ದ ಅಭ್ಯರ್ಥಿಗಳನ್ನು ಹೊರಗಿಟ್ಟು ಉಳಿದ ಅಭ್ಯರ್ಥಿಗಳಿಂದ 'ಶ್ಯೂರಿಟಿ' ಬರೆಸಿಕೊಂಡು ಸಾಮಾಜಿಕ ನ್ಯಾಯ ಒದಗಿಸುವ ಪ್ರಯತ್ನವನ್ನು ಸರ್ಕಾರ ಮಾಡಬಹುದಿತ್ತು. ಆದರೆ, ಘನಘೋರ ಅನ್ಯಾಯಕ್ಕೆ ಭರವಸೆಯ ಸರ್ಕಾರವೂ [illegible] ಅಸಹಾಯಕತೆ ನೆಪ ಹೇಳಿ ಮುದ್ರೆ ಒತ್ತಿದ್ದು ದುರಾದೃಷ್ಟ. ನಮ್ಮ ಘನವೆತ್ತ ನ್ಯಾಯಾಲಯಗಳೇ, ನೂರು ಮಂದಿ ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿಕೊಂಡರೂ ಒಬ್ಬ ನಿರಪರಾಧಿಗೆ ಶಿಕ್ಷೆಯಾಗಕೂಡದು ಎಂಬ ನಿಲುವಿಗೆ ಅಂಟಿಕೊಂಡಿರುವಾಗ ಸರ್ಕಾರ ಈ ನಿರ್ಧಾರಕ್ಕೆ ಬಂದದ್ದು ಎಷ್ಟು ಸರಿ? ●



ನಿರುಪಮಾ-ದಿಲೀಪ್ ನಿಶ್ಚಿತಾರ್ಥ

ಹೀಗೊಂದು ಲವ್‌ಸ್ಟೋರಿ

ಅಣ್ಣಾವ್ರ ಮೊಮ್ಮಗಳು ಈಗ ಗೌಡರ ಸೊಸೆ!

ಇದೊಂದು ಹೊಸ ಲವ್‌ಸ್ಟೋರಿ. ದೊಡ್ಡನೆ ಹುಡುಗಿ ಮತ್ತು ಗೌಡರ ಹುಡುಗ. ಹ್ಯಾಟ್ರಿಕ್ ಹೀರೋ ಶಿವಣ್ಣ ತನ್ನ ಬಣ್ಣ ಕಾಯಕದುದ್ದಕ್ಕೂ, ಅದೆಷ್ಟು ಪ್ರೇಮಕತೆಗಳಲ್ಲಿ ಪಾರ್ಟು ಮಾಡಿಲ್ಲ? ದುರಹಂಕಾರಿ ವಿಲನ್‌ನ ಮಗಳನ್ನೇ ಪಟಾಯಿಸಿ ಪ್ರೀತಿಗಾಗಿ ಯುದ್ಧಕ್ಕಿಳಿದ ಕತೆ, ಅಡ್ಡ ಬಂದ ಜಾತಿಯ ವಿರುದ್ಧ ಸೆಣಸಾಡಿ ಗೆದ್ದ ಕತೆ, ಸೊಕ್ಕಿನ ಹುಡುಗಿಯನ್ನು ಪಳಗಿಸಿ ಒಲಿದ ಕತೆ, ಬೆನ್ನಿಗೆ ಬಿದ್ದ ವಿಲನ್ ವಿರುದ್ಧ ಹೋರಾಡಿ ಹುಡುಗಿಯ ಹೃದಯ ಗೆದ್ದ ಕತೆ- ಹೀಗೆ ಶಿವಣ್ಣ ನಟಿಸಿದ ಅಸಂಖ್ಯಾತ ಲವ್‌ಸ್ಟೋರಿಗಳೆಲ್ಲಕ್ಕಿಂತಲೂ ಇದೊಂದು ಭಿನ್ನವಾದ ಕತೆ ಮತ್ತು ನಿಜ ಬದುಕಿನ ಕತೆ.

ಇಲ್ಲಿ ಹೀರೋಯಿನ್ ಬೇರೆ ಯಾರೂ ಅಲ್ಲ ಶಿವಣ್ಣನ ಮುದ್ದಿನ ಮಗಳು ನಿರುಪಮಾ. ಪ್ರೀತಿಯಿಂದ ಶಿವಣ್ಣ ಆಕೆಯನ್ನು 'ನಿರು' ಎನ್ನುತ್ತಾರಂತೆ. ಹೀರೋ ಡಾ. ದಿಲೀಪ್ ಎಂಬ ಗೌಡರ ಹುಡುಗ. ಇಬ್ಬರಿಗೂ ಪ್ರೀತಿ ಮೊಳೆತದ್ದು ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನಲ್ಲಿ. ಇವನು ಸರಳ, ಮಿತಭಾಷಿ, ಅಂತರ್ಮುಖಿ. ಅವಳು ಲೋಕದ ಕಪಟವರಿಯದ ಮುಗ್ಧ ವಿನಯವಂತೆ. ಇಲ್ಲಿ ಯಾರಿಗೂ ಏನಕ್ಕೂ ಕೊರತೆಯಿಲ್ಲದ ಶ್ರೀಮಂತಿಕೆ. ಆಸ್ತಿ-ಅಂತಸ್ತಿನಲ್ಲಿ ಬಹುಶಃ ಹುಡುಗಿಯದ್ದೇ ಒಂದು ಕೈ ಮೇಲಿರಬೇಕು. ದೊಡ್ಡ ಮನೆಯ ಹುಡುಗಿ. ವರನಟ ರಾಜ್‌ಕುಮಾರ್‌ರ ಮೊಮ್ಮಗಳಾಗಿ ಮಾಜಿ ಮುಖ್ಯಮಂತ್ರಿ ಬಂಗಾರಪ್ಪನವರಿಗೂ ಮೊಮ್ಮಗಳಾಗಿ ನಿರುಪಮಾ ಒಲಿದದ್ದು ತನ್ನ ಸಹಪಾಠಿಗೆ. ಅದರಲ್ಲೂ ಸೀದಾಸಾದಾ ದೌಲತ್ತಿಲ್ಲದ ಮಣ್ಣಿನ ಮಗನಿಗೆ!

ಇಲ್ಲಿ ತೊಡರುಗಲ್ಲಿನಂತಿದ್ದದ್ದು ಜಾತಿಯೊಂದೆ. ಶಿವಣ್ಣ ಜಾತಿಯಿಂದ ಈಡಿಗರು. ಸಾಮಾನ್ಯವಾಗಿ ಕರ್ನಾಟಕದ ಶ್ರೀಮಂತ ಈಡಿಗರ್‍ಯಾರೂ ತಮ್ಮ ಜಾತಿ ಬಿಟ್ಟು ವೈವಾಹಿಕ ಸಂಬಂಧಕ್ಕಿಳಿಯುವುದೇ ಅಪರೂಪ. ಅದರಲ್ಲೂ ಅಣ್ಣಾವ್ರ ಕುಟುಂಬವೆಂದರೆ ಲೋಕದ ಕಣ್ಣೆಲ್ಲವೂ ಅವರ ಖಾಸಗಿ ಬದುಕಿನತ್ತಲೇ ನೆಟ್ಟಿರುತ್ತವೆ. ಅಂಥಾದ್ದರಲ್ಲಿ ಶಿವಣ್ಣ ತನ್ನ ಮುದ್ದಿನ ಮಗಳು ಜಾತಿ ಮೀರಿದ ಪ್ರೀತಿಗೆ ಬಿದ್ದಿದ್ದನ್ನು ವಿರೋಧಿಸಲಿಲ್ಲವಲ್ಲಾ; ಅದು ಕರ್ನಾಟಕದ ಮಟ್ಟಿಗೆ ಮಾಮೂಲಿನ ಸಂಗತಿಯಂತೂ ಅಲ್ಲವೇ ಅಲ್ಲ.

ಅತೀ ವಿದ್ಯಾವಂತೆ!

ಏಕೆಂದರೆ ರಾಜ್ ಕುಟುಂಬದ ಪರಂಪರೆಯಲ್ಲೇ ವೈವಾಹಿಕ ಶಿಸ್ತೆಂಬುದು ವಂಶಪಾರಂಪರ್ಯವಾಗಿ ಬಂದುಬಿಟ್ಟಿದೆ. ಅಲ್ಲಿ ಹೆಚ್ಚು ಓದಿದವರಿಗಿಂತಲೂ ದುಡಿಮೆಗೆ ನಿಂತವರೇ ಹೆಚ್ಚು. ಶಿವಣ್ಣ ಮದ್ರಾಸ್ ಯೂನಿವರ್ಸಿಟಿಯಲ್ಲಿ ಡಿಗ್ರಿ ಪಡೆಯುವುದಕ್ಕೇ ಹರಸಾಹಸ ಪಡಬೇಕಾಯಿತು. ಪುನೀತ್ ಎಸ್‌ಎಸ್‌ಎಲ್‌ಸಿ ಮುಗಿಸಿದ್ದೇ ದೊಡ್ಡ ಕತೆ. ರಾಘಣ್ಣ ಎಂಬಿಬಿಎಸ್ ಮುಗಿಸಿ ಡಾಕ್ಟರಾಗಬೇಕೆಂಬುದು ಅಣ್ಣಾವ್ರ ಹೆಬ್ಬಯಕೆಯಾಗಿತ್ತು. ಯಾಕೋ ಗೊತ್ತಿಲ್ಲ; ಓದು ರಾಘಣ್ಣನಿಗೆ ಒಗ್ಗಲೇ ಇಲ್ಲ. ಎಂಬಿಬಿಎಸ್ ಎರಡನೇ ಸೆಮಿಸ್ಟರ್ ಹೊತ್ತಿಗೇ ಅಣ್ಣಾವ್ರ ಎದುರು ಕೈಕಟ್ಟಿ ನಿಂತು "ನನಗೆ ಫೋರ್ಸ್ ಮಾಡಬೇಡಿ ತುಂಬಾ ಹಿಂಸೆಯಾಗುತ್ತೆ...!" ಎಂದು ಕಣ್ಣೀರಿಟ್ಟರು. ರಾಜ್ ಹೆಣ್ಣುಮಕ್ಕಳ ಪೈಕಿ ಪೂರ್ಣಿಮಾ ಮತ್ತು ಲಕ್ಷ್ಮಿ ಇಬ್ಬರೂ ಅಪ್ಪಟ ಗೃಹಿಣಿಯರಾಗೇ ಬೆಳೆದರು. ಅವರ ಮಕ್ಕಳಾರೂ ಶೈಕ್ಷಣಿಕವಾಗಿ ಸಾಹಸಕ್ಕಿಳಿಯಲಿಲ್ಲ. ರಾಘು ಮಗ ವಿನಯ್ ಓದಿನಲ್ಲಿ ಅಪ್ಪನಿಗಿಂತಲೂ ದುರ್ಬಲ. ಇಂಥಾದ್ದರಲ್ಲಿ ಮಕ್ಕಳು ಓದಿನಲ್ಲಿ ಸಾಧನೆಗೈಯಬೇಕೆಂಬ ವರನಟ ರಾಜ್ ಕನಸನ್ನು ಅಕ್ಷರಶಃ ಈಡೇರಿಸಿದವಳು ಶಿವಣ್ಣನ ಮುದ್ದಿನ ಮಗಳು ನಿರುಪಮಾ.

ತನ್ನ ಮಕ್ಕಳು ಓದಿ ಸಾಧಿಸಬೇಕೆಂಬ ರಾಜ್ ಮಹತ್ವಾಕಾಂಕ್ಷೆಯೇ ಮುಂದೊಮ್ಮೆ ಮೊಮ್ಮಕ್ಕಳ ಮೂಲಕ ವಿಚಿತ್ರ ತಿರುವೊಂದಕ್ಕೆ ಕಾರಣವಾಗುತ್ತದೆಯೆಂಬ ನಿರೀಕ್ಷೆ ತಾನೇ ಯಾರಿಗಿತ್ತು? ಅದು ಗೌಡರ ಹುಡುಗನೊಬ್ಬನನ್ನು ಅಳಿಯನನ್ನಾಗಿ ಕರೆತರುವ ತನಕ.

ಗೀತಕ್ಕ....!

ಸದ್ಯಕ್ಕಂತೂ ಅಳಿಯನ ಬಗ್ಗೆ ಶಿವಣ್ಣ ಹೆಮ್ಮೆಯಿಂದಲೇ ಮಾತಾಡುತ್ತಾರೆ. ಎಲ್ಲಕ್ಕೂ ಮಿಗಿಲಾಗಿ ಮಗಳು ಒಪ್ಪಿದ ಹುಡುಗನನ್ನೇ ಶಿವಣ್ಣ ಒಪ್ಪುವಂತೆ ಮಾಡಿದ್ದು ಗೀತಕ್ಕ. ತಾಯಿಗೆ ಅಂಥಾದ್ದೊಂದು ದೊಡ್ಡತನವಿಲ್ಲದೆ ಹೋಗಿದ್ದ[illegible] ಏನಾಗುತ್ತಿತ್ತೊ, ಅಸಲಿಗೆ ಈ ಪ್ರೇಮಕತೆ ಶುರುವಾ[illegible]ದ್ದೇ ರಾಜ್ ಕುಟುಂಬದಲ್ಲಿ ಸದ್ದಿಲ್ಲದೆ ಸಂಭವಿಸಿದ ಸ್ಥಿತ್ಯಂ[illegible]ದಿಂದ. ಅವಿಭಕ್ತ ಕುಟುಂಬವಾಗಿದ್ದ ರಾಜ್ ಸಂಸಾ[illegible]ಲ್ಲಿ ಮೊದಲ ಬಾರಿಗೆ ವಿದಳನವಾಗಿದ್ದು ಶಿವಣ್ಣನ ಸಂ[illegible]ರ ಪ್ರತ್ಯೇಕಗೊಳ್ಳುವ ಮೂಲಕವೆ. ಸದಾಶಿವನಗರದ [illegible]ಜ್ ಬಂಗಲೆಗೆ ಅನತಿ ದೂರದಲ್ಲೇ ಮಗಳಿಗೆಂದು ಬಂಗಾರಪ್ಪ ಕೊಟ್ಟಿದ್ದ ಬಂಗಲೆಯಿತ್ತು.

ರಾಘಣ್ಣನ ಮದುವೆಯಾಗುತ್ತಿದ್ದಂತೆಯೇ ಶಿವಣ್ಣ-ಗೀತಾ ಸಂಸಾರ ರಾಜ್ ಬಂಗಲೆ ತೊರೆದಿದ್ದೇ ಬಂಗಾರಪ್ಪ ಕೊಟ್ಟಿದ್ದ ಮನೆಗೆ ಸ್ಥಳಾಂತರವಾಯ್ತು. ಬಹುಶಃ ರಾಜ್ ಕುಟುಂಬ ಅವಿಭಕ್ತವಾಗಿಯೇ ಉಳಿದಿದ್ದರೆ ಪಾರ್ವತಮ್ಮನವರ ತಮ್ಮಂದಿರ ಪೈಕಿ ಗೋವಿಂದರಾಜ್, ಚಿನ್ನೇಗೌಡ ಅಥವಾ ಶ್ರೀನಿವಾಸ್ ಪೈಕಿ ಯಾರಾದರೂ ಒಬ್ಬರ ಗಂಡು ಮಕ್ಕಳನ್ನು ಶಿವಣ್ಣನ ಮಗಳಿಗೆ ತಂದುಕೊಳ್ಳಬೇಕಾಗುತ್ತಿತ್ತೇನೊ.

ಸಿನಿಮಾ, ಲಿಕ್ಕರ್ ದಂಧೆ, ರಿಯಲ್ ಎಸ್ಟೇಟ್, ಹೋಟೆಲ್ ಉದ್ದಿಮೆ ಇತ್ಯಾದಿಗಳಲ್ಲೇ ಮುಳುಗಿಹೋಗಿರುವ ಪಾರ್ವತಮ್ಮ ಸಹೋದರರು ಮತ್ತವರ ಮಕ್ಕಳ ಪೈಕಿ ಆ ಮಟ್ಟದ ವಿದ್ಯಾವಂತ, ಸುಸಂಸ್ಕೃತ, ಸದಭಿರುಚಿಯ ಹುಡುಗರಿದ್ದ ಬಗ್ಗೆ ಬಲ್ಲವರಿಲ್ಲ. ಹಾಗೊಮ್ಮೆ ಇದ್ದರೂ ಕೌಟುಂಬಿಕ ಪಾಳೇಗಾರಿಕೆಯಿಂದ ಅವರು ಹೊರತಾಗಿರಬಹುದೆಂಬ ಯಾವುದೇ ಗ್ಯಾರಂಟಿಯಿಲ್ಲ. ಇದಲ್ಲದೆ ಬೇರೆ ಆಯ್ಕೆಗಳೂ ಇರುತ್ತಿರಲಿಲ್ಲ. ಇಂಥಾದ್ದರಲ್ಲಿ ಅಂಥಾದ್ದೊಂದು ಅವಕಾಶದ ಬಾಗಿಲಾಗಿದ್ದು ಗೀತಕ್ಕ!

ಜೂನಿಯರ್ ಪಾರ್ವತಮ್ಮ?

ಸದಾಶಿವನಗರದ ರಾಜ್ ಬಂಗಲೆಯಿಂದ ಹೊರಬಿದ್ದ ಶಿವಣ್ಣನ ನಿರ್ಧಾರಕ್ಕೆ ಹೇಗೆ ಗೀತಾ ಕಾರಣರಾಗಿದ್ದರೋ ಹಾಗೆಯೇ ಪಾರ್ವತಮ್ಮನವರಿಗೆ ಪರ್ಯಾಯವಾಗಿ ರಾಜ್ ಕುಟುಂಬದ ಮತ್ತೊಂದು ಶಕ್ತಿ ಕೇಂದ್ರ ರೂಪುಗೊಳ್ಳುವುದಕ್ಕೂ ಅವರೇ ಕಾರಣರಾಗಿದ್ದರು. ಅದು ಮುತ್ತು ಸಿನಿಡೋರ್. ಇವತ್ತು ಶಿವಣ್ಣ ನೂರಕ್ಕೂ ಅಧಿಕ ಚಿತ್ರಗಳ ಕಾರಣ ಪುರುಷ. ಶಿವಣ್ಣನ ಕಾಲ್‌ಶೀಟ್, ಚಿತ್ರಗಳ ಆಯ್ಕೆ, ಕತೆ, ಹೀರೋಯಿನ್, ಡೈರೆಕ್ಟರ್, ಸಂಭಾವನೆ ಎಲ್ಲವನ್ನೂ ಗೀತಕ್ಕ ನಿರ್ಧರಿಸುತ್ತಾರೆ. ಶಿವಣ್ಣನ ಕುರಿತಂತೆ ಪ್ರತಿಯೊಂದೂ ಗೀತಕ್ಕನೇ ನಿರ್ಧರಿಸುತ್ತಾರೆ.

ಕೊಂಚ ಹಿಂತಿರುಗಿ ನೋಡುವುದಾದರೆ ರಾಜ್ ವಿಷಯದಲ್ಲೂ ಪಾರ್ವತಮ್ಮ ನಿರ್ವಹಿಸಿದ್ದ ಪಾತ್ರವಿದು. ಪಾರ್ವತಮ್ಮ ಕಣ್ಣಲ್ಲಿ ರಾಜ್ ಯಾವತ್ತಿದ್ದರೂ ಮಗುವೆ. ಅವರ ಪ್ರತಿಯೊಂದು ಚಿತ್ರದ ಕುರಿತಂತೆ ಪಾರ್ವತಮ್ಮ ಓಕೆ ಮಾಡಿದರಷ್ಟೆ ಮುಂದಿನ ಮಾತು. ಯಾವ ಪಾತ್ರ, ಯಾರ ಕತೆ, ಹೀರೋಯಿನ್ ಯಾರು, ನಿರ್ದೇಶಕರ್‍ಯಾರು, ಹಂಚಿಕೆ ಹೇಗೆ, ಎಷ್ಟು ಲಾಭ; ಇತ್ಯಾದಿಗಳೆಲ್ಲವನ್ನೂ ರೂಪಿಸುತ್ತಿದ್ದದ್ದೇ ಪಾರ್ವತಮ್ಮ!

ಬಹುಶಃ ಪಾರ್ವತಮ್ಮ ಈ ಥರದ ಕೋಟೆಯೊಂದನ್ನು ರಾಜ್ ಸುತ್ತ ಕಟ್ಟದೇ ಹೋಗಿದ್ದರೆ ವಜ್ರೇಶ್ವರಿ ಸಂಸ್ಥೆಯಾಗಲಿ, ರಾಜ್ ಎಂಬ ದೈತ್ಯಶಕ್ತಿಯಾಗಲಿ ಎದ್ದು ನಿಲ್ಲುತ್ತಿರಲಿಲ್ಲ. ಕೇವಲ ಬಣ್ಣ ಹಚ್ಚಿ ನಟಿಸುವುದರ ಹೊರತಾಗಿ ಬೇರೆ ಯಾವುದೇ ಜಂಜಾಟಗಳು ಅರಿವಿಗೆ ಬಾರದ ಹಾಗೆ ರಾಜ್‌ರನ್ನು ಇರಿಸಬೇಕೆಂಬುದು ಪಾರ್ವತಮ್ಮನ ಉದ್ದೇಶವಾಗಿತ್ತು. ಅವರ ಸಾರ್ವತ್ರಿಕ ಇಮೇಜ್ ಕಾಪಾಡುವುದು ಕೂಡ. ಐನೂರು ರೂಪಾಯಿಯ ನೋಟು ಚಾಲ್ತಿಗೆ ಬಂದಿದೆಯೆಂಬ ಸಂಗತಿ ರಾಜ್ ಗಮನಕ್ಕೆ ಬರುವ ಹೊತ್ತಿಗೆ ಬಹಳ ವರ್ಷಗಳೇ ಕಳೆದುಹೋಗಿತ್ತಂತೆ. ಐನೂರರ ನೋಟು ನೋಡಿದರೇ ರಾಜ್ ಮಗುವಿನಂತೆ ಅಚ್ಚರಿಪಟ್ಟಿದ್ದರಂತೆ!

ಎದ್ದು ನಿಂತ ಶಿವಣ್ಣ

ಇದು ಪಾರ್ವತಮ್ಮ ರಾಜ್‌ರನ್ನು ರೂಪಿಸಿದ ರೀತಿ. ಹಾಗೆಯೇ ಗೀತಕ್ಕ. ಶಿವಣ್ಣನ ವಿಷಯಕ್ಕೆ ಬಂದರೆ ಗೀತಾ ಜೂನಿಯರ್ ಪಾರ್ವತಮ್ಮ. ತಾನೊಬ್ಬ ಮುಖ್ಯಮಂತ್ರಿಯ ಮಗಳೆಂದು ಯಾವತ್ತಿಗೂ ಮರೆಯಲಿಲ್ಲ. ಬಂಗಾರಪ್ಪನವರ ಇತರೇ ಹೆಣ್ಣು ಮಕ್ಕಳಂತೆ ಜನ್ಮತಃ ದಕ್ಕಿದ ಸುಪ್ಪತ್ತಿಗೆಗಷ್ಟೇ ಸೀಮಿತಗೊಳ್ಳದೆ ಗಂಡಂದಿರ ಹಂಗಿನಲ್ಲೇ ಮುಗಿದು ಹೋಗಲಿಲ್ಲ. ಮುತ್ತು ಸಿನಿಡೋರ್ ಇವತ್ತಿಗೆ ಗಾಂಧಿನಗರದ ಅತೀಮುಖ್ಯ ಚಿತ್ರ ನಿರ್ಮಾಣ ಸಂಸ್ಥೆ ಶಿವಣ್ಣನ ಕಾಲ್‌ಶೀಟಿನ

ಕಲ್ಲು ಕರಗುವ ಸಮಯದಲ್ಲಿ...!

ಪಾರ್ವತಮ್ಮ ನಂತರ ಆ ಸ್ಥಾನವನ್ನು ರಾಜ್ ಕುಟುಂಬದಲ್ಲಿ ತುಂಬುವವರ್‍ಯಾರು?

ಈ ಪ್ರಶ್ನೆಗೆ ಉತ್ತರ ಸಿಕ್ಕಿದ್ದು ಮೊನ್ನೆ ನಡೆದ ಲೋಕಸಭಾ ಚುನಾವಣೆಯಲ್ಲಿ ಮತ್ತು ಶಿವಮೊಗ್ಗದಲ್ಲಿ!

ತಂದೆ ಬಂಗಾರಪ್ಪನವರ ಉತ್ತರಾಧಿಕಾರಿಯಾಗುವ ಗೀತಕ್ಕನ ಬಯಕೆಗೆ ತಮ್ಮ ಮಧು ಬಂಗಾರಪ್ಪ ಮಾತ್ರವೇ ಅಲ್ಲ ಶಿವಮೊಗ್ಗದ ಎಲ್ಲ ಜಾತಿ-ಜನಗಳೂ ಕೈಜೋಡಿಸಿದ್ದರು. ಸ್ವತಃ ಶಿವಣ್ಣನನ್ನು ತನ್ನ ಪರ ಪ್ರಚಾರಕ್ಕೆ ಇಳಿಸಿದ್ದೇ ಗೀತಾರ ದೊಡ್ಡ ಗೆಲುವಾಗಿತ್ತು. ಅದರಲ್ಲೂ ಗೀತಾ-ಶಿವಣ್ಣರದ್ದು ಎಂಥಾ ಉದಾತ್ತತೆಯೆಂದರೆ; ಸೋಲು-ಗೆಲುವಿನ



ಲೆಕ್ಕಾಚಾರವನ್ನೇ ಮರೆತು 'ನಾವು ಸೋತರೂ ಪರವಾಗಿಲ್ಲ, ನಮಗೆ ಶಿವಮೊಗ್ಗದ ಜನರ ಪ್ರೀತಿ ಆಶೀರ್ವಾದಗಳಷ್ಟೇ ಮುಖ್ಯ...' ಎಂದು ಗೀತಾ ಹೇಳಿಕೆ ಕೊಟ್ಟರು. ಅದು ಗೀತಕ್ಕನ ಹೃದಯವೈಶಾಲ್ಯದ ಪ್ರತೀಕವಾಗಿತ್ತು. ಆದರೆ ಜನಬೆಂಬಲವನ್ನು ಓಟುಗಳನ್ನಾಗಿ ಪರಿವರ್ತಿಸುವ ಕಲೆ ಮತ್ತು ತಂತ್ರಗಾರಿಕೆ ಗೊತ್ತಿದ್ದದ್ದು ಯಡಿಯೂರಪ್ಪಗೆ.

ನಿರುಪಮಾ ನಿಶ್ಚಿತಾ[illegible] ವಿಷಯದಲ್ಲೂ ಗೀತ[illegible] ಅದೇ ಹೃದಯವೈಶಾಲ್ಯತೆಯ[illegible] ಮೆರೆದರು. ಯಾರ್‍ಯಾರನ್ನು ಆಹ್ವಾ[illegible]ಬೇಕೆಂಬುದರಲ್ಲೂ ತೆರೆದ ಮನಸ್ಸಿಲ್ಲದೆ ಹೋಗಿದ್ದರೆ ಅಲ್ಲಿಗೆ ಲೀಲಾವತಿಯಂಥ ಹಿರಿಯ ಜೀವ ಕಾಣಿಸ[illegible] ಸಾಧ್ಯವಾಗುತ್ತಿರಲಿಲ್ಲ. ಹೇಗೆ ಪಾರ್ವತಮ್ಮ ರಾಜ್ ಕುಟುಂಬದ ಪಿತಾಮಾತೆಯಾಗಿ ನಿಶ್ಚಿತಾರ್ಥಕ್ಕೆ ಬಂದಿದ್ದರೋ [illegible] ರೀತಿ ಲೀಲಾವತಿಯವರನ್ನೂ ಅಷ್ಟೇ ವಿನಯದಿಂದ ಆಹ್ವಾನಿಸಲಾಗಿತ್ತು. ಪುತ್ರ ವಿನೋದ್‌ರಾಜ್ ಜೊತೆ [illegible] ಲೀಲಾವತಿ ಪ್ರತ್ಯಕ್ಷರಾಗಿದ್ದೇ ತಡ ನಿರುಪಮಾ ಮತ್ತು ದಿಲೀಪ್ ಅವರ ಕಾಲಿಗೆರಗಿದರು. ಮಕ್ಕಳಂತೆ [illegible]ಯಿಂದಲೇ ಲೀಲಾವತಿ ವಧುವರರನ್ನು ಆಶೀರ್ವದಿಸಿದ ದೃಶ್ಯವಿತ್ತಲ್ಲ; ನಿಜಕ್ಕೂ ಅದೊಂದು ಕಲ್ಲು ಕರಗುವ[illegible]ಮಯ!

ಯಾರ ಮನಸ್ಸಲ್ಲೂ ಕಲ್ಮಶವಿಲ್ಲ, ಗತಕಾಲದ ಹಂಗ[illegible]ಲ್ಲದೆ ಹಿರಿಯ ಜೀವವೊಂದರ ಮುಂದೆ ಪುಟ್ಟ ಮಕ್ಕಳಂತೆ ನಿರುಪಮಾ-ದಿಲೀಪ್ ಕಾಲಿಗೆರಗಿ ಪಡೆದ [illegible]ರ್ವಾದದ ಗಳಿಗೆ ಗಾಂಧಿನಗರದ ಮಟ್ಟಿಗೊಂದು ಕಲ್ಲು ಕರಗುವ ಸಮಯವೇ...! ಏಕೆಂದರೆ ಪಾರ್ವತಮ್ಮ[illegible]ದಂತೆ ಯಾರ ಮುಖದಲ್ಲೂ ಕುಹಕವಿರಲಿಲ್ಲ.



ಮಗಳನ್ನು ಹರಸಿದ ಗೀತಾ-ಶಿವಣ್ಣ



ವಲ್ಲಿ ಗೀತಕ್ಕನಿಗೆ ಪಾರ್ವತಮ್ಮನವರಂತೆ ತಿಕೆಯಿಲ್ಲ. ಪ್ರತಿಷ್ಠೆಗೆ ಬಿದ್ದು ಸುಮ್ಮನೆ ದಕ್ಕಿಂತ ಖಾಲಿ ಬಿದ್ದ ಹತ್ತು ದಿನಕ್ಕೇ ಯಾರಾದರೂ ಮಾ ಮುಗಿಸಿಕೊಳ್ಳುವುದಾದರೆ ಅದಕ್ಕೆ ಗೀತಕ್ಕನ ಷ್ಟೆ.

ದರೆ ಲಾಭ ಮುಖ್ಯ, ಕತೆ, ಪಾತ್ರದ ಜಿಗುಟಿಗೆ ಇವತ್ತು ಶಿವಣ್ಣ ಕೂಡ ರವಿಚಂದ್ರನ್ ಹಾಗೆಯೇ ಬೀಳಬೇಕಿತ್ತು. ಶಿವಣ್ಣ ನಿರ್ಮಾಪಕರ ಪಾಲಿನ ಗ್' ಆಗಿ ರೂಪುಗೊಂಡಿದ್ದೇ ಗೀತಾರ ಷ್ಟಿಯಿಂದ. ಮಾಡಿದ ಎಲ್ಲಾ ಚಿತ್ರಗಳೂ ವುದಿಲ್ಲ. ಹಿಟ್ ಎಂಬುದು ಸಾಲುಸಾಲಾಗಿ ಬರಲು ಇಲ್ಲ ಎಂಬುದು ಗೀತಕ್ಕಳ ಸರಳ ಲೆಕ್ಕಾಚಾರ.

ಶಿವಣ್ಣನನ್ನು ಸುದೀರ್ಘ ಕಾಲದ ತನಕ ಯಲ್ಲಿರಿಸಿತ್ತು. ಶಿವಣ್ಣನ ಕಾಲ್‌ಶೀಟ್ ಜೊತೆಗೆ ನಿಡೋರ್ ಸಂಸ್ಥೆಯ ವ್ಯವಹಾರವೂ ಕುದುರುತ್ತಿತ್ತು. ಲೈಟುಗಳು, ಜನರೇಟರ್, ಟ್ರಾಲಿ ಹೀಗೆ ಮುತ್ತು ರ್‌ನ ಔಟ್‌ಡೋರ್ ಯೂನಿಟ್‌ನ ಲಾಭ ಕೂಡ ಪಾತ್ರಗಳ ಸಂಖ್ಯೆಯಂತೆಯೇ ಬೆಳೆಯುತ್ತಿತ್ತು. ಯ ವಿಷಯದಲ್ಲೂ ಗೀತಕ್ಕ ಜಿಗುಟಲ್ಲ. ಬಂದಷ್ಟು ಎಂಬ ಔದಾರ್ಯ. ರಾಜ್ ಹಾಗೆ ಬಣ್ಣ ಹಚ್ಚಿ ದರ ಹೊರತಾಗಿ ಬೇರೇನೂ ಶಿವಣ್ಣನ ಅರಿವಿಗೆ ಇಲ್ಲ.

ಲ್ಲದರ ಫಲಶ್ರುತಿಯಂತೆ ಶಿವಣ್ಣ ರಾಜ್ ಡ ಬೇರೆಲ್ಲರನ್ನೂ ಮೀರಿಸಿ ಶ್ರೀಮಂತರಾದರು. ದ ಮಾನ್ಯತಾ ಟೆಕ್‌ಪಾರ್ಕ್ ಬಳಿ ಮುಕ್ಕಾಲೆಕರೆಯ ಂಗಲೆಯಿದ್ದಿತು. ಅದರಲ್ಲೇ ಸ್ವಿಮ್ಮಿಂಗ್ ಪೂಲ್, ಥಿಯೇಟರ್, ಎಡಿಟಿಂಗ್ ಸ್ಯೂಟ್, ಪುಟ್ಟ ಟ- ಹೀಗೆ ಕನ್ನಡ ಚಿತ್ರರಂಗದಲ್ಲಿ ಬೇರೆ ಯಾರೂ ಳಲಾಗದ ಪುಟ್ಟ ಅರಮನೆಯೇ ಶಿವಣ್ಣನದ್ದಾಯಿತು. ಗೆ ಸಂಸಾರ ಸ್ಥಳಾಂತರಗೊಂಡ ಮೇಲೆ ತಂದೆ ಪ್ಪ ಅಳಿಯನಿಗೆಂದು ಕಾಣಿಕೆ ನೀಡಿದ್ದ ನಗರದ ಬಂಗಲೆಯನ್ನು ಗೀತಾ ಮಾರಲಿಲ್ಲ. ಅದೀಗ ಸಿನಿಡೋರ್‌ನ Production House ಉಳಿದಿದೆ.

ಮುದ್ದಿನ ಮಗಳು

ನೆಯ ಹೊರತಾಗಿ ಬೇರೆಲ್ಲವನ್ನೂ ಗೀತಕ್ಕ ಷ್ಟ ರೀತಿಯಿತ್ತಲ್ಲ, ಬಹುಶಃ ಆ ಕಾರಣಕ್ಕೇ ಶಿವಣ್ಣ ಶುದ್ಧ 'ಫ್ಯಾಮಿಲಿ ಮ್ಯಾನ್' ಅಂದರೆ ತ್ತರಾಗೇ ಉಳಿದುಬಿಟ್ಟರು. ಮನೆ ಬಿಟ್ಟರೆ ಬಣ್ಣ ತೊಳೆದರೆ ಮನೆ. ಅದು ತನ್ನಿಬ್ಬರು ಕ್ಕಳ ಬಗ್ಗೆ ಶಿವಣ್ಣನಲ್ಲಿ ಬೇರೆಯದೇ ಅಟ್ಯಾಚ್ ಅಂದರೆ ಅನುಬಂಧವೊಂದಕ್ಕೆ ಕಾರಣವಾಯಿತು. ಮಗಳು ನಿರುಪಮಾ ಶಿವಣ್ಣನಿಗೆ ಪಂಚಪ್ರಾಣ.

ಎರಡನೇ ಮಗಳು ನಿಷ್ಕಲಾ ಯಾನೇ ನಿವೇದಿತಾ. ಇನ್ನೂ ಚಿಕ್ಕವಳು. ಮಕ್ಕಳನ್ನು ಓದಿಸಿಯೇ ಸಾಧಿಸಿಯೇ ಸಾಧಿಸಬೇಕೆಂಬ ಛಲಕ್ಕೂ ಬಹುಶಃ ಗೀತಕ್ಕನೇ ಕಾರಣವಾಗಿರಬೇಕು. ಕೆಲವೊಮ್ಮೆ ನಿರುಪಮಾ ರಾತ್ರಿಯಿಡೀ ಕೂತು ಓದಿಕೊಳ್ಳುತ್ತಿದ್ದರೆ ಅಪ್ಪ-ಅಮ್ಮ ಇಬ್ಬರೂ ನಿದ್ದೆಗೆಟ್ಟು ಮಗಳು ಕೂತು ಓದುವುದನ್ನೇ ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಿದ್ದರಂತೆ!

ಅಪ್ಪ-ಅಮ್ಮನ ಇಂಥಾ ಆರೈಕೆಯೇ ನಿರುಪಮಾಳನ್ನು ನಿರೂಪಿಸಿತು. ಓದು ಆಕೆಯ ಏಕೈಕ ಧ್ಯೇಯವಾಯಿತು. ಬೇರೆ ಯಾರಿಗಲ್ಲದೆ ಹೋದರೂ ತಂದೆ-ತಾಯಿಯ ಕನಸು ನನಸು ಮಾಡುವುದೊಂದೇ ಗುರಿಯಾಯಿತು. ಪಿಯುಸಿ ಮುಗಿಸಿ ಸಿಇಟಿಯಲ್ಲಿ ರ್‍ಯಾಂಕ್ ಗಳಿಸಿದಳು. ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜನ್ನೇ ಆಯ್ದುಕೊಂಡಳು. ಮೈಸೂರಿನಲ್ಲಿ ಯಾವುದಾದರೂ ಹಾಸ್ಟೆಲಿನಲ್ಲಿರಿಸುವುದು ಶಿವಣ್ಣನಿಗೆ ಕಷ್ಟವಿರಲಿಲ್ಲ. ಆದರೆ ಮುದ್ದಿನ ಮಗಳು. ಶಿವಣ್ಣನಾಗಲಿ, ಗೀತಾ ಆಗಲಿ ಯಾವತ್ತಿಗೂ ಮನೆಯೊಳಕ್ಕೆ ಸಿನಿಮಾ ಬಿಟ್ಟುಕೊಂಡವರಲ್ಲ. ಗಾಂಧಿನಗರವೇ ಬೇರೆ ಸಾಂಸಾರಿಕ ಸಂಗತಿಗಳೇ ಬೇರೆ-

ಮೈಸೂರಿನಲ್ಲಿ ಮಗಳು ಜೆಎಸ್‌ಎಸ್ ಕಾಲೇಜಿಗೆ ಪ್ರತಿನಿತ್ಯ ನಡೆದೇ ಹೋಗಬೇಕೆಂಬುದು ಶಿವಣ್ಣನ ಉದ್ದೇಶ. ಏಕೆಂದರೆ ಮದ್ರಾಸಿನಲ್ಲಿ ರಾಜ್ ತಮ್ಮ ಮಕ್ಕಳಿಗೆ ಸುಖ ರೂಢಿಸಲಿಲ್ಲ. ರಾಜ್‌ಕುಮಾರ್ ಮಕ್ಕಳಾದರೂ ಬೇರೆಲ್ಲ ಜನಸಾಮಾನ್ಯರಂತೆಯೇ ಪ್ರತಿನಿತ್ಯ ಸರ್ಕಾರಿ ಬಸ್ಸಿನಲ್ಲೇ ಕಾಲೇಜಿಗೆ ಹೋಗಿ ಬರಬೇಕೆಂಬುದು ರಾಜ್ ಆಸೆಯಾಗಿತ್ತು. ಅದೇ ರೀತಿ ಶಿವಣ್ಣ ಮದ್ರಾಸ್ ನಗರ ಸಾರಿಗೆಯ ಬಸ್ಸು ಹತ್ತಿಯೇ ತಮ್ಮ ಬಿಕಾಂ ಡಿಗ್ರಿ ಮುಗಿಸಿಕೊಂಡರು. ತಂದೆಯ ಆದರ್ಶವನ್ನೇ ಶಿವಣ್ಣ ಮಗಳಿಗೂ ಅಳವಡಿಸಿದರು. ಮೈಸೂರಿನ ಜೆಎಸ್‌ಎಸ್ ಮೆಡಿಕಲ್ ಕಾಲೇಜಿಗೆ ಅನತಿ ದೂರದಲ್ಲೇ ಮನೆಯೊಂದನ್ನು ಬಾಡಿಗೆಗೆ ಹಿಡಿದರು. ಹಾಸ್ಟೆಲಿನಲ್ಲಿರುವುದಕ್ಕಿಂತ ಮಗಳು ಈ ಮನೆಯಲ್ಲಿದ್ದು ಓದಿಕೊಂಡರೇನೆ ಚೆನ್ನ ಎಂಬ ನಿರ್ಧಾರಕ್ಕೆ ಬಂದರು. ಜೊತೆಗೆ ಒಂದು ಅಜ್ಜಿಯನ್ನೂ ಆ ಮನೆಯಲ್ಲಿ ಅಡುಗೆಗೆಂದು ತಂದಿಟ್ಟರು. ಸಣ್ಣಪುಟ್ಟ ಕೆಲಸಕ್ಕೆಂದು ಹುಡುಗನೊಬ್ಬನನ್ನು ನೇಮಿಸಿದರು. ಹಾಲು, ತರಕಾರಿ ತರಲೆಂದೇ ಆತನಿಗೊಂದು



ಸೈಕಲ್ ಕೊಡಿಸಿಬಿಟ್ಟರು. ಆದರೆ ಮನೆಯಿಂದ ಕಾಲೇಜಿಗೆ ಕಾರು ಬಳಸುವಂತಿಲ್ಲ, ನಡೆದೇ ಹೋಗಬೇಕು. ಜನಸಾಮಾನ್ಯರಂತೆ ಕಷ್ಟಕ್ಕೆ ಪಳಗಬೇಕು.

ಡಾ. ದಿಲೀಪ್...!

ಇದು ನಿರುಪಮಾಳ ವ್ಯಕ್ತಿತ್ವವನ್ನೇ ಮತ್ತಷ್ಟು ಸರಳತೆಗೆ ದಬ್ಬಿತ್ತು. ಒಬ್ಬ ಡಾಕ್ಟರ್ ಸುಖಕ್ಕೆ ಬಿದ್ದರೆ ಸೇವೆ ಸಿದ್ಧಿಸುವುದಿಲ್ಲ ಎಂಬ ಸತ್ಯವೂ ಅರಿವಾಗಿತ್ತು. ಸಾಮಾನ್ಯವಾಗಿ ಶ್ರೀಮಂತರ ಮೆಡಿಕೋ ಮಕ್ಕಳು ಡಿಸ್ಕೋ, ಪಬ್, ಶೋಕಿಗಳಲ್ಲೇ ಮುಗಿದು ಹೋಗುತ್ತಾರೆ. ವೀಕೆಂಡ್ ಪಾರ್ಟಿಯೇ ಅವರ ಪಾಲಿಗೆ ಕಂಟಕವಾಗುತ್ತದೆ. ಆದರೆ ಶಿವಣ್ಣ ಮತ್ತು ಗೀತಕ್ಕ ಪ್ರತಿ ವೀಕೆಂಡ್‌ಗೆಂದೇ ಮೈಸೂರಿಗೆ ಹೋಗುತ್ತಿದ್ದರು. ದಿನವಿಡೀ ಮಗಳೊಡನೆ ಕಳೆಯುತ್ತಿದ್ದರು. ಹಾಗೆ ನೋಡಿದರೆ ಮಗಳ ಪಾಲಿಗೆ ಶಿವಣ್ಣ-ಗೀತಾ ಆದರ್ಶ ತಂದೆತಾಯಿಗಳೇ!

ಬಹುಶಃ ಇಂಥ ಸರಳತೆಯೇ ಡಾ. ದಿಲೀಪ್ ಮನ ತಟ್ಟಿದೆ. ಬೆಂಗಳೂರಿನಲ್ಲಿ ಲೋಕೋಪಯೋಗಿ ಇಲಾಖೆಯ ಪ್ರಭಾವಿ ಇಂಜಿನಿಯರ್ ಮಗನಾದ ದಿಲೀಪ್ ಕೂಡ ಐಷಾರಾಮದಲ್ಲೇ ಬೆಳೆದಿದ್ದನಾದರೂ ಶೋಕಿಗೆ ಬಿದ್ದವನಲ್ಲ.



ಸಾಹಿತ್ಯಕ ಜ್ಞಾನ ಮತ್ತು ಭಾವುಕ ಓದಿನ ವೈಚಾರಿಕತೆಗೆ ಪಳಗಿದ್ದಾನೆ. ಮಿತ ಭಾಷಿ. ಮುಖದಲ್ಲೇ ವಿನಯವಂತಿಕೆ ವ್ಯಕ್ತಿಗತವಾದ ಸರಳತೆಯಿದೆ. ಜಾತಿಯಿಂದ ಒಕ್ಕಲಿಗನಾದ್ದರಿಂದ ಮಣ್ಣಿನ ಗುಣವಿದೆ. ಕನ್ನಡಿಗರ ಸಹಜವಾದ ಸರಳತೆ ಮೈಗೂಡಿದೆ. ದೊಡ್ಮನೆ ಹುಡುಗಿ ಮತ್ತು ಗೌಡರ ಹುಡುಗನ ನಡುವೆ ಅದಾವ ಗಳಿಗೆಯಲ್ಲಿ ಪ್ರೀತಿ ಮೊಳೆಯಿತೊ-

ಪ್ರೀತಿ ಚಿಗುರಾಗಿ, ಮರವಾಗಿ, ಕಾಯಾಗಿ, ಹಣ್ಣಾಗುವ ಗಳಿಗೆಯೂ ತುಂಬ ತಡವಾಗಲಿಲ್ಲ. ಅದೊಂದು ದಿನ ತಾಯಿಯನ್ನು ಕೂರಿಸಿಕೊಂಡು ಹೇಳೇಬಿಟ್ಟಳು. ಏಕೆಂದರೆ ಪ್ರೀತಿಯಲ್ಲಿ ಕಲ್ಮಶವಿರಲಿಲ್ಲ. ಪ್ರಾಮಾಣಿಕತೆಯಿತ್ತು. ಆಯ್ಕೆಯ ವಿಷಯದಲ್ಲೂ ಡಾ. ದಿಲೀಪ್ ಈ ಕಾಲದ ಬೇರೆಲ್ಲ ಹುಡುಗರಿಗಿಂತಲೂ ಭಿನ್ನವಾಗಿದ್ದ. ಸಜ್ಜನಿಕೆಯಿತ್ತು. ತಾಯಿಗೆ ಮಗಳ ಆಯ್ಕೆ ಇಷ್ಟವಾಗಿತ್ತು. ಅಪ್ಪನಿಗೆ ಅದನ್ನು ನೀನೇ ಹೇಳು... ಎಂದರಂತೆ. ಅದು ಕೂಡ ತಡವಾಗಲಿಲ್ಲ. ಅದೊಂದು ಸಂಜೆ ತನ್ನ ತಾಯಿಯ ಜೊತೆ ಮಗಳು ತೆರೆದಿಟ್ಟ ಕೋರಿಕೆಯನ್ನು ಕೇಳಿಯೇ ಶಿವಣ್ಣ ಖುಷಿಯಾದರಂತೆ.


ಹೆತ್ತ ಕರುಳು, ಮುದ್ದಿನ ಮಗಳು. ಅವಳೇ ಇಷ್ಟಪಟ್ಟ ಮೇಲೆ ನಮ್ಮದೇ. ಕಷ್ಟ? ಫೇಸ್‌ಬುಕ್ಕು, ಟ್ವಿಟ್ಟರು, ಜಾತಿ, ವಿಕೃತಿಗಳೆಲ್ಲವನ್ನೂ ಮೀರಿ ಕೈಗೂಡಿದ ಪ್ರೀತಿಯಿದು. ತಥಾಸ್ತು ಎನ್ನಲೇಬೇಕು. ಕಪ್ಪು ಬಿಳುಪು ಕಾಲದ ಆಕ್ಸಾನ್ ನಿಷ್ಕಲ್ಮಶ ಯುಗಳ ಗೀತೆಯಂತೆಯೇ ಮಗಳ ಲವ್‌ಸ್ಟೋರಿಯಿತ್ತು. ಆಗಸ್ಟ್ 3ರ ಭಾನುವಾರದ ಸಂಜೆ ಅರಮನೆ ಮೈದಾನದಲ್ಲದು ಸಾಕಾರಗೊಂಡಿತ್ತು. ಅಂಬಿ-ಸುಮಲತಾ ಆಶೀರ್ವಾದ, ರವಿಚಂದ್ರನ್ ಹಾರೈಕೆ, ಪಾರ್ವತಮ್ಮ ಎಂಬ [illegible] ಸಚ್ಚಿತಾರ್ಥದ ರೂಪ ಧರಿಸಿತ್ತು.

■ ರಾ. ಸೋಮನಾಥ್




ಜಾತಿ ಪಾಳೆಗಾರಿಕೆ ಪ್ರವೃತ್ತಿಯ ವಿರುದ್ಧ ಕನ್ನಡನಾಡಿನ ವಿದ್ಯಾವಂತ, ಅನುಕೂಲಸ್ಥ ಮನೆತನಗಳ ಹೆಣ್ಣುಮಕ್ಕಳಲ್ಲೇ ಅಸಹ್ಯ, ಅಸಹನೆಯಿದೆಯೆ?

ತಮ್ಮದೇ ಸಂಬಂಧಿಕರಲ್ಲಿ ಹಿರಿಯರು ಕೂತು ಏರ್ಪಡಿಸಿಕೊಳ್ಳುವ ವೈವಾಹಿಕ, ಆರ್ಥಿಕ, ಸಾಂಪತ್ತಿಕ ಸಂಬಂಧವೆಂಬುದು ಹೆಣ್ಣುಮಕ್ಕಳ ಪಾಲಿಗೆ, ಬಂಗಾರದ ಪಂಜರವೆಂಬ ವಾಸ್ತವ ಕಾಲಕ್ರಮೇಣ ಇಂಥ ಮಹಿಳೆಯರಿಗೆ ಮನದಟ್ಟಾಗುತ್ತಿದೆಯೇ?



ಅಶೋಕ್ ಗುತ್ತೇದಾರ್




ಮಾಲಿಕಯ್ಯ ಗುತ್ತೇದಾರ್


ಗುಲ್ಬರ್ಗಾದ ಲಿಕ್ಕರ್ ದೊರೆಗಳ ಪೈಕಿ ತನ್ನ ಪತ್ನಿಯ ಪ್ರಿಯಕರನಿಂದಲೇ ಕೊಲೆಯಾದ ಅಶೋಕ್ ಗುತ್ತೇದಾರ್ ನೆಂಟಸ್ತಿಕೆಯಲ್ಲಿ ಮಾಜಿ ಮಂತ್ರಿ ಮಾಲಿಕಯ್ಯ ಗುತ್ತೇದಾರ್‌ಗೆ ತಮ್ಮನಾಗಬೇಕು. ದುಡ್ಡು ಆಸ್ತಿ ಅಂತಸ್ತು ಎಲ್ಲವೂ ಇತ್ತು. ಅದೇ ಆಧಾರದ ಮೇಲೆ ಲಿಕ್ಕರ್ ದೊರೆಗಳೆಲ್ಲ ಕೂತು ವೈವಾಹಿಕ ಸಂಬಂಧ ಏರ್ಪಡಿಸಿಕೊಂಡರು. ಅಶೋಕ್ ಕೈಹಿಡಿದ ಪದ್ಮಾವತಿ ಪಾರ್ವತಮ್ಮ ಕುಟುಂಬಕ್ಕೆ ದೂರದ ಸಂಬಂಧಿಯೇ ಆಗಿದ್ದವರೊಬ್ಬರ ಮಗಳು. ವಿದ್ಯಾವಂತೆ. ಕಾನ್ವೆಂಟ್ ಶಿಕ್ಷಣ, ಬೆಂಗಳೂರಿನ ವಾತಾವರಣ, ಮುಕ್ತ ನಾಗರಿಕತೆಯಲ್ಲಿ ಬೆಳೆದಿದ್ದ ಪದ್ಮಾವತಿಗೆ ಗುಲ್ಬರ್ಗಾದ ಗುತ್ತೇದಾರ್ ಪಾಳೇಗಾರರ ಕುಟುಂಬದ ನಿರ್ಬಂಧಗಳೇ ಜೈಲಾಗಿ ಹೋಯಿತು.

ಕನಸು ಕಂಡ ಹುಡುಗಿ. ವ್ಯಾಪಾರವೇ ಮುಖ್ಯವಾಗಿದ್ದ ಗಂಡ. ಮುದುಡಿದ ಮನಸ್ಸಿಗೆ ಆರೈಕೆಯಂತೆ ಪಕ್ಕದ ಮನೆಯ ಪಡ್ಡೆ ಹುಡುಗನ ಪರಿಚಯವಾಯಿತು. ಅಂತಿಮವಾಗಿ ಅದೇ ಅಶೋಕ್ ಗುತ್ತೇದಾರ್ ಹತ್ಯೆಗೆ ಕಾರಣವಾಯಿತು. ಇವತ್ತಿಗೂ ಪದ್ಮಾವತಿ ತನ್ನ ಪ್ರಿಯಕರನ ಜೊತೆ ಜೈಲಿನಲ್ಲಿದ್ದಾಳೆ. ಓದಿದ, ಸುಸಂಸ್ಕೃತ ಹೆಣ್ಣುಮಕ್ಕಳ ಕನಸಿಗೆ ಆಸ್ತಿಬಾಕ ಹಿರಿಯರು ಕೊಳ್ಳಿಯಿಟ್ಟರೆ ಏನಾಗುತ್ತದೆ ಎಂಬುದಕ್ಕೆ ಪದ್ಮಾವತಿ ಒಂದು ಉದಾಹರಣೆಯಷ್ಟೆ. ಹುಡುಗ ಒಳ್ಳೆಯವನಾಗಿದ್ದರೆ ಸಾಕು ಜಾತಿ ಮುಖ್ಯವಲ್ಲ ಎಂಬ ವಿವೇಕವೊಂದು ತಡವಾಗಿಯಾದರೂ ತಂದೆ-ತಾಯಿಗಳಲ್ಲಿ ಮೂಡುತ್ತಿದೆಯಲ್ಲ; ಕರ್ನಾಟಕದ ಸಾಮಾಜಿಕ ಸ್ಥಿತ್ಯಂತರಗಳ ಮಟ್ಟಿಗಿದು ಆರೋಗ್ಯಕರ ಬೆಳವಣಿಗೆಯೆ. ಗೀತಾ-ಶಿವಣ್ಣ ದಂಪತಿಗಳ ಔದಾರ್ಯ ಮತ್ತು ಹೃದಯ ವೈಶಾಲ್ಯ ಈ ನಿಟ್ಟಿನಲ್ಲಿ ಅನುಕರಣೀಯವೆ.

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್



ನಿರೀಕ್ಷೆ ಹೆಚ್ಚಿಸಿದ ವಿಕಾಸ್



ಜಿನುಗುತ್ತಿರುವ ಮಳೆ, ಪ್ರತಿಕೂಲ ವಾತಾವರಣ ಮತ್ತು ತೀವ್ರ ಸ್ಪರ್ಧೆಯೊಡ್ಡಿದ ಬಲಶಾಲಿ ಪ್ರತಿಸ್ಪರ್ಧಿಗಳ ನಡುವೆಯೂ 2014 ರ ಗ್ಲಾಸ್ಗೋ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದ ಮೈಸೂರು ಮೂಲದ ಡಿಸ್ಕಸ್ ಥ್ರೋ ಕ್ರೀಡಾಪಟು ವಿಕಾಸ ಗೌಡರ ಸಾಧನೆ ಸ್ಮರಣೀಯ ಮತ್ತು ಅಭಿನಂದನೀಯ. ಈ ಸಾಧನೆ ಅಪೂರ್ವ ಎನಿಸಿಕೊಳ್ಳಲು ಬೇಕಾದಷ್ಟು ಕಾರಣಗಳಿವೆ. ಒಂದು- ಸುಮಾರು ಐವತ್ತಾರು ಸುದೀರ್ಘ ವರ್ಷಗಳ ನಂತರ ಫೀಲ್ಡ್ ಮತ್ತು ಟ್ರ್ಯಾಕ್ ಅಥ್ಲೆಟಿಕ್ ಸ್ಪರ್ಧೆಯ ವೈಯಕ್ತಿಕ ವಿಭಾಗದಲ್ಲಿ ಈತ ಚಿನ್ನದ ಪದಕ ಗಳಿಸಿ ಮಹೋನ್ನತ ಸಾಧನೆ ಮಾಡಿರುವುದು. 1958 ರ ಕಾರ್ಡಿಫ್ ಕ್ರೀಡಾಕೂಟದಲ್ಲಿ ಮಿಂಚಿನ ಕ್ರೀಡಾಪಟು ಮಿಲ್ಖಾ ಸಿಂಗ್ ವೈಯಕ್ತಿಕ ಚಿನ್ನದ ಪದಕ ಗೆದ್ದಿದ್ದು ಬಿಟ್ಟರೆ ಮೊನ್ನೆಯ ಕ್ರೀಡಾಕೂಟದಲ್ಲಿ ವಿಕಾಸಗೌಡರ ಸಾಧನೆ ಭಾರತೀಯ ಕ್ರೀಡಾ ಇತಿಹಾಸದಲ್ಲಿ ಉಜ್ವಲ ಎನಿಸಿಕೊಂಡಿದೆ. ಈತ ಮತ್ತು ಮತ್ತೊಂದು ಚಿನ್ನದ ಸಾಧನೆ ಮಾಡಿದ ಪಿ.ಕಶ್ಯಪ್ ಕ್ರೀಡಾಪ್ರೇಮಿಗಳಲ್ಲಿ ಮಿಂಚು ಹರಿಸಿರುವುದು ಸುಳ್ಳಲ್ಲ. ಕೆಲವು ವೈಫಲ್ಯಗಳನ್ನು ಮೆಟ್ಟಿ ನಿಂತು ಅಮೋಘ ಸಾಧನೆ ಮಾಡಿರುವ ವಿಕಾಸ ಗೌಡರ ಮೇಲೆ ಇದೀಗ ಒಲಂಪಿಕ್ಸ್ ಪದಕದ ನಿರೀಕ್ಷೆ ಮತ್ತು ಒತ್ತಡ ಸಹಜವಾಗಿಯೇ ಹೆಚ್ಚತೊಡಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶದ ಹಿರಿಮೆ ಹೆಚ್ಚಿಸಿದ ಈತ ಕರ್ನಾಟಕದವರೆಂಬುದು ಕನ್ನಡಿಗರಿಗೆಲ್ಲರಿಗೂ ಸಂತಸದ ವಿಷಯ.

ಕಠಿಣವಾಗಿರುವ ಕ್ರೀಡೆಗೆ ಅಗತ್ಯದ ಶರೀರ ಮತ್ತು ಮಾನಸಿಕ ದೃಢತೆ ಹೊಂದಿದ ವಿಕಾಸ ಗೌಡ ಹುಟ್ಟಿದ್ದು (ಜನನ-1983) ಮೈಸೂರಿನಲ್ಲಾದರೂ ಬೆಳೆದಿದ್ದೆಲ್ಲ ಅಮೆರಿಕಾದ ಮೇರಿಲ್ಯಾಂಡ್‌ನಲ್ಲಿ, ಶಿಕ್ಷಣ ಹಾಗೂ ತರಬೇತಿ ಕೂಡಾ ನಡೆದಿದ್ದು ವಿದೇಶದ ನೆಲದಲ್ಲಿಯೇ. ಇಷ್ಟಿದ್ದರೂ ವಿಕಾಸ್ ಕ್ರೀಡೆಯಲ್ಲಿ ಪ್ರತಿನಿಧಿಸುತ್ತಿರುವುದು ತನ್ನ ತಾಯ್ನೆಲ ಭಾರತವನ್ನು. ಇವರ ಕುಟುಂಬದಲ್ಲಿ ಹಲವರು ಕ್ರೀಡಾಪಟುಗಳಿದ್ದಾರೆ. ವಿಕಾಸ್ ತಂದೆ ಶಿವೇಗೌಡ ಕೂಡಾ ಕ್ರೀಡಾಪಟು. 1988 ರ ಭಾರತೀಯ ಅಥ್ಲೆಟಿಕ್ ತಂಡಕ್ಕೆ ಶಿವೇಗೌಡ ಕೋಚ್ ಆಗಿದ್ದರು. ವಿಕಾಸ ಗೌಡರಿಗೆ ಅವರ ಡಿಸ್ಕಸ್ ಥ್ರೋ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡಲು ಅಮೆರಿಕಾದಲ್ಲಿನ ವಿದ್ಯಾಭ್ಯಾಸ ಹಾಗೂ ತರಬೇತಿ ನಿರ್ಣಾಯಕ ಪಾತ್ರ ವಹಿಸಿದ್ದವು. ಇವರು ಕೇವಲ ಡಿಸ್ಕಸ್ ಥ್ರೋ ಕ್ರೀಡಾಪಟು ಮಾತ್ರವಲ್ಲ, ಶಾಟ್‌ಪುಟ್ ಎಸೆತಗಾರರೂ ಹೌದು. ತಮ್ಮ ಕ್ರೀಡಾ ಜೀವನದ ಮೊದಲ ದಿನಗಳಲ್ಲಿ ವಿಕಾಸ ಗೌಡ ಡಿಸ್ಕಸ್ ಮತ್ತು ಶಾಟ್‌ಪುಟ್ ಎರಡೂ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. ಆದರೀಗ ಕೇವಲ ಡಿಸ್ಕಸ್ ಎಸೆತದ ಸ್ಪರ್ಧೆಯನ್ನ ತಮ್ಮ ಏಕೈಕ ಗುರಿಯನ್ನಾಗಿಸಿಕೊಂಡು ಈ ಸಾಧನೆ ಮಾಡಿದ್ದಾರೆ.

2014ರ ಗ್ಲಾಸ್ಗೊ ಕ್ರೀಡಾಕೂಟದ ಚಿನ್ನದ ಸಾಧನೆಯ ಹಿಂದೆ ಅಪಾರ ಪರಿಶ್ರಮ ಮತ್ತು ವೈಫಲ್ಯದ ಕಹಿ ನೆನಪುಗಳು ಸಮಪ್ರಮಾಣದಲ್ಲಿವೆ. 2008 ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಫೈನಲ್ ರೌಂಡ್ ತಲುಪಲು ವಿಫಲರಾದ ಇವರು 2012 ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಫೈನಲ್ ತಲುಪುವಲ್ಲಿ ಸಫಲರಾದರು. ಆದರೆ ಫೈನಲ್‌ನಲ್ಲಿ 8 ನೇ ಸ್ಥಾನಕ್ಕೆ ತೃಪ್ತಿ ಪಡಬೇಕಾಯಿತು. 2010 ರ ದೆಹಲಿ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಬೆಳ್ಳಿಯ ಸಾಧನೆ ಮಾಡಿದ ಇವರು ಇದೀಗ ಚಿನ್ನದ ಸಾಧನೆಯ ಮೂಲಕ ಅತ್ಯುನ್ನತ ಕೊಡುಗೆಗೆ ಕಾರಣರಾಗಿದ್ದಾರೆ. ಮೊನ್ನೆ ಗ್ಲಾಸ್ಗೊನಲ್ಲಿ ಎಸೆದ 63.64 ಮೀಟರ್‌ಗಳ ಸಾಧನೆ ಇವರ ಅತ್ಯುತ್ಕೃಷ್ಟ ಸಾಧನೆಯೇನಲ್ಲ, ಇವರ ವೈಯಕ್ತಿಕ ಅತ್ಯುತ್ತಮ ಸಾಧನೆ 66.28 ಮೀಟರ್‌ಗಳಾಗಿದ್ದು, ಇದು 2013 ರ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ದಾಖಲಾಗಿದೆ. ಭಾರಿ ಸ್ಪರ್ಧೆ ಇರುವ ಒಲಿಂಪಿಕ್ಸ್‌ನಲ್ಲಿ ಪದಕ ಗಳಿಸಲು ಇದು ಸಾಲದು ಎಂದೆನ್ನಿಸಿದರೂ 31 ವರ್ಷದ ವಿಕಾಸ ಗೌಡರಿಗೆ ಇನ್ನೂ ಹೆಚ್ಚಿನ ಜಿಗಿತ ಸಾಧಿಸಲು ಅವಕಾಶವಿದೆ.


ಇವರ ಈ ಸಾಧನೆ ಬಹಳ ಮಹತ್ವದ್ದು ಎಂಬುದಕ್ಕೆ ಇನ್ನೂ ಒಂದು ಕಾರಣವಿದೆ. ಭಾರತೀಯ ಕ್ರೀಡಾ ವ್ಯವಸ್ಥೆ ಪರಮ ಭ್ರಷ್ಟಾಚಾರ, ಸ್ವಜನಪಕ್ಷಪಾತ, ರಾಜಕೀಯ ಪುಢಾರಿ-ದಲ್ಲಾಳಿಗಳ ಒಂದು ಪಾಪಕೂಪ. ಇದರೊಂದಿಗೆ ಲೈಂಗಿಕ ಹಗರಣಗಳ ವಿಷವರ್ತುಲ ಸಹ ಕ್ರೀಡಾಪಟುಗ... ಬಾಧಿಸುತ್ತಿದೆ. ಗ್ಲಾಮರ್ ಕ್ರೀಡೆಯಾದ ಕ್ರಿಕೆಟ್ ... ಹೊರತುಪಡಿಸಿದರೆ ಡಿಸ್ಕಸ್ ಥ್ರೋ, ಶಾಟ್‌ಪುಟ್, ... ಶೂಟಿಂಗ್ ಮುಂತಾದ ಕ್ರೀಡೆಗಳಿಗೆ ಮಾನ್ಯತೆಯ ... ಎದ್ದು ಕಾಣುತ್ತಿದೆ. ಇಂತಹ ಕೊರತೆಗಳ ನಡುವೆ ... ವಿಕಾಸ ಗೌಡರ ಸಾಧನೆ ಅತ್ಯುತ್ತಮ. ಈಗೀಗ ಶ... ಬ್ಯಾಡ್ಮಿಂಟನ್, ಶ್ರೀಮಂತರ ಕ್ರೀಡೆಯಾದ ಟೆ... ಭಾರತದಲ್ಲಿ ಮಾನ್ಯತೆ ಗಳಿಸಿಕೊಳ್ಳುತ್ತಿದ್ದರೂ ಕ್ರಿಕೆಟ್‌ಗೆ ... ಮಾನ್ಯತೆ ಬೇರೆ ಕ್ರೀಡೆಗಳಿಗಿಲ್ಲ. ಕ್ರೀಡಾಪಟುಗಳು ... ಪರಮಭ್ರಷ್ಟ ವ್ಯವಸ್ಥೆಯಲ್ಲಿ ತರಬೇತಿ ಪಡೆದು ಸಾ... ಮಾಡಬೇಕೆಂದರೆ ಹರಸಾಹಸ ಪಡಬೇಕಾದಿ... ಒಲಂಪಿಕ್ಸ್‌ನಲ್ಲಿ ಭಾರತೀಯರಿಗೆ ಪದಕ ಏಕಿಲ್ಲ ಎ... ನಾಲ್ಕು ವರ್ಷಕ್ಕೊಮ್ಮೆ ಏರುದನಿಯಲ್ಲಿ ಕೂಗ... ಮಾಧ್ಯಮಗಳು ಮತ್ತು ಕ್ರೀಡಾಪ್ರೇಮಿಗಳು ಈ ಸಮಸ್ಯೆ... ಮೊದಲು ಅರ್ಥ ಮಾಡಿಕೊಳ್ಳಬೇಕಿದೆ.

ಭ್ರಷ್ಟ ಬಿಸಿಸಿಐನಲ್ಲಿ ಕೋಟ್ಯಾಂತರ ... ಹಣವಿರುವುದರಿಂದ ಕ್ರಿಕೆಟಿಗರು ಹೇಗಾದ... ಪಾರಾಗುತ್ತಾರೆ. ಆದರೆ ಇತರೇ ಕ್ರೀಡಾಪಟುಗಳ ಪ... ಹೇಳತೀರದು. ಪಶ್ಚಿಮದ ರಾಷ್ಟ್ರಗಳಲ್ಲಿ ಹಾಗೂ ಆಸ್ಟ್ರೇಲಿ... ಚೈನಾದಂತಹ ದೇಶಗಳಲ್ಲಿ ವ್ಯವಸ್ಥೆಯೇ ಕ್ರೀಡಾಪಟು... ತಯಾರು ಮಾಡುವ, ರೂಪಿಸುವ ಮತ್ತು ಭವಿಷ್ಯ... ನಿರ್ಧರಿಸುವ ಅಪೂರ್ವ ಪದ್ಧತಿ ಇದೆ. ಅ... ಕ್ರೀಡಾಪಟುಗಳಿಗೆ ಚಿಕ್ಕಂದಿನಿಂದಲೇ ಅಗತ್ಯವಾದ ಆ... ಹಣಕಾಸಿನ ನೆರವು ಮತ್ತು ಉತ್ಕೃಷ್ಟ ತರಬೇತಿ ಸಿಗು... ಆದರೆ ಭಾರತದಲ್ಲಿ ಕ್ರೀಡೆಯನ್ನು ವೃತ್ತಿಯ... ಸ್ವೀಕರಿಸುವುದೆಂದರೆ ಅದು ಆತ್ಮಹತ್ಯೆಗೆ ಸಮಾನ. ... ವ್ಯವಸ್ಥೆಯಲ್ಲಿ ನಲುಗುವ ಕ್ರೀಡಾಪಟು ತನ್ನನ್ನು ತ... ಪೋಷಿಸಿಕೊಂಡು ಸಾಧನೆ ಮಾಡಬೇಕಿದೆ. ಗಮನಿ... ಸ್ವಾತಂತ್ರ್ಯಾನಂತರದ ಭಾರತದಲ್ಲಿ ಕ್ರೀಡಾ ವ್ಯವಸ್ಥೆ ರೂಪಿ... ಒಬ್ಬನೇ ಒಬ್ಬ ಕ್ರೀಡಾಪಟುವನ್ನು ಹೆಸರಿಸಿ ನೋಡೋ... ಮಿಲ್ಖಾ ಸಿಂಗ್, ವಿಶ್ವನಾಥನ್ ಆನಂದ್, ಪಿ.ಟಿ.ಉ... ಮೇರಿ ಕೋಮ್, ಸಾನಿಯಾ ಮಿರ್ಜಾ, ಸೈನಾ ನೆಹ್ವಾ... ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿ... ಮುಂತಾದವರೆಲ್ಲರೂ ವೈಯಕ್ತಿಕ ಸಾಮರ್ಥ್ಯದ ಮೆ... ವ್ಯವಸ್ಥೆಗೆ ಹೊರತಾಗಿ ಸಾಧನೆ ಮಾಡಿದವರೆಂಬು... ನೆನಪಿಡಬೇಕಾಗಿದೆ. ಇದೀಗ ವಿಕಾಸ ಗೌಡರ ಹೆಸರು ... ಕ್ರೀಡಾಪಟುಗಳ ಯಾದಿಯಲ್ಲಿ ಸೇರಿದೆ.

ಶಾಲಾ ಕಾಲೇಜು ಮಟ್ಟದಲ್ಲೇ ಪ್ರಾರಂಭವಾಗ... ಜಾತಿ, ಬಣ ರಾಜಕೀಯದ ಮಧ್ಯೆಯೇ ಪಿ.ಕಶ್ಯಪ್, ವಿ... ಗೌಡರಂತಹ ಪ್ರತಿಭೆಗಳು ಅರಳಿ ನಿಲ್ಲಬೇಕಿದೆ. ಸ... ಪ್ರಾಮಾಣಿಕತೆ ಹಾಗೂ ಪಾರದರ್ಶಕತೆಯನ್ನು ನಿರಾಕರಿ... ನಮ್ಮ ಕ್ರೀಡಾ ವ್ಯವಸ್ಥೆಯ ನಡುವೆಯೇ ಕ್ರೀಡಾಪಟುಗ... ಮಾನ್ಯತೆ ಗಳಿಸಿಕೊಳ್ಳಬೇಕಿದೆ. ಜಾಗತೀಕರಣದ ನಂತ... ಭಾರತ ಒಲಂಪಿಕ್ಸ್‌ನಲ್ಲಿ ಗಮನಾರ್ಹ ಸಾಧನೆ ಮಾಡು... ಎಂಬ ಆಶಯ ಯಾರಿಗೂ ಇಲ್ಲದಿರಬಹುದು. ಆ... ವಿಕಾಸ ಗೌಡರಂತಹ ಯುವಕರು ನಮ್ಮ ನಿರೀಕ್ಷೆಯ... ಹೆಚ್ಚಿಸಿರುವುದು ಸುಳ್ಳಲ್ಲ.

■ ಟಿ.ಅವಿನಾ...

ಮುದ್ದು



ನಾನು ಹೂವೂ ಅಲ್ಲ
ಮೊಗ್ಗೂ ಅಲ್ಲ
ಬಹಳವೆಂದರೆ
ಮೊಗ್ಗಿನ ಮುಗುಳು

ನನಗೇನೂ ಗೊತ್ತಾಗದಿದ್ದರೂ
ಕಂಕುಳಲಿ ಅವಚಿ
ಹಿರಿಹಿರಿ ಹಿಗ್ಗುವ
ಅಪ್ಪನ ಮಗಳು

ಒಂದಲ್ಲ ಒಂದು ದಿನ
ನಾನೂ ಮೊಗ್ಗಾಗಿ
ಬಲು ಚಂದದ ಹೂವಾಗಿ
ಅರಳುತ್ತೇನೆಂಬ
ಕನಸೇನೋ ಅವಳಿಗೆ

ಅಮ್ಮನ ಅಕ್ಕರೆಯ ನೋಟ
ಅಕೆ ಹುಸಿದಂತೆ

ನನಗೆ ಕೊಡುವ ಊಟ
ಇವಿಷ್ಟೇ ನನ್ನ ಪ್ರಪಂಚ

ಜಗದ ಜಿಡ್ಡಿರದ
ನನಗೆ, ಇಲ್ಲ
ಯಾವುದೇ ಜಂಜಾಟ
ನಗುವೇ ನನಗಾಟ

ನಾನು ಹೆಣ್ಣಲ್ಲ
ಹೆಣ್ಣು ಗೊಂಬೆ
ಮಿಳಕಿಸುವ ಕಣ್ಣು
ಮೊಗವೆಲ್ಲ ಮುದ್ದು

ನನ್ನಲ್ಲಿ ಏನೂ ಇಲ್ಲ
ನನ್ನೊಳಗೆ ಏನೊಂದೂ
ಮೊಳಕೆ ಕಟ್ಟಿಲ್ಲ
ಗರಿಯ ಬಿಚ್ಚಿಲ್ಲ

ಉಗುರು ತಗುಲಿದರೂ
ಉರುಳಿಬಿಡುತ್ತೇನೆ
ನೆಲಕೆ
ಕಳಚಿಕೊಂಡು ತೊಟ್ಟು

ಅರಳದ ಹೂವ
ಬೆದೆ ಇರದ ಹೆಣ್ಣ
ಕಾಡು ಪ್ರಾಣಿಯೂ
ಮುಟ್ಟುವುದಿಲ್ಲ

ಮನುಜರಾದ ನೀವು

ಹೂವೂ ಅಲ್ಲದ
ಹೆಣ್ಣೂ ಅಲ್ಲದ
ನನ್ನನ್ನು
ನಿಮ್ಮ

ಗಂಡಸು-ತನದ
ಈಟಿಯಲಿ ಇರಿದರೆ
ಬಿಟ್ಟಕಣ್ಣಲ್ಲಿ ಸಾಕ್ಷೀ ಇಟ್ಟೇ
ಮರಳುತ್ತೇನೆ ಮಣ್ಣಿಗೆ

ತಿರುವಿಕೊಳ್ಳಿ
ನಿಮ್ಮ ಹುರಿಮೀಸೆ
ನೋಡುತ್ತ ನಾನು
ಬಿಟ್ಟ ಕಣ್ಣಲಿ

ನನ್ನ ಚೀತ್ಕಾರಕೆ
ಹೊರಟ ಸದ್ದು
ಮದ್ದಾದರೂ ಆಗಲಿ
ಮಾನವತೆಯ ನಿದ್ದೆಗೆ



■ ಕೆ.ಎಂ. ಗಂಗಾಧರಪ್ಪ ಐಪಿ...


ಗಾಂಧಿ ಮತ್ತು ಕೋಮುವಾದ

ವು ಇಂದು ಅತ್ಯಂತ ಆತಂಕದ ಸ್ಥಿತಿಯಲ್ಲಿದ್ದೇವೆ. ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಯ ಕುರಿತು ಮಾಡಬೇಕಾದ ಚಿಂತನೆಗೆ ಬೇಕಾದ ನ್ನೆಲ್ಲಾ ಕೋಮುವಾದದ ವಿರುದ್ಧ ಹೋರಾಡಲು ಪರಿಸ್ಥಿತಿ ಬಂದೊದಗಿದೆ. ಸಮಾಜದಲ್ಲಿ ಸೌಹಾರ್ದವು ಸಹಜವಾಗಿ ಇರುವಂಥ ಾವಿದ್ದಾಗ ಮಾತ್ರ ಮಾನವ ಅಭಿವೃದ್ಧಿಪಥದಲ್ಲಿ ುರಿಯಲು ಸಾಧ್ಯ; ಇಲ್ಲದಿದ್ದರೆ ಜೀವಂತವಾಗಿ ೊಂದೇ ಅವನ ಗುರಿಯಾಗುತ್ತದೆ. ಕೋಮು ಮನುಷ್ಯನ ಎಲ್ಲಾ ಒಳ್ಳೆಯತನದ ಮೇಲೆ ಕ್ಯಾಕರಿಸಿ ್ತದೆ. ಎಲ್ಲಾ ಸೂಕ್ಷ್ಮ ಭಾವನೆಗಳನ್ನು ಹಾಳು ್ತದೆ. ಮನುಷ್ಯ ಮನುಷ್ಯನನ್ನು ಅರಿಯುವ ದಲ್ಲಿ ಅಡ್ಡಗೋಡೆಯಾಗಿ ನಿಲ್ಲುತ್ತದೆ. ಈ ಲ್ಲಿ ಗಾಂಧೀಜಿಯವರು ಕೋಮುಸೌಹಾರ್ದಕ್ಕಾಗಿ ನುಷ್ಯನ ಸದ್ಭಾವನೆಗಳನ್ನು ರಕ್ಷಿಸುವುದಕ್ಕಾಗಿ ಮಾಡಿದ ಳು ನಮ್ಮ ದೇಶಕ್ಕೆ ದಾರಿದೀಪಗಳಾಗಿವೆ. ದೇಶ ಿ ಮುಂದುವರಿಯಬೇಕೆಂಬುದನ್ನು ಸೂಚಿಸುತ್ತವೆ. ಧೀಜಿಯವರು ಮಾನವೀಯತೆಗೆ ಬದ್ಧವಾಗಿದ್ದಂಥ ಡುಕೋರ' ಸನಾತನವಾದಿಗಳಾಗಿದ್ದರು. ಅವರ ಾವು ಪರಿಶುದ್ಧವಾಗಿದೆ; ಇಡೀ ಲೋಕದ ್ನು ಕಾಪಾಡುವಂಥದ್ದಾಗಿದೆ. ಅಂತೆಯೆ ಯವರು ವ್ಯಾಖ್ಯಾನಿಸುವ ಹಿಂದೂ ಧರ್ಮವು ್ವಕ್ಕೆ ಆದರ್ಶಪ್ರಾಯವಾಗಿದೆ. ಅವರ ಹಿಂದೂ ್ಲಿ ಕ್ರೈಸ್ತರು, ಮುಸ್ಲಿಮರು, ಬೌದ್ಧರು- ಹೀಗೆ ಮಾನವ ಘನತೆಯನ್ನು ಪಡೆಯುತ್ತಾರೆ. ಾದ ಹಿಂದೂಗಳು, ಮುಸ್ಲಿಮರು, ಸಿಖ್ಖರು, ಎಲ್ಲರೂ ಗಾಂಧೀಜಿಯವರ ಕಣ್ಣಲ್ಲಿ ಒಂದೇ . ಹೀಗಾಗಿ ನಿಜವಾದ ಆಚರಣೆಯಲ್ಲಿ ಅವರಿಗೆ ಮಧ್ಯೆ ವ್ಯತ್ಯಾಸವೇ ಕಾಣುವುದಿಲ್ಲ. ಈ ಮೇ ಕೋಮುವಾದವೆಂಬ ರೋಗಕ್ಕೆ ಮದ್ದಾಗಿದೆ. ಹಮ್ಮದ್, ಝುರತುಷ್ಟ್ರ ಮತ್ತು ಮೊಸೆಸರಿಗೆ ಯೆ ಏಸುವಿಗೂ ಹಿಂದೂ ಧರ್ಮದಲ್ಲಿ ಸಾಕಷ್ಟು ವಿವಿಧ ಧರ್ಮಗಳು ನನಗೆ ಒಂದೇ ತೋಟದ ಪುಷ್ಪಗಳು ಅಥವಾ ಅವು ಒಂದೇ ಮಹಾವೃಕ್ಷದ ಳು" ಎಂದು ಗಾಂಧೀಜಿಯವರು ಹೇಳಿದ್ದು ಾದಕ್ಕೊಂದು ಪ್ರಬಲ ಉತ್ತರವಾಗಿದೆ. ಎಲ್ಲ ಸತ್ಯ ಮಾತ್ರವಲ್ಲ ಸಮಾನ ಕೂಡ ಎಂದು ಯವರು ನಂಬಿದ್ದರು. ಎಲ್ಲಾ ಪ್ರವಾದಿಗಳು ಎಂದು ಅವರು ಹೇಳುತ್ತಿದ್ದರು. ಭಾರತದಂಥ ಂಸ್ಕೃತಿಕ ಮತ್ತು ಬಹು ಧಾರ್ಮಿಕ ದೇಶದಲ್ಲಿ ಯವರ ಸಂಯಮ ಮತ್ತು ಮನುಷ್ಯಪ್ರೇಮ ನಸಮುದಾಯಕ್ಕೆ ಉದ್ವಿಗ್ನವಿಲ್ಲದ ವಾತಾವರಣವನ್ನು ್ದುದು.

ಂದೂ ಧರ್ಮ ಪಟ್ಟು ಬಿಡದ ಸತ್ಯಾನ್ವೇಷಣೆ" ್ಲಿ ಅವರಿಗೆ ಅಚಲವಾದ ನಂಬಿಕೆ ಇತ್ತು. ಥವಾದ ಭಗವದ್ಗೀತೆ ಅವರಿಗೆ ಬಾಹ್ಯಪ್ರಪಂಚದ ದ್ದಿಲ್ಲ. ಮನುಷ್ಯನ ಆಂತರಿಕ ಜಗತ್ತು ಮತ್ತು ಕುರುಕ್ಷೇತ್ರಕ್ಕೆ ಸಂಬಂಧಿಸಿದುದಾಗಿತ್ತು. ುರ್ಯೋಧನನ ಮತ್ತು ಅವನ ಪಕ್ಷದವರನ್ನು ನಾನು ಲ್ಲಿರುವ ಅಧಮ ಪ್ರವೃತ್ತಿಗಳೆಂದೂ ಅರ್ಜುನ ವನ ಪಕ್ಷದವರನ್ನು ಉತ್ತಮ ಪ್ರವೃತ್ತಿಗಳೆಂದೂ ುತ್ತೇನೆ. ನಮ್ಮ ಸ್ವಂತ ದೇಹವೇ ಯುದ್ಧರಂಗ ೂ ಪಕ್ಷಗಳಲ್ಲಿ ಶಾಶ್ವತವಾದ ಯುದ್ಧ ನಡೆಯುತ್ತಿದೆ. ಅದನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾನೆ. ್ದಯದಲ್ಲಿ ಸದಾ ಪಿಸುನುಡಿ ನುಡಿಯುತ್ತಿರುವ ಾಮಿ ಕೃಷ್ಣ ಗಡಿಯಾರದಂತೆ ಹೃದಯಕ್ಕೆ ಶುದ್ಧತೆಯ ಡುವುದು ಅವಶ್ಯಕ. ಇಲ್ಲದಿದ್ದರೆ ಅಂತರ್ಯಾಮಿ ತುವುದನ್ನು ನಿಲ್ಲಿಸುತ್ತಾನೆ" ಎಂದು ಗಾಂಧೀಜಿ ಪಿಮಾತು ಹೇಳಿದ್ದಾರೆ.

ನೊಬ್ಬ ಸನಾತನಿ ಹಿಂದೂ" ಎಂದು ಯವರು ಹೇಳಿಕೊಂಡರೂ ತಮ್ಮದೇ ಆದ ಯ ಮೌಲ್ಯಗಳ ಬೆಳಕಿನ ಮೂಲಕವೇ ಹಿಂದೂ ವನ್ನು ಗುರುತಿಸುತ್ತಾರೆ. ವಿಶಾಲ ಕಲ್ಪನೆಗೆ ಲ್ಲದ ಹಿಂದೂ ಧರ್ಮ, ಕೋಮುಭಾವನೆಗಳನ್ನು ಸ ಹಿಂದೂ ಧರ್ಮ, ಜಾತೀಯತೆ ಮತ್ತು ಅಸ್ಪೃಶ್ಯತೆ ವ ಹಿಂದೂ ಧರ್ಮ ಮತ್ತು 'ಗರ್ವದಿಂದ ಹೇಳಿರಿ ಿಂದೂಗಳು' ಎಂದು ಹೇಳುವವರ ಹಿಂದೂ ಗಾಂಧೀಜಿಯವರ ಹಿಂದೂ ಧರ್ಮವಾಗಿರಲಿಲ್ಲ. ಸಂಶಿಕತೆಯ ಪ್ರಭಾವದಲ್ಲಿ ನನಗೆ ನಂಬಿಕೆ ದಿಂದ ಮತ್ತು ಹಿಂದೂ ಕುಟುಂಬವೊಂದರಲ್ಲಿ ುವುದರಿಂದ ನಾನು ಒಬ್ಬ ಹಿಂದೂ ಆಗಿ ಉಳಿದಿ ್ಸ ನೈತಿಕ ಪ್ರಜ್ಞೆಗೆ ಅಥವಾ ಆಧ್ಯಾತ್ಮಿಕ ಬೆಳವಣಿಗೆಗೆ ಸಂಗತವೆಂದು ಕಂಡುಬಂದಲ್ಲಿ ನಾನು ಅದನ್ನು ಧರ್ಮವನ್ನು' ತ್ಯಜಿಸುತ್ತೇನೆ" ಎಂದು ಿಸಿನಸು ಪ್ರಕಟಿಸಿದ್ದಾರೆ.

ಸೇವು ಮತ್ತು ಅಹಿಂಸೆಗಳು ಅವರು ಪ್ರತಿಪಾದಿ ಹಿಂದೂ ಧರ್ಮದ ಮೂಲಾಧಾರಗಳಾಗಿವೆ. ಆ ್ತ ಅವರು ಎಲ್ಲ ಧರ್ಮಗಳನ್ನು ನೋಡುತ್ತಿದ್ದರು



ಮತ್ತು ಗೌರವಿಸುತ್ತಿದ್ದರು. "ಅಹಿಂಸೆ ಎಲ್ಲ ಧರ್ಮಗಳಿಗೂ ಸಮಾನವಾಗಿದೆ. ಹಿಂದೂ ಧರ್ಮವು ಕೇವಲ ಮಾನವ ಜೀವನದ ಏಕತೆಯಲ್ಲಿ ಮಾತ್ರ ನಂಬಿಕೆ ಇಡದೆ, ಜೀವಂತವಾಗಿ ಇರುವ ಎಲ್ಲದರ ಏಕತೆಯಲ್ಲಿ ನಂಬಿಕೆ ಇಡುತ್ತದೆ" ಎಂದು ಗಾಂಧೀಜಿ ಹೇಳಿದ್ದಾರೆ. ಈ ಹೇಳಿಕೆಯಲ್ಲಿ ಬದುಕಿನ ಒಳ್ಳೆಯದೆಲ್ಲವನ್ನು ಗೌರವಿಸುವ ಮನೋಭಾವವಿದೆ. ಇಂಥ ಮನಸ್ಥಿತಿಯಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ ಸಿಖ್ ಎಂಬ ಭೇದಭಾವ ಎಂದಿಗೂ ಬಾರದು. ಕೋಮುಭಾವನೆ ಎಂದೂ ಕೆರಳದು. ಇಂಥ ಮನಸ್ಥಿತಿಯಲ್ಲಿ ಮಾತ್ರ ಇಡೀ ಮಾನವಕುಲವನ್ನು ಮತ್ತು ಎಲ್ಲಾ ಜೀವರಾಶಿಗಳನ್ನು ಅಂತಃಕರಣದಿಂದ ನೋಡಲು ಸಾಧ್ಯ. ಎಲ್ಲ ಒಳ್ಳೆಯದರ ಬಗ್ಗೆ ಗೌರವ ಮೂಡಲು ಸಾಧ್ಯ.

"ವೇದಗಳು ಮಾತ್ರವೇ ದೈವೀಕವಾದವು ಎಂಬುದನ್ನು ನಾನು ನಂಬುವುದಿಲ್ಲ. ಬೈಬಲ್, ಕುರಾನ್ ಮತ್ತು ಜಿಂದಾ ಅವೆಸ್ತಾ ಸಹ ವೇದಗಳಷ್ಟೇ ದೈವೀಕವಾಗಿ ಪ್ರೇರಿತವಾದುವು ಎಂಬುದು ನನ್ನ ನಂಬಿಕೆ" ಎಂದು ಗಾಂಧೀಜಿಯವರು ಹೇಳುವಾಗ ಕೋಮುವಾದ ಬೇರುಸಹಿತ ಕಿತ್ತುಹೋಗುತ್ತದೆ.

ಚರಕಧರ್ಮ

ಕಾಯಕ ಮತ್ತು ಧರ್ಮವನ್ನು ಅಭೇದ್ಯವಾಗಿ ನೋಡುವ ಗಾಂಧೀಜಿಯವರ ಕ್ರಮವು 12ನೇ ಶತಮಾನದ ಶರಣರನ್ನು ನೆನಪಿಗೆ ತರುತ್ತದೆ. ಚರಕವು ಅವರಿಗೆ ಉತ್ಪಾದನೆಯ ಒಂದು ಮಹತ್ವದ ಸಾಧನವಾಗಿತ್ತು. ಬ್ರಿಟಿಷರ ಜವಳಿ ಗಿರಣಿಗಳನ್ನು ಬಂದ್ ಮಾಡುವ ಶಕ್ತಿ ಅದಕ್ಕಿತ್ತು. ಆ ಮೂಲಕ ಭಾರತೀಯರ ಶೋಷಣೆ ಕಡಿಮೆಗೊಳಿಸುವಲ್ಲಿ ಮತ್ತು ಸ್ವಾತಂತ್ರ್ಯದ ಪ್ರಜ್ಞೆಯನ್ನು ಬೆಳೆಸುವಲ್ಲಿ ಚರಕವು ಮಹತ್ತರ ಪಾತ್ರವನ್ನು ವಹಿಸಿದೆ. ಆದರೆ ಗಾಂಧೀಜಿಯವರಿಗೆ ಚರಕವೆಂಬುದು ಧರ್ಮವಾಗಿತ್ತು. ಎಲ್ಲ ಧರ್ಮಗಳನ್ನು ಒಂದುಗೂಡಿಸುವ ಸಾಧನವಾಗಿತ್ತು; ಕಾಯಕದ ಪಾವಿತ್ರ್ಯದ ಸಂಕೇತವಾಗಿತ್ತು; ಸಾಮ್ರಾಜ್ಯಶಾಹಿಯನ್ನು ವಿರೋಧಿಸುವ ಅಸ್ತ್ರವಾಗಿತ್ತು; ಸತ್ಯಾಗ್ರಹವಾಗಿತ್ತು; ಸ್ವಾತಂತ್ರ್ಯದ ಪಥವಾಗಿತ್ತು; ಆತ್ಮಗೌರವ ಮತ್ತು ರಾಷ್ಟ್ರಗೌರವದ ಸಂಕೇತವಾಗಿತ್ತು; ಮನುಷ್ಯರನ್ನು ನಿಜಮನುಷ್ಯರನ್ನಾಗಿ ಮಾಡುವ ಮಂತ್ರದಂಡವಾಗಿತ್ತು. ಅಂತೆಯೇ ಗಾಂಧೀಜಿಯವರು ಹೀಗೆ ಹೇಳಿದರು:

"ನಾನು ಎಲ್ಲೆಲ್ಲಿಯೂ ಚರಕವನ್ನು ನೋಡಲು ಇಚ್ಛಿಸುತ್ತೇನೆ; ಏಕೆಂದರೆ ನಾನು ಎಲ್ಲೆಲ್ಲಿಯೂ ದಿವಾಳಿತನವನ್ನು ನೋಡುತ್ತಿದ್ದೇನೆ. ಅಸ್ಥಿಪಂಜರಗಳಂತಿರುವ ಭಾರತದ ಜನರಿಗೆ ಉಣ್ಣಲು ಮತ್ತು ಹೊದೆಯಲು ದೊರೆಯಬೇಕು. ಅಲ್ಲಿಯವರೆಗೆ ಅವರಿಗೆ ಧರ್ಮದ ಅರ್ಥವಿಲ್ಲ. ಇಂದು ಅವರು ಪಶುಗಳಂತೆ ಬಾಳುತ್ತಿರುವುದಕ್ಕೆ ನಾವು ಜವಾಬ್ದಾರರಾಗಿದ್ದೇವೆ. ಆದ್ದರಿಂದ ಚರಕ ನಮಗೊಂದು ಪ್ರಾಯಶ್ಚಿತ್ತ, ಅಸಹಾಯಕರ ಸೇವೆಯೇ ಧರ್ಮ. ದೇವರು ಆ ಸಹಾಯಕರ ಮತ್ತು ದುಃಖಾರ್ತರ ರೂಪದಲ್ಲಿ ನಮಗೆ ಕಾಣುತ್ತಾನೆ. ಆದರೆ ನಾವು ಹಣೆಯ ಮೇಲೆ ಲಾಂಛನಗಳನ್ನು ಧರಿಸಿದ್ದರೂ ಅವನನ್ನು ಎಂದರೆ ದೇವರನ್ನು ಗಮನಿಸುವುದಿಲ್ಲ. ದೇವರು ವೇದಗಳಲ್ಲಿ ಇದ್ದಾನೆ ಹಾಗೂ ಇಲ್ಲ. ವೇದಗಳ ಭಾವವನ್ನು ಗ್ರಹಿಸುವವನು ಅವುಗಳಲ್ಲಿ ದೇವರನ್ನು ಕಾಣುತ್ತಾನೆ. ವೇದಗಳ ಅಕ್ಷರಕ್ಕೆ ಜೋತುಬೀಳುವವನು ಒಬ್ಬ ವೇದೀಯ. ಒಬ್ಬ ಅಕ್ಷರಸಿಷ್ಯ ವೇದಗಳ ಜ್ಞಾನ ನಮ್ಮ ಬ್ರಾಹ್ಮಣರನ್ನು ಆಧ್ಯಾತ್ಮಿಕ ಗುರುಗಳನ್ನಾಗಿ ಮಾಡಲಾರದು. ಹಾಗೆ ಮಾಡಿದಲ್ಲಿ ಮ್ಯಾಕ್ಸ್ ಮುಲ್ಲರ್ ಒಬ್ಬ ಬ್ರಾಹ್ಮಣನಾಗುತ್ತಿದ್ದ. ಇಂದಿನ ಧರ್ಮವನ್ನು ಅರ್ಥ ಮಾಡಿಕೊಂಡಿರುವ ಬ್ರಾಹ್ಮಣನು ಖಂಡಿತವಾಗಿಯೂ ವೇದಾಧ್ಯಯನಕ್ಕೆ ಎರಡನೇ ಸ್ಥಾನ ಕೊಡುತ್ತಾನೆ. ಚರಕದ ಧರ್ಮವನ್ನು ಪ್ರಸಾರ ಮಾಡುತ್ತಾನೆ ಮತ್ತು ಉಪವಾಸದಿಂದಿರುವ ತನ್ನ ಲಕ್ಷಾಂತರ ದೇಶಬಾಂಧವರ ಹಸಿವನ್ನು ಇಂಗಿಸುತ್ತಾನೆ.

ನೂಲುವುದನ್ನು ನಾನು ಖಂಡಿತವಾಗಿಯೂ ಧಾರ್ಮಿಕ ಪಂಥಗಳ ಆಚರಣೆಗಿಂತಲೂ ಉತ್ತಮವಾದುದೆಂದು ಪರಿಗಣಿಸಿದ್ದೇನೆ. ಆದರೆ ಇದರ ಅರ್ಥ ಈ ಆಚರಣೆಯನ್ನು ಬಿಟ್ಟುಬಿಡಬೇಕು ಎಂದಲ್ಲ. ಎಲ್ಲ ಧರ್ಮಗಳ ಅನುಯಾಯಿಗಳು ಅನುಸರಿಸಬೇಕಾಗಿರುವ ಧರ್ಮವು ಆ ಧರ್ಮಗಳನ್ನು ಮೀರುತ್ತದೆ ಎಂದಷ್ಟೇ ನನ್ನ ಅರ್ಥ. ಆದ್ದರಿಂದ ಸೇವಾಭಾವದಿಂದ ಚರಕ ತಿರುಗಿಸಿದರೆ ಬ್ರಾಹ್ಮಣ ಉತ್ತಮ ಬ್ರಾಹ್ಮಣನಾಗುತ್ತಾನೆ. ಮುಸಲ್ಮಾನ ಉತ್ತಮ ಮುಸಲ್ಮಾನನಾಗುತ್ತಾನೆ. ವೈಷ್ಣವ ಉತ್ತಮ ವೈಷ್ಣವನಾಗುತ್ತಾನೆ ಎಂದು ನಾನು ಹೇಳುತ್ತೇನೆ.

ನಾನು ಹಾಸಿಗೆಯಲ್ಲಿ ಮಲಗಿರುವಾಗ ಚರಕ ತಿರುಗಿಸುವುದು ನನಗೆ ಸಾಧ್ಯವಾದಲ್ಲಿ ಮತ್ತು ಅದು ದೇವರ ಮೇಲೆ ನನ್ನ ಮನಸ್ಸನ್ನು ಕೇಂದ್ರೀಕರಿಸಲು ಸಹಾಯ ಮಾಡುತ್ತದೆ ಎಂದು ನನಗೆ ಅನಿಸಿದ್ದಲ್ಲಿ, ನಾನು ಖಂಡಿತವಾಗಿಯೂ ಜಪಸರವನ್ನು ಬದಿಗಿಟ್ಟು ಚರಕ ತಿರುಗಿಸುತ್ತೇನೆ. ಚರಕ ತಿರುಗಿಸಲು ನನಗೆ ಶಕ್ತಿಯಿದ್ದು ಮಣಿಗಳನ್ನು ಎಣಿಸುವುದು ಅಥವಾ ಚರಕ ತಿರುಗಿಸುವುದು ಇವುಗಳ ನಡುವೆ ಆಯ್ಕೆ ಮಾಡಬೇಕಾದಲ್ಲಿ ನಾನು ಬಡತನ ಹಾಗೂ ಉಪವಾಸ ದೇಶವನ್ನು ಗುಪ್ತವಾಗಿ ಬೆನ್ನಟ್ಟಿರುವುದನ್ನು ಕಾಣುತ್ತಿರುವವರೆಗೆ ಖಂಡಿತವಾಗಿಯೂ ಚರಕದ ಪರವಾಗಿ ತೀರ್ಮಾನಿಸುತ್ತೇನೆ ಮತ್ತು ಅದನ್ನೇ ನಾನು ನನ್ನ ಜಪಸರವನ್ನಾಗಿ ಮಾಡಿಕೊಳ್ಳುತ್ತೇನೆ. ರಾಮನಾಮದ ಜಪ ಕೂಡ ಒಂದು ಅಡ್ಡಿಯಾಗುವಂಥ ಕಾಲವನ್ನು ನಾನು ಎದುರು ನೋಡುತ್ತೇನೆ. ರಾಮನು ಮಾತಿಗೂ ಮೀರಿದವನೆಂದು ನಾನು ಅರಿತಾಗ ಆ ಹೆಸರನ್ನು ಜಪ ಮಾಡುವ ಅಗತ್ಯ ನನಗೆ ಇರುವುದಿಲ್ಲ. ಚರಕ, ಜಪಸರ ಮತ್ತು ರಾಮನಾಮ ನನಗೆ ಎಲ್ಲವೂ ಒಂದೇ ಗುರಿಗೆ ಸಾಧಕವಾಗಿದೆ. ಅವು ನನಗೆ ಸೇವಾಧರ್ಮವನ್ನು ಬೋಧಿಸುತ್ತವೆ. ಸೇವಾಧರ್ಮವನ್ನು ಆಚರಿಸದೆ ನಾನು ಅಹಿಂಸೆಯನ್ನು ಪಾಲಿಸಲಾರೆ. ಅಹಿಂಸಾ ಧರ್ಮವನ್ನು ಆಚರಿಸದೆ ನಾನು ಸತ್ಯವನ್ನು ಕಾಣಲಾರೆ. ಸತ್ಯಕ್ಕಿಂತ ಬೇರೆ ಧರ್ಮವಿಲ್ಲ. ಸತ್ಯವೇ ರಾಮ, ನಾರಾಯಣ, ಈಶ್ವರ, ಖುದಾ, ಅಲ್ಲಾ, ಗಾಡ್."

ಗಾಂಧೀಜಿಯವರ ಇಂಥ ಆಲೋಚನಾಕ್ರಮಗಳಿಂದಾಗಿಯೇ ಹಿಂದೂ ಧರ್ಮಕ್ಕೆ ಒಂದು ಹೊಸರೂಪ ಬಂದಿತು. ಆದರೆ ದುರ್ದೈವದ ಸಂಗತಿ ಎಂದರೆ ವಿಶ್ವಮಾನ್ಯವಾದ ಗಾಂಧೀಜಿಯವರ ಮನೋಲೋಕದ ಈ ಹಿಂದೂ ಧರ್ಮದ ಬಗ್ಗೆ ಭಾರತೀಯ ಅಕ್ಷರಸ್ಥರು ತಲೆ ಕೆಡಿಸಿಕೊಳ್ಳಲಿಲ್ಲ. ಹೀಗಾಗಿ ಗಾಂಧೀಜಿಯವರನ್ನು ಕೊಲೆ ಮಾಡಿದ ನಾಥೂರಾಂ ಗೋಡ್ಸೆಯಂಥವರ ಪರಿಕಲ್ಪನೆಯ ಹಿಂದೂ ಧರ್ಮವೇ ಇಂದಿನ ಸಂದರ್ಭದಲ್ಲಿ ಪ್ರಾಧಾನ್ಯ ಪಡೆಯುತ್ತಿದೆ.

"ಹಿಂದೂ ಧರ್ಮದ ಸ್ವಾರಸ್ಯ ಅದರ ವ್ಯಾಪಕವಾದ ಸರ್ವಗ್ರಾಹಿತ್ವದಲ್ಲಿ ಅಡಗಿದೆ. ಪ್ರತಿಯೊಬ್ಬನು ತನ್ನ ಸ್ವಂತ ಮತ ಅಥವಾ ಧರ್ಮಕ್ಕೆ ಅನುಸಾರವಾಗಿ ದೇವರನ್ನು ಪೂಜಿಸುವಂತೆ ಹಿಂದೂ ಧರ್ಮ ಹೇಳುತ್ತದೆ. ಆದ್ದರಿಂದ ಅದು ಎಲ್ಲಾ ಧರ್ಮಗಳ ಜೊತೆ ಶಾಂತಿಸ್ನೇಹದಿಂದ ಬಾಳುತ್ತದೆ. ಅಧಿಕೃತ ಸಿದ್ಧಾಂತದಿಂದ ಮುಕ್ತವಾಗಿರುವ ಅದು ನನಗೆ ಹಿಡಿಸುತ್ತದೆ" ಎಂದು ಗಾಂಧೀಜಿಯವರು ಹೇಳಿದ್ದು ಸರ್ವ ಕಾಲಕ್ಕೂ ಪ್ರಸ್ತುತವಾಗಿದೆ.

"ಧರ್ಮದ ಹೆಸರಿನಲ್ಲಿ ನಾವು ಹಿಂದೂಗಳು ಬಾಹ್ಯಾಚರಣೆಗಳನ್ನು ಅಂಧಶ್ರದ್ಧೆಯ ಒಂದು ವಿಷಯವನ್ನಾಗಿ ಮಾಡಿದ್ದೇವೆ ಮತ್ತು ಧರ್ಮಗಳನ್ನು ಕೇವಲ ತಿನ್ನುವ, ಕುಡಿಯುವ ವಿಷಯವನ್ನಾಗಿ ಅದನ್ನು ಕೆಳದರ್ಜೆಗೆ ಇಳಿಸಿದ್ದೇವೆ" ಎಂದು ಗಾಂಧೀಜಿಯವರು ವಿಷಾದಿಸಿದ್ದಾರೆ. ಈ ವಿಷಾದ ನಮಗೆ ಅರ್ಥವಾಗದ್ದರಿಂದ ನಮ್ಮ ಸಮಾಜದಲ್ಲಿ ಗ್ರಾಹಂ ಸ್ಟೇನ್ಸ್‌ರಂಥ ಮಾನವತಾವಾದಿಗಳನ್ನು ಜೀವಂತ ಸುಡುವ ದಾರಾಸಿಂಗ್‌ಗಳು ಹುಟ್ಟುತ್ತಿದ್ದಾರೆ.


"ನಿಜವಾದ ಶುದ್ಧ ಚಳವಳಿಯು ಪ್ರತಿಯೊಬ್ಬನು ತನ್ನ ಸ್ವಂತ ಧರ್ಮದಲ್ಲಿ ಪರಿಪೂರ್ಣತೆ ತಲುಪಲು ಮಾಡುವ ಪ್ರಯತ್ನವನ್ನು ಒಳಗೊಂಡಿರಬೇಕು. ಅಂಥ ಯೋಜನೆಯಲ್ಲಿ ಚಾರಿತ್ರ್ಯವು ಏಕಮಾತ್ರ ಪರೀಕ್ಷಾ ಸಾಧನವಾಗುತ್ತದೆ" ಎಂದು ಗಾಂಧೀಜಿಯವರು ಹೇಳಿದ್ದು ದಾರಾಸಿಂಗ್ ಅಂಥವರನ್ನು ಸೃಷ್ಟಿಸಿದವರಿಗೆ ಅರ್ಥವಾಗುವುದೆ?

"ಹಿಂದೂ ಧರ್ಮ ಮತ್ತು ಇತರ ಎಲ್ಲ ಧರ್ಮಗಳನ್ನೂ ತಕ್ಕಡಿಯಲ್ಲಿ ತೂಗಲಾಗುತ್ತಿದೆ. ಶಾಶ್ವತ ಸತ್ಯ ಒಂದೇ. ದೇವರು ಒಬ್ಬನೇ. ನಮ್ಮಲ್ಲಿ ಪ್ರತಿಯೊಬ್ಬರೂ ಪರಸ್ಪರ ಘರ್ಷಣೆಯಲ್ಲಿರುವ ಮತಗಳು ಮತ್ತು ಆಚಾರಗಳಿಂದ ದೂರ ಸರಿದು, ಸತ್ಯದ ನೇರ ಮಾರ್ಗ ಅನುಸರಿಸೋಣ. ಆಗ ಮಾತ್ರವೇ ನಾವು ನಿಜವಾದ ಹಿಂದೂಗಳು ಆಗುತ್ತೇವೆ. ತಮ್ಮನ್ನು ಸನಾತನಿಗಳೆಂದು ಕರೆದುಕೊಳ್ಳುತ್ತ ಅನೇಕ ಜನ ಭೂಮಿಯ ಮೇಲೆ ಓಡಾಡುತ್ತಿದ್ದಾರೆ. ಅವರಲ್ಲಿ ಎಷ್ಟು ಜನರನ್ನು ದೇವರು ಆಯ್ದುಕೊಳ್ಳುತ್ತಾನೆ ಎನ್ನುವುದನ್ನು ಯಾರು ಬಲ್ಲರು? ದೇವರ ಅನುಗ್ರಹವು ಅವನ ಸಂಕಲ್ಪವನ್ನು ನೆರವೇರಿಸಿ, ಅವನ ಸೇವೆ ಮಾಡುವವರಿಗೆ ದೊರೆಯುತ್ತದೆ. ಸುಮ್ಮನೆ ರಾಮ ರಾಮ ಎಂದು ವಟಗುಟ್ಟುವವರಿಗಲ್ಲ" ಎಂದು ಗಾಂಧೀಜಿಯವರು ಹೇಳಿದ್ದು ಬಾಬರಿ ಮಸೀದಿಯನ್ನು ಕೆಡವಿದವರಿಗೆ ಅರ್ಥವಾಗುವುದೆ?


"ಹಿಂದೂ ಧರ್ಮದ ಅತ್ಯಂತ ಪರಿಶುದ್ಧ ರೂಪದಲ್ಲಿ ಒಬ್ಬ ಬ್ರಾಹ್ಮಣ, ಒಂದು ಇರುವೆ, ಒಂದು ಆನೆ ಮತ್ತು ಒಬ್ಬ ಶ್ವಪಚ ಸಮಾನ ಸ್ಥಾನ ಹೊಂದಿರುತ್ತಾರೆ... ಹಿಂದೂ ಧರ್ಮವು ಇಡೀ ಮಾನವಕುಲಕ್ಕೆ ಮಾತ್ರ ಸೀಮಿತವಾದುದಲ್ಲ; ಜೀವಂತವಾಗಿರುವ ಎಲ್ಲದರ ಭ್ರಾತೃತ್ವವನ್ನು ಅದು ಒತ್ತಿ ಹೇಳುತ್ತದೆ. ಮನುಷ್ಯ ಮನುಷ್ಯನ ನಡುವೆ ನಾವು ನಿಜವಾದ, ಜೀವಂತವಾದ ಸಮಾನತೆಯನ್ನು ಪುನಃಸ್ಥಾಪಿಸಿದ ಕ್ಷಣವೇ ಮಾನವನ ಮತ್ತು ಇಡೀ ಸೃಷ್ಟಿಯ ನಡುವೆ ಸಮಾನತೆಯನ್ನು ಸ್ಥಾಪಿಸಲು ನಾವು ಶಕ್ತರಾಗುತ್ತೇವೆ. ಆ ದಿನ ಬಂದಾಗ ನಾವು ಭೂಮಿಯ ಮೇಲೆ ಶಾಂತಿಯನ್ನು ಮತ್ತು ಮನುಷ್ಯರ ಬಗ್ಗೆ ಸದ್ಭಾವನೆಯನ್ನು ಹೊಂದುತ್ತೇವೆ" ಎಂದು ಗಾಂಧೀಜಿಯವರು ಹೇಳಿದ್ದನ್ನು ನಾವು ಮನನ ಮಾಡಬೇಕಿದೆ.

"ಪ್ರಭುವಾದ ದೇವರು ಈ ವಿಶ್ವದಲ್ಲಿರುವ ಎಲ್ಲ ಕಡೆ ವ್ಯಾಪಿಸಿದ್ದಾನೆ. ಆದ್ದರಿಂದ ತ್ಯಾಗಿಗಳಾಗಿ ಮತ್ತು ಎಲ್ಲವನ್ನೂ ಅವನಿಗೆ ಸಮರ್ಪಿಸಿ. ಅನಂತರ ನಿಮ್ಮ ಪಾಲಿಗೆ ಬರಬಹುದಾದುದನ್ನು ಪಡೆಯಿರಿ. ಯಾರದೇ ಆಸ್ತಿಗೆ ಆಸೆ ಪಡಬೇಡಿ. ಈಶೋಪನಿಷತ್ತಿನ ಈ ಒಂದು ಮಂತ್ರವನ್ನು ನೆನಪಿಡಿ. ಇತರ ಧರ್ಮಗ್ರಂಥಗಳ ವಿಷಯವನ್ನು ಪೂರ್ತಿ ಮರೆತುಬಿಡಿ. ಧರ್ಮಗ್ರಂಥಗಳ ಸಾಗರದಲ್ಲಿ ನೀವು ಮುಳುಗಿ ಉಸಿರುಗಟ್ಟಬಹುದು. ವಿನಯವಂತರಾಗಿ ವಿವೇಕಿಗಳಾಗಿದ್ದಲ್ಲಿ ಅವು ಪಂಡಿತರಿಗೆ ಒಳ್ಳೆಯವೇ. ಆದರೆ ಸಾಮಾನ್ಯ ಮನುಷ್ಯನಿಗೆ ಸಾಗರವನ್ನು ದಾಟಲು ಈ ಮಂತ್ರವನ್ನು ಬಿಟ್ಟು ಬೇರಾವುದರ ಅಗತ್ಯವಿಲ್ಲ" ಎಂದು ಗಾಂಧೀಜಿಯವರು ತಮ್ಮ ಪರಿಕಲ್ಪನೆಯ ಹಿಂದೂ ಧರ್ಮವನ್ನು ಮೇಲಿನ ಈಶೋಪನಿಷತ್ತಿನ ಒಂದು ಮಂತ್ರದಲ್ಲಿ ಹಿಡಿದಿಟ್ಟರು. ಆ ಮೂಲಕ ತಮ್ಮ ಕಾಲದ ಹಿಂದೂ ಧರ್ಮದ ಆಚರಣೆಯನ್ನು ಪರಿಶೀಲಿಸಿದರು. "ಇಂದು ನಾವು ನೋಡುವುದು ಶುದ್ಧವಾದ ಹಿಂದೂ ಧರ್ಮವನ್ನಲ್ಲ, ಅದರ ವಿಕಟಾನುಕರಣೆಯನ್ನು ಮಾತ್ರ" ಎಂದು ನಿಟ್ಟುಸಿರು ಬಿಟ್ಟರು.

ಗಾಂಧೀಜಿಯವರ ಈ ನಿಟ್ಟುಸಿರಿನಲ್ಲಿ ಅಡಗಿರುವ ಹಿಂದೂ ಧರ್ಮ ಪ್ರತಿ ಮನುಷ್ಯನೊಳಗಿನ ಧರ್ಮವಾಗಲಿ. ಆ ಮೂಲಕ ಎಲ್ಲ ಧರ್ಮಗಳು ಒಂದೇ ಎಂಬುದು ಜನಸಮುದಾಯಕ್ಕೆ ಅರಿವಾಗಲಿ. ಕೋಮುವಾದ ಅಳಿಯಲಿ. ಮಾನವೀಯತೆ ಉಳಿಯಲಿ.



■ ರಂಜಾನ್ ದರ್ಗಾ



ಹೆಚ್. ಇಬ್ರಾಹಿಂ ಸಾಹೇಬರು ಇನ್ನು ನೆನಪಷ್ಟೆ...



ಶಿವಮೊಗ್ಗದ ಭಾಗಕ್ಕೆ ಕರ್ಣನಂತಿದ್ದ ಹೆಚ್. ಇಬ್ರಾಹಿಂ ಸಾಹೇಬರು ತಮ್ಮ ಹುಟ್ಟೂರಾದ ಬಳ್ಳಾರಿ ಸಮೀಪದ ಹಿರೇಹಾಳದಲ್ಲಿ ಮೊನ್ನೆ ಆಗಸ್ಟ್ ಒಂದರಂದು ತೀರಿಕೊಂಡರು. ಅಲ್ಲಿಗೆ ಆ ರೀತಿ ಇದ್ದವರೇ ಒಬ್ಬರು ಹೊರಟುಹೋದಂತಾಗಿದೆ. ಇಬ್ರಾಹಿಂ ಸಾಹೇಬರ ದೊಡ್ಡತನದ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ. ಕನ್ನಡ ಸಾಹಿತ್ಯ ಲೋಕದ ಪ್ರತಿಭಾವಂತ ಸಾಹಿತಿಗಳೆಲ್ಲಾ ಅವರ ಗುಣಗಳಿಗೆ ತಲೆ ಬಾಗುತ್ತಿದ್ದರು.

ಒಂದು ಉದಾಹರಣೆ ಜ್ಞಾಪಿಸುವುದಾದರೆ, ಅವರೊಮ್ಮೆ ಬೆಂಗಳೂರಿಗೆ ಬಂದು ಪಿ. ಲಂಕೇಶರನ್ನು ನೋಡುವ ಸಲುವಾಗಿ ಪತ್ರಿಕೆ ಆಫೀಸಿಗೆ ಹೋಗಿದ್ದಾರೆ. ಬಾಗಿಲ ಹೊರಗಿದ್ದ ಗಿರಿ, ಸಾಹೇಬರನ್ನ ಒಳಗೆ ಬಿಟ್ಟಿಲ್ಲ, ಬಹುಶಃ ಮೇಷ್ಟ್ರು ಬರೆಯುತ್ತಿರಬಹುದೆಂದು ಇಬ್ರಾಹಿಂ ಹೊರಟು ಬಂದಿದ್ದಾರೆ. ಆದರೆ ಆ ದಿನ ಇಬ್ರಾಹಿಂ ಸಾಹೇಬರು ಬಂದುಹೋದ ಸುದ್ದಿ ಲಂಕೇಶರಿಗೆ ಗೊತ್ತಾದ ಕೂಡಲೇ ತುಂಬಾ ಚಡಪಡಿಕೆಯಿಂದ ಒದ್ದಾಡತೊಡಗಿದರು. ಈಗಿರುವ ಪರಿಹಾರವೆಂದರೆ ಶಿವಮೊಗ್ಗಕ್ಕೆ ಹೋಗಿ ಅವರನ್ನ ಮಾತನಾಡಿಸಿಬರುವುದೆಂದು ತೀರ್ಮಾನ ತೆಗೆದುಕೊಂಡ ಕೂಡಲೇ ಲಂಕೇಶ್ ನಿರಾಳವಾದರು. ಅದರಂತೆ ಶಿವಮೊಗ್ಗಕ್ಕೆ ಬಂದು ದಿವಾಕರ ಹೆಗಡೆ ಮತ್ತು ನನ್ನನ್ನು ಕರೆದುಕೊಂಡು ಇಬ್ರಾಹಿಂ ಸಾಹೇಬರ ಮನೆಗೆ ಹೋದರು. ಅವರಿಬ್ಬರ ನಡುವೆ ಆ ತರದ ಸಂಬಂಧವಿರುವುದು ನಮಗಂತೂ ಗೊತ್ತಿರಲಿಲ್ಲ.

ಕನ್ನಡದಲ್ಲಿ ಏಕಕಾಲಕ್ಕೆ ಪ್ರತಿಭಾವಂತ ಸಾಹಿತಿಗಳೆಲ್ಲಾ ಒಂದು ರೀತಿ ಒಬ್ಬರನ್ನೊಬ್ಬರು ಮೀರಿಸುವ ಹಟದಲ್ಲಿ ನಾಟಕ ಬರೆಯುತ್ತಿದ್ದ ಆ ಕಾಲದಲ್ಲಿ, ಬೆಂಗಳೂರಲ್ಲಿ ಗಿರೀಶ್ ಕಾರ್ನಾಡ್, ಕಂಬಾರ, ಲಂಕೇಶ್‌ರ ನಾಟಕೋತ್ಸವ ಏರ್ಪಟ್ಟಿತ್ತು. ಬಹು ಖರ್ಚಿನ ಆ ನಾಟಕಗಳ ಪ್ರದರ್ಶನದ ಹಿಂದೆ ಇಬ್ರಾಹಿಂ ಸಾಹೇಬರ ಕೊಡುಗೆಯಿತ್ತು, ಅದಕ್ಕೆ ಕಾರಣಕರ್ತ ಇವರೆಲ್ಲರಿಗೂ ಸಂಪರ್ಕ ಸೇತುವೆಯಾಗಿದ್ದ ರಾಮಸ್ವಾಮಿಯವರು.

ಈ ರಾಮಸ್ವಾಮಿಯವರ ಒತ್ತಾಸೆಯಿಂದಲೇ ಲಂಕೇಶ್ ತಮ್ಮ ಮೊದಲ ಸಿನಿಮಾ ತೆಗೆಯಲು ತಯಾರಾಗಿದ್ದರು. ಅದಕ್ಕೆ ಹಣ ಒದಗಿಸಲು ಇಬ್ರಾಹಿಂ ಸಾಹೇಬರೂ ತಯಾರಾಗಿದ್ದರು. ಆದರೆ, ಬೆಂಕಿಯುಂಡೆಯಂತಿದ್ದ ಲಂಕೇಶರಿಗೆ ಇಬ್ರಾಹಿಂ ಸಾಹೇಬರ ಲಿಕ್ಕರ್ ವ್ಯವಹಾರ ಸಿನಿಮಾ ತೆಗೆಯುವುದನ್ನೆ ಕೈಬಿಡುವಂತೆ ಮಾಡಿತ್ತು.

ಇಬ್ರಾಹಿಂ ಸಾಹೇಬರು ಲಿಕ್ಕರ್ ವ್ಯವಹಾರ ನಡೆಸುತ್ತಿದ್ದರೂ ಇದೊಂದು ಅವರು ತುಂಬಾ ಕೀಳರಿಮೆ ಅನುಭವಿಸುತ್ತಿದ್ದ ವ್ಯವಹಾರವಾಗಿತ್ತು, ಅದಕ್ಕೆ ಪರಿಹಾರವೆಂದರೆ ಅದರ ಆದಾಯವನ್ನೆಲ್ಲಾ ದಾನ ಮಾಡುವುದಾಗಿತ್ತು, ಅವರ ದಾನ ಎಷ್ಟರಮಟ್ಟಿಗಿತ್ತೆಂದರೆ, ದಿನಬೆಳಗಾದರೆ ಅವರ ಮನೆ ಎದುರು ಯಾಚಕರ ದಂಡೇ ನೆರೆಯುತ್ತಿತ್ತು, ಮಗನಿಗೆ ಉಪನಯನ ಮಾಡುವ ಖರ್ಚಿಗಾಗಿ ಬಂದ ಬ್ರಾಹ್ಮಣನಿಂದ ಹಿಡಿದು, ಆಸ್ಪತ್ರೆಗೆ ಮಗು ತೋರಿಸುವ ಬಡವನವರೆಗೆ ಅಲ್ಲಿರುತ್ತಿದ್ದರು. ಇದಕ್ಕಿಂತ ಪುಸ್ತಕ ಪ್ರಕಟಿಸುವ ವಿದ್ವಾಂಸರು ಒಳಗೆ ಹೋಗಿ ಸೋಫಾದ ಮೇಲೆ ಆಸೀನರಾಗಿರುತ್ತಿದ್ದ ದೃಶ್ಯ ನಗೆಯುಕ್ಕಿಸುತ್ತಿದ್ದವು.

ಇದಲ್ಲದೆ ದೇವಸ್ಥಾನಕ್ಕೆ ಕಳಸ ಏರಿಸುವವರು ಮತ್ತು ವಿದ್ಯುತ್ ಅಲಂಕಾರದ ಬೇಡಿಕೆ ಹೊತ್ತು ಬರುವವರೂ ಇರುತ್ತಿದ್ದರು. ಗಣಪತಿ ಹಬ್ಬದ ಕಾಲದಲ್ಲಂತೂ ಇಬ್ರಾಹಿಂ ಸಾಹೇಬರ ಮನೆ ಬಾಗಿಲು ದೈವಭಕ್ತರ ಸೋಗಿನ ಯಾಚಕರಿಂದ ತುಂಬಿಹೋಗಿರುತ್ತಿತ್ತು. ಅವರನ್ನೆಂದೂ ಅಸಡ್ಡೆಯಿಂದ ಕಾಣದ ಇಬ್ರಾಹಿಂ ಸಾಹೇಬರು ಪ್ರೀತಿಯಿಂದ ಮಾತನಾಡಿಸಿ "ಚೆನ್ನಾಗಿ ಮಾಡಿ" ಎಂದು ಜೇಬಿಗೆ ಕೈಹಾಕಿ, ಎಣಿಸದೆ ಹಣ ಕೊಡುತ್ತಿದ್ದರು. ಇಂತಹ ಆತಿಥ್ಯಕ್ಕಾಗಿ ಪ್ರತಿವರ್ಷ ಭಕ್ತರ ಸಂಖ್ಯೆ ಹೆಚ್ಚುತ್ತಲೇ ಹೋಯ್ತು.

ಇಷ್ಟಲ್ಲದೆ ಇಬ್ರಾಹಿಂ ಸಾಹೇಬರು ಆಗಾಗ್ಗೆ ಬರುವ ಚುನಾವಣೆಗಳ ಅಭ್ಯರ್ಥಿಗಳ ಖರ್ಚನ್ನೂ ಭರಿಸಬೇಕಾಗಿತ್ತು. ಇದರಲ್ಲಿ ಗೆಲ್ಲುವವನಿಗೆ ದೊಡ್ಡ ಮೊತ್ತ ಕೊಟ್ಟರೆ ಸೋಲುವವನಿಗೆ ಒಂದಿಷ್ಟು ಕಡಿಮೆ ಕೊಟ್ಟು, ಇನ್ನುಳಿದ ಎಲ್ಲಾ ಪಾರ್ಟಿಯ ಪುಡಿ ಅಭ್ಯರ್ಥಿಗಳನ್ನೆಲ್ಲಾ ನೋಡಿಕೊಳ್ಳಬೇಕಿತ್ತು, ಬಹಳ ಸಂದರ್ಭದಲ್ಲವರು ಆಳುವ ಮತ್ತು ವಿರೋಧ ಪಕ್ಷದ ಅಭ್ಯರ್ಥಿಗಳಿಗೆ ಹಣ ಕೊಟ್ಟು ನಂತರ ಭೂಗತರಾಗಿ ಬಿಡುತ್ತಿದ್ದರು. ಆಗ ಸ್ವತಂತ್ರ ಅಭ್ಯರ್ಥಿಗಳು ಮತ್ತು ಚೇಷ್ಟೆಗೆಂಬಂತೆ ನಿಂತ ಅಭ್ಯರ್ಥಿಗಳ ಗೋಳನ್ನ ನೋಡಲಾಗುತ್ತಿರಲಿಲ್ಲ, ಸಂತೆಯಲ್ಲಿ ತಂದೆಯನ್ನು ಕಳೆದುಕೊಂಡ ಮಕ್ಕಳಂತೆ ಹುಡುಕುತ್ತಿದ್ದರು! ಅಂತಹ ಸಮಯದಲ್ಲಿ ಇಬ್ರಾಹಿಂ ಸಾಹೇಬರು ತಿರುಪತಿ ತಿಮ್ಮಪ್ಪನ ಸನ್ನಿಧಿಯಲ್ಲಿ ಹಾಯಾಗಿರುತ್ತಿದ್ದರು. ಅವರ ವ್ಯವಹಾರದ ಸಂಸ್ಥೆಯ ಹೆಸರೇ 'ತಿರುಮಲ ಟ್ರೇಡರ್ಸ್' ಎಂದು. ಅದರ ಆದಾಯದಲ್ಲೊಂದು ಭಾಗವನ್ನವರು, ತಿರುಪತಿ ತಿಮ್ಮಪ್ಪನ ಹೆಸರು ಬಳಸಿಕೊಂಡ ಕಾರಣಕ್ಕೆ, ತಿರುಪತಿಯ ಹುಂಡಿಗೆ ಹಾಕುತ್ತಿದ್ದರು.

ಇನ್ನ ಇಬ್ರಾಹಿಂ ಸಾಹೇಬರ ಸಾಹಸವೊಂದು ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ದಾಖಲಾಗಿದೆ. ಅದೇನೆಂದರೆ ನಾಡಿನ ಎಲ್ಲಾ ಸಾಹಿತ್ಯ ದಿಗ್ಗಜರನ್ನ ಕರೆಸಿ 'ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆ' ಎಂಬ ವಿಷಯವನ್ನ ಚರ್ಚಾವಸ್ತುವಾಗಿ ತೆಗೆದುಕೊಂಡು, ಒಂದು ಸಾಹಿತ್ಯ ಸಮ್ಮೇಳನವನ್ನೇ ಶಿವಮೊಗ್ಗೆಯಲ್ಲಿ ನಡೆಸಿದರು. ಇದೊಂದು ದಾಖಲೆ ನಿರ್ಮಿಸಿದ ಸಾಹಿತ್ಯ ಸಮ್ಮೇಳನ. ಏಕೆಂದರೆ ಲಂಕೇಶ್ ಗುರುತಿಸಿದಂತೆ ನಾಲ್ಕು ತಲೆಮಾರು ಆ ಸಮ್ಮೇಳನ ನಡೆದ ಸಭಾಂಗಣದಲ್ಲಿತ್ತು, ಕಿರಂ ಗುರುವಾದ ಲಂಕೇಶ್, ಲಂಕೇಶ್‌ರ ಗುರುವಾದ ಜಿಎಸ್‌ಎಸ್ ಮತ್ತು ಅವರ ಗುರುಗಳಾದ ಮೂರ್ತಿರಾಯರು ಅಂದು ಸೇರಿದ್ದರು.

ಇನ್ನೂ ಒಂದು ದಾಖಲೆ ಎಂದರೆ ಒಬ್ಬರನ್ನೊಬ್ಬರ ಮುಖ ನೋಡಲಾಗದಷ್ಟು ದ್ವೇಷ ಬೆಳೆಸಿಕೊಂಡಿದ್ದ ಲಂಕೇಶ್ ಮತ್ತು ಚಂಪಾ ಇಬ್ಬರೂ ಕವಿಗೋಷ್ಠಿಯಲ್ಲಿದ್ದರು. ಇದೆಲ್ಲಕ್ಕಿಂತ ಮುಖ್ಯವಾಗಿ ಇಂತಹ ಯಾವ ಸಮ್ಮೇಳನಕ್ಕೂ ಬಾರದ ತೇಜಸ್ವಿಯವರು ಇಬ್ರಾಹಿಂ ಸಾಹೇಬರಿಗೋಸ್ಕರ ಮೂಡಿಗೆರೆಯಿಂದ ಶಿವಮೊಗ್ಗಕ್ಕೆ ಬಂದಿದ್ದರು. ಅಂದಿನ ವಿಷಯ 'ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆ' ಎಂಬುದನ್ನು ಚರ್ಚೆಗೆ ಎತ್ತಿಕೊಂಡ ತೇಜಸ್ವಿ, "ಇದೇನ್ರೀ ಇಂಥಾ ವಿಷಯ ಇಟ್ಟಿದ್ದಿರಿ. ಮುಸ್ಲಿಂ ಸಂವೇದನೆ ಅಂದಕೂಡಲೇ ಹಿಂದೂ ಸಂವೇದನೆ ಅಂತ ಹುಟ್ಟಿಕೊಳ್ಳುತ್ತೆ ಕಂಡ್ರೀ" ಎಂದು ಜನರನ್ನು ನಗಿಸಿದ್ದರು.

ಆ ಸಮ್ಮೇಳನದ ಖರ್ಚುವೆಚ್ಚ ಮತ್ತು ಗಣ್ಯ ಸಾಹಿತಿಗಳಿಗೆ ವಸತಿ, ಊಟ, ಸಂಭಾವನೆ ಇವೆಲ್ಲವನ್ನು ನೋಡಿದರೆ ಒಂದು ಸಾಹಿತ್ಯ ಸಮ್ಮೇಳನದ ಖರ್ಚು ಇಬ್ರಾಹಿಂ ಸಾಹೇಬರಿಗೆ ತಗುಲಿತ್ತು. ಇನ್ನು ಎಣ್ಣೆ ಸಮಾರಾಧನೆಯಂತೂ ಹೇಳತೀರದು.

ಬೆಂಗಳೂರಲ್ಲಿ ಬರೀ ರಮ್ಮು ಕುಡಿದು ಮಿಕ್ಚರ್ ತಿನ್ನುವ ಕವಿಗಳೆಲ್ಲಾ ತಮ್ಮ ಮುಂದೆ ಬಹು ಬೆಲೆಯ ಮದ್ಯದ ಬಾಟಲಿ ಜೊತೆಗೆ ಡ್ರೈ ಕಬಾಬ್‌ಗಳ ರಾಶಿಯನ್ನು ಇಟ್ಟುಕೊಂಡು ತಮ್ಮ ತಮ್ಮ ಕವನಗಳ ಬಗ್ಗೆ ಕೊಚ್ಚಿ ಹಾಕುತ್ತಿದ್ದರು. ಇದರಲ್ಲಿ ಸುಗಮ ಸಂಗೀತಗಾರರು, ಕವಿಗಳಂತೂ ಶಿವಮೊಗ್ಗ ಅಂದಕೂಡಲೇ ಹಾರಿ ಬರುತ್ತಿದ್ದರು.

ಒಮ್ಮೆಯಂತೂ ಇಡೀ ಕನ್ನಡ ಸಾಹಿತ್ಯದ ಬಹುಪಾಲು ಕವಿಗಳು ಮತ್ತು ಹಾಡುಗಾರರು ಇಬ್ರಾಹಿಂ ಸಾಹೇಬರ ಮಹಡಿಯ ಮೇಲೆ ಸಾಹಿತ್ಯದ ಗಲಭೆಯನ್ನೇ ಎಬ್ಬಿಸಿದ್ದರು. ಇದನ್ನು ಸೂಕ್ಷ್ಮವಾಗಿ ಗ್ರಹಿಸಿದ ಇಬ್ರಾಹಿಂ ಸಾಹೇಬರು ಮುಂದೆ ಇಂತಹ ಸಾಹಿತಿಗಳು ಬಂದರೆ ಮುನೀರ್ ಮನೆಗೆ ಕಳುಹಿಸಿ, ಅಲ್ಲಿ ವ್ಯವಸ್ಥೆ ಮಾಡಿಸುತ್ತಿದ್ದರು. ಇಬ್ರಾಹಿಂ ಸಾಹೇಬರು ಮತ್ತು ಸಾಹಿತ್ಯ ಲೋಕದ ನಡುವಿನ ಕೊಂಡಿಯಾಗಿ ಮುನೀರ್ ಕಾರ್ಯ ನಿರ್ವಹಿಸುತ್ತಿದ್ದರು. ಆದ್ದರಿಂದ ಇಬ್ರಾಹಿಂ ಸಾಹೇಬರು ಏರ್ಪಡಿಸುವ ಸಾಹಿತ್ಯ ಸಂಗೀತದ ಸಭೆ ಮುಗಿದನಂತರ ಮುನೀರ್ ಮನೆಯಲ್ಲಿ ಪಾನಗೋಷ್ಠಿ ನಡೆಯುತ್ತಿದ್ದವು. ಇದರಿಂದ ಮುನೀರ್ ಸುಗಮ ಸಂಗೀತದ ಕವಿಗಳು ಮತ್ತು ಗಾಯಕರ ಭಾಗಕ್ಕೆ ತುಂಬಾ ಇಷ್ಟದ ವ್ಯಕ್ತಿಯಾಗಿ ಕಾಣುತ್ತಿದ್ದರು. ನಮ್ಮ ಬಿ.ಆರ್. ಲಕ್ಷ್ಮಣ್‌ರಾವ್ ಮುನೀರನ ಬೀಗರೇ ಆಗಿಹೋದರು. ಇವೆಲ್ಲಾ ಇಬ್ರಾಹಿಂ ಸಾಹೇಬರ ವಿಶಾಲ ಮನೋಭಾವದ ಪ್ರಭಾವದಿಂದ ಜರುಗಿದ ಘಟನೆಗಳು.

ಸಾಹೇಬರಿಗೆ ಮೂರು ಜನ ಗಂಡು ಮಕ್ಕಳಿದ್ದು ರಜಿಯಾ ಎಂಬ ಹೆಣ್ಣು ಮಗಳಿದ್ದಾರೆ. ಈಕೆ ಕನ್ನಡದ ಉತ್ತಮ ಕವಿಗಳಲ್ಲೊಬ್ಬರು. ಇವರ ಕವನ ಸಂಕಲನದ ಬಿಡುಗಡೆಗಾಗಿಯೇ ಒಂದು ಕವಿಗೋಷ್ಠಿ ಏರ್ಪಡಿಸಿದ್ದರು. ತಮ್ಮ ಮಗಳೊಬ್ಬಳು ಕವಿಯಾದ ಬಗ್ಗೆ ಇಬ್ರಾಹಿಂ ಸಾಹೇಬರಿಗೆ ತುಂಬಾ ಹೆಮ್ಮೆಯಿತ್ತು, ಆದರೆ ಅದನ್ನು ಹೇಳಿಕೊಂಡವರಲ್ಲ.

ಇಬ್ರಾಹಿಂ ಸಾಹೇಬರಿಗೆ ಇನ್ನೊಂದು ಮಹದಾಸೆಯಿತ್ತು. ಅದೇನೆಂದರೆ ಒಂದು ಒಳ್ಳೆಯ ಕನ್ನಡ ಮಾಧ್ಯಮದ ಶಾಲೆ ಮಾಡಬೇಕೆಂದು. ಅದರಂತೆ 'ಜ್ಞಾನದೀಪ ವಿದ್ಯಾಸಂಸ್ಥೆ' ತಲೆ ಎತ್ತಿ ಹೆಸರು ಮಾಡತೊಡಗಿತು. ಅಲ್ಲಿಗೆ ಅಂದಿನ ರಾಷ್ಟ್ರಪತಿ ಅಬ್ದುಲ್ ಕಲಾಂರವರನ್ನು ಕರೆಸಿ ಸನ್ಮಾನಿಸಿದರು. ಅಬ್ದುಲ್ ಕಲಾಂ ರಾಷ್ಟ್ರಪತಿ ಸ್ಥಾನದಿಂದ ಇಳಿದ ನಂತರವೂ ಸಾಮಾನ್ಯನಂತೆ ಈ ವಿದ್ಯಾಸಂಸ್ಥೆಗೆ ಬಂದುಹೋದರು. ಅಂತಹ ಎಲ್ಲಾ ಗಣ್ಯರೂ ಕೂಡ ಇಬ್ರಾಹಿಂ ಸಾಹೇಬರನ್ನು ಮೆಚ್ಚಿಕೊಂಡಿದ್ದರು.

ಇದೇ ಸಮಯದಲ್ಲಿ ಇನ್ನೊಂದು ಭೀಕರ ಸಮಸ್ಯೆ ಇಬ್ರಾಹಿಂರ ಎದುರು ನಿಂತಿತು. ಅದೇನೆಂದರೆ ದಾನ ಕೇಳಲು ಬರುತ್ತಿದ್ದವರ ಜೊತೆಗೆ ಜ್ಞಾನದೀಪದ ಶಾಲೆಗೆ ಸೀಟುಕೇಳುವ ಗಣ್ಯರ ಸಂಖ್ಯೆ ಹೆಚ್ಚಾಗತೊಡಗಿತು. ಈ ಮೊದಲೇ ಅವರು ಶಿವಮೊಗ್ಗ ತೊರೆದು ತೀರ್ಥಹಳ್ಳಿಯಲ್ಲಿ ನೆಲೆಸಿದ್ದರು. ಜನ ಅಲ್ಲಿಗೂ ಹೋಗುತ್ತಿದ್ದರು. ಅಂತೂ ಯಾರಿಂದಲೂ ತಪ್ಪಿಸಿಕೊಳ್ಳಲಾಗುವುದಿಲ್ಲ ಎಂಬ ಜ್ಞಾನೋದಯದಿಂದ ಮತ್ತೆ ಶಿವಮೊಗ್ಗಕ್ಕೆ ಬಂದು ನೆಲೆಸಿದ್ದರು.

ಮೂಲತಃ ಇಬ್ರಾಹಿಂ ಸಾಹೇಬರು ಒಳ್ಳೆಯ ವ್ಯಕ್ತಿಯಾದ್ದರಿಂದ ಒಳ್ಳೆಯ ಉದ್ಯಮಿಯಾಗಿರಲಿಲ್ಲ, ಆದ್ದರಿಂದ ಆದಾಯಕ್ಕೂ ದಾನಕ್ಕೂ ಹೊಂದಾಣಿಕೆಯಾಗದೆ ಸಾಲ ಹೆಚ್ಚುತ್ತಾಹೋಯಿತು. ಹೀಗೇ ಆದರೆ ಅಪ್ಪ ... ಬೀದಿಗೆ ಹಾಕುವುದು ಗ್ಯಾರಂಟಿ ಎಂದರಿತ ... ವ್ಯವಹಾರವನ್ನ ಸಂಪೂರ್ಣ ಕೈಗೆ ತೆಗೆದುಕೊಂಡು ದಾನಧರ್ಮಕ್ಕೆ ಕಡಿವಾಣ ಹಾಕಿದರು. ಇದ... ಅನಿವಾರ್ಯವಾಗಿ ಇಬ್ರಾಹಿಂ ಸಾಹೇಬರು ತಮ್ಮ ... ಹಿರೇಹಾಳಕ್ಕೆ ಹೋಗಿ ನೆಲೆಸಿದರು. ಆದರೆ ಯಾ... ಅಲ್ಲಿಗೂ ಹೋಗಿ ಬರುತ್ತಿದ್ದರು.

ನಾನೂ ಕೂಡ ಎರಡು ಬಾರಿ ಹೋಗಿ ಜ್ಞಾ... ಶಾಲೆಗೆ ಮಕ್ಕಳನ್ನು ಸೇರಿಸಲು ಶಿಫಾರಸ್ಸು ಪತ್ರ... ಆದರೆ ಅವರದೇ ಸಂಸ್ಥೆಯಲ್ಲಿ ಆಡಳಿತ ಮಂಡಳಿ ಬ... ದುಡ್ಡಿನ ಮುಂದೆ ಇಬ್ರಾಹಿಂ ಸಾಹೇಬರ ಶಿಫಾರಸ... ಕೆಲಸ ಮಾಡಲಿಲ್ಲ, ವಾಸ್ತವವನ್ನರಿತ ನನಗ... ಬೇಸರವಾಗಲಿಲ್ಲ, ಏಕೆಂದರೆ ನಾನು ಶಿಫಾರಸ್ಸು ಪತ್ರ ತ... ನನ್ನ ಮಕ್ಕಳಿಗಲ್ಲ, ಆದರೆ ಇಬ್ರಾಹಿಂ ಸಾಹೇಬರು ... ನೊಂದುಕೊಂಡರು.

ಈ ಹಿರೇಹಾಳದ ಕರ್ಣನ ಬಳಿ ತಾಯಿ ... ವೊಂದುಳಿದು ಇನ್ನೆಲ್ಲದರಲ್ಲೂ ಬರಿಗೈಯಾಗಿ... ಬರುವವರ ಊಟತಿಂಡಿಯ ವಿಷಯ ತಿಳಿದು ... ಮಾಡಿ ಕಳುಹಿಸುತ್ತಿದ್ದರು.

ಬರಿಗೈಯಾದ ಬದುಕು ಬಹಳ ದಿನ ಇರಬ... ಮತ್ತು ಯಾತನೆಯಿಲ್ಲದೆ ಹೊರಟುಹೋಗಬೇ... ಇಬ್ರಾಹಿಂ ಬಯಸಿದ್ದರು. ಅವರ ಆಸೆ ಸಾಹ... ತೀರಿಕೊಂಡ ದಿನ ಈಡೇರಿದೆ.

ಸಾಹೇಬರ ಕೊನೆ ದರ್ಶನಕ್ಕೆ ಸಾಹಿತ್ಯ ಪರಿಷ... ಮಂಜುನಾಥ್, ಕಲೀಂ, ಕೃಷ್ಣಮೂರ್ತಿ ಜೊತೆ ಹಿರೇ... ಹೋದಾಗ ಇಬ್ರಾಹಿಂ ಸಾಹೇಬರು ಕರೆಸಿದ್ದ ಜನಸ... ನೋಡಿ ದಂಗು ಬಡಿದೆವು. ಅಲ್ಲದೆ ಇಬ್ರಾಹಿಂ ಸಾ... ಶವಪೆಟ್ಟಿಗೆ ಬಳಿ ಕುಂಕುಮಧಾರಿ ಹಿಂದೂ ಮಹಿಳೆ... ನೋಡಿ ನಮ್ಮ ಕಣ್ಣಾಲಿಗಳು ತಂತಾನೇ ಜಿನು... ನಮ್ಮ ಸುತ್ತಲ ಮುಸ್ಲಿಮರಿಗೆ ಇಬ್ರಾಹಿಂ ಸಾಹೇಬರ ಬ... ಒಂದು ದೊಡ್ಡ ಆದರ್ಶ.

ಇಬ್ರಾಹಿಂ ಸಾಹೇಬರಂತೆಯೇ ಬದುಕಿದ... ಜಗಳೂರು ಇಮಾಮ್ ಸಾಹೇಬರು ಕೂಡ ಅಲ್ಲಿ... ಜನಾಂಗಕ್ಕೆ ಇಮ್ಮಣ್ಣನಾಗಿದ್ದರು. ಇನ್ನು ನಜೀರ್ ಸಾ... ರಂತೂ ನೀರ್ ಸಾಬರೆಂದು ಕರೆಸಿಕೊಂಡರಲ್ಲದೆ, ... ಪಂಚಾಯ್ತಿ ಸಭಾಂಗಣದಲ್ಲಿ ಸ್ಥಾಪನೆಗೊಂಡರು. ... ಇಬ್ರಾಹಿಂ ಸಾಹೇಬರಿಗೆ ಯಾವುದೇ ಸ್ಥಾನದ ... ಅಪೇಕ್ಷೆಯೂ ಇರಲಿಲ್ಲ, ಅವರು ಕನ್ನಡ ಅ... ಪ್ರಾಧಿಕಾರದ ಸದಸ್ಯರಾದಾಗಲೂ ಕೂಡ ಪಟೇಲರು ಅ... ಕೇಳದೆ ಮಾಡಿದ್ದರು. ಏಕೆಂದರೆ ಕೇಳಿದ್ದರೆ ಸಾಹ... ಒಪ್ಪುತ್ತಿರಲಿಲ್ಲ ಎಂಬುದು ಪಟೇಲರಿಗೆ ಗೊತ್ತಿತ್ತು.

ಅವರು ದಾನ ಕೊಟ್ಟ ಯಾವುದೇ ವೇ... ಬರುತ್ತಿರಲಿಲ್ಲ, ವೇದಿಕೆ ಹತ್ತುವ ಅನಿವಾರ್ಯತೆ ... ದಾನ ಕೊಡುತ್ತಿರಲಿಲ್ಲ, ಅವರು ಲಿಕ್ಕರ್ ಉದ... ಕುಬೇರನಾಗಿದ್ದರೂ ಎಲ್ಲಾ ರಾಜಕಾರಣಿಗಳೂ ಗೌರವಿಸಿ... ನಡೆದುಕೊಳ್ಳುತ್ತಿದ್ದರು. ಅಬಕಾರಿ ಸಚಿವರಾಗಿದ್ದ ಹೆ... ಕೃಷ್ಣಪ್ಪನವರೂ ಕೂಡ "ಇಬ್ರಾಹಿಂ ಸಾಹೇಬರ ಉದ್ಯ... ಅಧಿಕಾರಿಗಳಿಗೆ ಯಾವ ತಪ್ಪು ಲೆಕ್ಕವೂ ಸಿಗುತ್ತಿ... ಅಷ್ಟು ಚೊಕ್ಕವಾಗಿ ಉದ್ಯಮ ನಡೆಸುತ್ತಿದ್ದರು" ... ಹೇಳುತ್ತಿದ್ದರು. ಇಬ್ರಾಹಿಂ ಸಾಹೇಬರ ಮೆಚ್ಚಿನ ರಾಜ... ಎಂ.ಪಿ. ಪ್ರಕಾಶ್. ಅವರಿಬ್ಬರೂ ಸೇರಿದಾಗಿನ ಚರ್ಚೆ... ಸಾಹಿತ್ಯ ಸಂಗೀತ ಕುರಿತದ್ದಾಗಿರುತ್ತಿತ್ತು. ಸಾಹೇಬರು ಅ... ತಮ್ಮ ಉದ್ಯಮದ ಬಗ್ಗೆ ಎಂದೂ ಮಾತನಾಡಿದ...

ಕರ್ಣನಿಗೆ ಸೂತ ಕುಲದ ಅವಮಾನದಂತೆ ಇ... ಸಾಹೇಬರಿಗೆ ಲಿಕ್ಕರ್ ಉದ್ಯಮ ಹೆಮ್ಮೆಯಿಂದ ... ಕೊಳ್ಳುವ ಉದ್ಯಮವಾಗಿರಲಿಲ್ಲ, ಆದರೂ ಅವರ ಬ... ಒಂದು ಧೀಮಂತ ಬದುಕಾಗಿ ದಾಖಲಾಗಿದೆ. ... ನಡುವಿನ ಬಹು ದೊಡ್ಡ ಸಮುದಾಯವಾದ ... ಜನಾಂಗ ಇಬ್ರಾಹಿಂ ಸಾಹೇಬರ ಹಾದಿಯಲ್ಲಿ ... ಹಾಕಿದ್ದಾದರೆ ನಮ್ಮ ಅಸಂಖ್ಯಾತ ಜಾತಿಗಳೇ ... ಸಂದರ್ಭದಲ್ಲಿ ಅವರೆಲ್ಲರಿಗೆ ರಕ್ಷಣೆ ಕೊಡಬಲ್ಲರು. ಇ... ಸಾಹೇಬರ ಬದುಕಿನ ಆದರ್ಶದಲ್ಲಿ ಒಂದಂಶ ಪಾಲಿ... ಸಾಕು, ಮುಸ್ಲಿಮರು ಮುಖ್ಯವಾಹಿನಿಯಲ್ಲಿ ಯಾವ ಅ... ಇಲ್ಲದೆ ಸಾಗಬಹುದು. ಆದರೆ ಬಹಳಷ್ಟು ಮು... ಇಬ್ರಾಹಿಂ ಸಾಹೇಬರನ್ನು ಅಷ್ಟು ಇಷ್ಟ ಪಡುತ್ತಿ... ಏಕೆಂದರೆ ಅವರ ಪ್ರತಿನಿಧಿಗಳೇ ಬೇರೆ, ಇಬ್ರಾಹಿಂ ಸಾಹೇಬರೇ ಬೇರೆ!

ಅವರನ್ನು ನೋಡಲು ಹೋದಾಗ ಇಬ್ರಾಹಿಂ ಸಾಹೇಬರನ್ನು ಕಡೆಯವರೆಗೂ ಚೆನ್ನಾಗಿ ನೋಡಿ... ಚೆನ್ನಬಸಪ್ಪ ನಮ್ಮನ್ನ ಎದುರುಗೊಂಡರು. ಅಲ್ಲಿದ್ದ ಜನ... ನೋಡಿ ಕವಿ ಅಸಾದುಲ್ಲಾ ಬೇಗ್‌ರವರ ಶಾಯಿರಿಯ... ಜ್ಞಾಪಕಕ್ಕೆ ಬಂತು:

"ಉಸಿರು ನಿಂತೊಡನೆ
ಪಯಣ ಮಸಣದೆಡೆಗೆ.
ಹಣದ ವ್ಯಾಮೋಹ ಬೇಡ
ಜನರಿರಲಿ, ಬಿಡಲಿ
ನಮ್ಮ ಸಮಾಧಿಯವರೆಗೆ."

■ ಬಿ. ಚಂದ್ರೇ...

...ಲಿತ ಸಂವೇದನೆಯ ಜ್ವಲಂತ ಕೃತಿ: 'ಬೂಬನ ಕತೆಗಳು'

ಪುಸ್ತಕ ಪರಿಚಯ

...ಮುಮ' ಕಾವ್ಯನಾಮದ ಮರಿಕಾಪುರ ಸುರೇಶ ...ಪನ ಇವರು ಕೊರಗ ಜನಾಂಗದ ಉಪ ... ಮೊಗೇರ (ಮೊಗವೀರ ಅಲ್ಲ) ಜನಾಂಗಕ್ಕೆ ... 'ಹಬಾಶಿಕ' ಎನ್ನುವ ನಾಟಕ, ಬೆಂಬುರಿ ...ನ್ನುವ ಕಾದಂಬರಿ ಮತ್ತು ತೆಂಡೆ ಹೂಮ, ...ಪಾರಿಜಾತ, ಹುಂಸಕ್ಷೀರ, ಕಬ್ಬಕ್ಕಿಯ ಕಲರವ- ...ಕವನ ಸಂಕಲನಗಳನ್ನು ಪ್ರಕಟಿಸಿರುವ ...ಪಿ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ...ವಮೆ ನೀಡುವ ದಲಿತ ಲೇಖಕ. ಅವರಂತೆ ...ನಾಂಗದ ಬದುಕಿನ ನೋವು, ನಲಿವುಗಳನ್ನು ...ನ್ನು ಜೀವಂತವಾಗಿ ಕಟ್ಟಿ ಕೊಡುವ ದಲಿತ ... ಈ ನಮ್ಮ ಕರಾವಳಿ ಜಿಲ್ಲೆಗಳಲ್ಲಿ ಕಾಣುವುದು ... ನಮ್ಮಲ್ಲಿ ಮೇಲುಜಾತಿಯವರ ಸಾಂಸ್ಕೃತಿಕ ...ಎಷ್ಟು ಆಳವಾಗಿ ಬೇರುಬಿಟ್ಟದೆಯೆಂದರೆ, ...ನಡೆದ ಕಾರ್ಕಳ ತಾಲ್ಲೂಕು ಸಾಹಿತ್ಯ ...ನಲ್ಲಿ ಕಾರ್ಕಳ ತಾಲ್ಲೂಕಿನ ಭರವಸೆಯ ಕನ್ನಡ ...ಗ್ಗೆ ಮಾತನಾಡುವಾಗ ಯಾರೂ ಈ 'ಮಸುಮ'ರ ... ಬಗ್ಗೆ ಮಾತನಾಡಲೇ ಇಲ್ಲ. ಈ 'ಮರೆವಿ'ನ ... ದಲಿತರ ಬಗೆಗೆ ಬ್ರಾಹ್ಮಣ, ಬಂಟರಂತಹ ...ತಿಯವರಿಗೆ ಇರುವ ಅಸಹನೆ/ತಿರಸ್ಕಾರ ಇದೆ. ...ಲುಜಾತಿಯವರು ಡಾ. ಬಿ.ಆರ್. ಅಂಬೇಡ್ಕರ್ ...ಕ್ಷತೆಯಲ್ಲಿ ರಚಿತವಾದ ಭಾರತದ ಸಂವಿಧಾನಕ್ಕೆ ...ವ್ಯತೆ, ಜಾತೀಯತೆಯ ಆಚರಣೆಯನ್ನು ಮಾಡದೆ ... ವರ್ತಿಸುತ್ತಾರೆಯೇ ಹೊರತು- ಅವರೆಲ್ಲರ ...ನಲ್ಲಿ ಇವತ್ತಿಗೂ ಜಾತೀಯತೆಯ ವಿಷ ತುಂಬಿ ...ದೆ.

...ಯುತೆ ಮತ್ತು ಅಸ್ಪೃಶ್ಯತೆಯ ಅವಮಾನ, ...ನ್ನು ಅನುಭವಿಸುತ್ತಾ ಬದುಕುತ್ತಿರುವ 'ಮಸುಮ' ...ಬರ ಸ್ವಭಾವದವರು. ಮೇಲುಜಾತಿಯವರ ...ತಿತನವನ್ನು ಧೈರ್ಯದಿಂದ ಟೀಕಿಸುತ್ತಿರುವವರು. ...ರು ವಿಶ್ವವಿದ್ಯಾನಿಲಯದಿಂದ ಕನ್ನಡ ಎಂ.ಎ. ...ನ್ನು ಉನ್ನತ ದರ್ಜೆಯಲ್ಲಿ ತೇರ್ಗಡೆಯಾಗಿರುವ ...ಪ. ಎನ್.ಇ.ಟಿ. ಪರೀಕ್ಷೆಯಲ್ಲಿ ಕೂಡಾ ...ದೆ. ಈಗ ಪಿಎಚ್.ಡಿ ಅಧ್ಯಯನ ನಡೆಸುತ್ತಿದ್ದು ...ಡಾಕ್ಟರೇಟ್ ಪದವಿಯನ್ನು ಕೂಡಾ ಗಳಿಸಲಿದ್ದಾರೆ. ...ಗವರ್ನ್‌ಮೆಂಟ್ ಬ್ರಾಹ್ಮಣ, ಆಧುನಿಕ ಭಾರತದ ...ವಂತರು, ಮೀಸಲಾತಿಯ ಲಾಭ ...ಯುವವರೆಂದು ಬ್ರಾಹ್ಮಣರನ್ನೊಳಗೊಂಡು ಎಲ್ಲಾ ...ತಿಯವರು ಕುಹಕವಾಡುತ್ತಾರೆ; ಆದರೆ ಕೊರಗ ...) ಜಾತಿಯ ಪ್ರತಿಭಾವಂತ, ಬುದ್ಧಿವಂತ ...ವಿಗೆ ಇನ್ನೂ ಕನ್ನಡ ಉಪನ್ಯಾಸಕರಾಗಿ ಕಾಲೇಜಲ್ಲಿ ...ಉದ್ಯೋಗ ಸಿಕ್ಕಿಲ್ಲ. ಸದ್ಯ ಮುಲ್ಕಿಯ ವಿಜಯ ...ಲ್ಲಿ ಸ್ವಾಪ್‌ಗ್ಯಾಪ್‌ನಲ್ಲಿ ಕನ್ನಡ ಉಪನ್ಯಾಸಕರಾಗಿ, ... ನೆಲೆಯಲ್ಲೇ ಕೆಲಸ ಮಾಡುತ್ತಿದ್ದಾರೆ. ಹೀಗೆ ...ಗುತ್ತಿರಬಹುದು?

... 'ಬೆಂಬುರಿ' ಕಾದಂಬರಿಯನ್ನು ತುಂಬಾ ... ನಾನು ಅದನ್ನು ಆಂಗ್ಲ ಭಾಷೆಗೆ ತರ್ಜುಮೆ ...ದ್ದೇನೆ.

ಇಲ್ಲಿ ಬರೆಯಲು ಹೊರಟಿರುವುದು ಅವರ ... ಪ್ರಕಟಣೆಯಾದ 'ಬೂಬನ ಕಥೆಗಳು' ಕಥಾ ... ಬಗ್ಗೆ.

...ಂತ, ಪಟ್ಟ, ಬೂಬನ ಕಥೆಗಳು, ಬೇಟೆ- ಹೀಗೆ ...ಥೆಗಳು ಈ ಸಂಕಲನದಲ್ಲಿವೆ. 'ಮಸುಮ' ಅವರ ...ನ್ ಅನುಭವಗಳ ಬೈಪ್ರೊಡಕ್ಟ್ ಆಗಿ ...ದಿರುವ ಈ ನಾಲ್ಕು ಕತೆಗಳು ಅದ್ಭುತವಾಗಿವೆ. ... ಅವರ ನಿರೂಪಣ ಶೈಲಿ ಖಚಿತ, ನೇರ. ...ಗ್ಗ' ಹರಿತವಾದ ಕತ್ತಿಯ ಅಲಗಿನಂತೆ. ಹಾಸ್ಯ ...ಷ್ಟೆ ಎಣಿಸಿ ಎಣಿಸಿ ಬಿದ್ದು ಬಿದ್ದು ನಗು ...ಬರಾದು.


... ಕತೆಯ ಘಟನೆಗಳು ನಡೆಯುವುದು ಕಾರ್ಕಳ ... ಮಣ್ಣಿನಲ್ಲಿ, ನೂರಾರು ವರ್ಷಗಳಿಂದ ಜಾತಿ, ... ಕಾರಣಕ್ಕಾಗಿಯೇ ಶೋಷಣೆಗೆ ಒಳಗಾಗುತ್ತಿರುವ ... ಹೆಸರುಗಳು ಹೀಗಿವೆ- ಕರ್ಗಿ, ಕುಟ್ಟ, ಚಿಕ್ಕಿ, ... ಪಟ್ಟ, ಗಿಡ್ಡಿ, ಬೂಬ, ಬೊಮ್ಮಿ, ಬೋರು, ...ಕ್ಕ, ಕೊಗ್ಗ, ತಿಮರೆ, ಅಕ್ಕಣಿ, ತುಂಬೆ, ಬೊಗ್ಗು- ...ಂದೇ ಒಂದು ವೈದಿಕ ದೇವರು, ದೇವತೆಗಳ ...ಲ್ಲದಿರುವುದನ್ನು ವಿಶೇಷವಾಗಿ ಗಮನಿಸಬೇಕು. ... ಕೃಷ್ಣ, ಸತ್ಯ, ನಾರಾಯಣ, ಲಕ್ಷ್ಮಿ, ಸರಸ್ವತಿ, ...ಂದ್ರರಲ್ಲ. ಈ ನೆಲದ ಮಕ್ಕಳ ಸಂಸ್ಕೃತಿಗೆ ...ಸರು. ದುರದೃಷ್ಟವಶಾತ್ ಈ ಎಲ್ಲ ಹೆಸರುಗಳು ...ಗಿ. ಅಲ್ಲಿಯೂ ವೈದಿಕ ಸಂಸ್ಕೃತಿಯ ಹಸ್ತಕ್ಷೇಪ ...ದೆ. ಈ ಅರಿವು ಜಾಗೃತದ ಸಂಸ್ಕೃತಿಯ 'ಚಲಿಸುವ ... ದಂತಿರುವ 'ಮಸುಮ'ರಿಗೆ ಇದೆ. ಆದರೆ ... ದಲಿತ ಸಂಸ್ಕೃತಿಯ ಜ್ಞಾನದ ಉಪಯೋಗವನ್ನು,

ನಮ್ಮ ಕನ್ನಡ ಸಾರಸ್ವತ ಲೋಕ ಇನ್ನೂ ಪಡೆದಿಲ್ಲ. ಮುಲ್ಕಿಯ ಡಾ. ರಂಗನಾಥ್ ಕಾಮತರು ಇವರನ್ನು ತಮ್ಮ ಮಗನಂತೆಯೇ ಆರ್ಥಿಕ ಸಹಾಯ ನೀಡಿ, ನೈತಿಕ ಬೆಂಬಲ ನೀಡಿ ಸಲುಹಿದರು. ಸ್ತ್ರೀ ರೋಗ ತಜ್ಞೆ ಡಾ. ಮೀರಾ ಕಾಮತ್‌ರಿಗೂ 'ಮಸುಮ'ರನ್ನು ಕಂಡರೆ ತುಂಬಾ ಅಭಿಮಾನ. 'ಮಸುಮ' ಅವರ 'ಕಬ್ಬಕ್ಕಿಯ ಕಲರವ' ಕವನ ಸಂಕಲನಕ್ಕೆ ಮುನ್ನುಡಿ ಬರೆಯುತ್ತಾ ಡಾ. ಮೀರಾ ಕಾಮತ್ ಹೀಗೆ ಬರೆದಿದ್ದಾರೆ:

"ಮಸುಮರು ತನ್ನ ಕವಿತೆಗಳಲ್ಲಿ ದಲಿತರ ಮನದ ತುಡಿತವನ್ನು ಚೆನ್ನಾಗಿ ಬಣ್ಣಿಸಿದ್ದಾರೆ. ಅನುಭವಗಳ ಆಧಾರದ ಮೇಲೆ ಬರೆದ ಸಾಹಿತ್ಯವು ಯಾವಾಗಲೂ ಮನವನ್ನು ಮುಟ್ಟುತ್ತದೆ ಎಂದು ಡಾ. ಶಿವರಾಮ ಕಾರಂತರು ಒಂದು ಸಂದರ್ಶನದಲ್ಲಿ ಹೇಳಿದ್ದನ್ನು ನಾನು ಇಲ್ಲಿ ಸ್ಮರಿಸಿಕೊಳ್ಳುತ್ತೇನೆ."

ಯಾವ ಐತಿಹಾಸಿಕ, ಸಾಮಾಜಿಕ ಕಾರಣಕ್ಕೋ ಗೊತ್ತಿಲ್ಲ, ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೌಡ ಸಾರಸ್ವತ ಬ್ರಾಹ್ಮಣರಾದ ಕುದ್ಮಲ್ ರಂಗರಾವ್, ಡಾ. ರಾಯಪ್ಪ ಕಾಮತ್‌ರಂತರವರು ದಲಿತರ ಬದುಕಿನ ಸುಧಾರಣೆಗಾಗಿ ಪ್ರಾಮಾಣಿಕವಾದ ಪ್ರಯತ್ನ ನಡೆಸಿದ್ದಾರೆ.

ಈಗಾಗಲೇ ಹೇಳಿರುವಂತೆ ಈ ಸಂಕಲನದಲ್ಲಿರುವ



ಬೂಬನ ಕಥೆಗಳು - ಕಥಾ ಸಂಕಲನ

ಲೇಖಕ : ಮಸುಮ

ಗಾಯತ್ರೀ ಪ್ರಕಾಶನ. ಕಿನ್ನಿಗೋಳಿ-574150.
ದಕ್ಷಿಣ ಕನ್ನಡ. ಮಂಗಳೂರು ತಾಲ್ಲೂಕು.

ಮೊದಲನೇ ಮುದ್ರಣ : 2014
ಬೆಲೆ : ರೂ. 50

ನಾಲ್ಕೂ ಕತೆಗಳು 'ಮಸುಮ' ಅವರ ನೇರ ಅನುಭವದ ಪ್ರತಿಫಲಗಳು. ಲೇಖಕರೇ ಹೇಳುವಂತೆ ಇಲ್ಲಿ ಕಲ್ಪನೆಗಿಂತಲೂ ವಾಸ್ತವವೇ ಹೆಚ್ಚಾಗಿದೆ.

ಮೊದಲ ಕತೆ 'ದುರಂತ'ದಲ್ಲಿ ತಂದಳಿಕೆಯ ಮರದ ಎಲೆಗಳನ್ನು ಹೆಣೆದು, ಅಟ್ಟೆಯ ಕೋಲನ್ನು ಬಗ್ಗಿಸಿ, ಅಡಿಗೆ ಬೀಳಿನಿಂದ ಕಟ್ಟಿ, ಗಿಟಿಯ ಎಳೆಗಳನ್ನು ಸಿಗಿದು ಅಟ್ಟೆಗೆ ಸಿಕ್ಕಿಸಿ ಸುಂದರವಾದ ಗೊರಬುಗಳನ್ನು ರೂಪಿಸಿ, ಮಾರಾಟ ಮಾಡಿ, ಅದರ ಹಣದಿಂದಲೇ ಬಡತನದ ಬದುಕು ಸಾಗಿಸುತ್ತಿರುವ ದಲಿತ ಯುವಕ ಕುಟ್ಟಿ ಮತ್ತು ಅವನ ತಾಯಿ ಕರ್ಗಿಯ ಕತೆ ಇದೆ. ಎರಡು ದಿನದಿಂದ ಊಟವನ್ನೇ ಮಾಡದ ಮಗನ ಬೆನ್ನಿಗೆ ಅಂಟಿಕೊಂಡ ಹೊಟ್ಟೆ ನೋಡಿ ಮೌನವಾಗಿ ಕಣ್ಣೀರಿಡುವ ತಾಯಿ ಕರ್ಗಿ. ನೆರಮನೆಯ ಕ್ರಿಶ್ಚಿಯನ್ ಮಹಿಳೆ ಫಿಲೋಮಿನಾ ಬಾಯಿ ಕುಟ್ಟಿಯನ್ನು ಹೆಚ್ಚಿನ ಹಣ ಸಂಪಾದನೆಗಾಗಿ ದುಬೈಗೆ ಕಳುಹಿಸುತ್ತಾಳೆ. ಅಲ್ಲಿಗೆ ಇದ್ದ ಒಬ್ಬನೇ ಮಗನ ಆಸರೆ ವಿಧವೆ ಕರ್ಗಿಗೆ ತಪ್ಪಿಹೋಗುತ್ತದೆ. ಹಾಗೆ ದುಬೈಗೆ ಹೋದ ಮಗ ಕುಟ್ಟಿಯಿಂದ ಪತ್ರವೂ ಬರುವುದಿಲ್ಲ. ಈ ನಡುವೆ ಮಗನಿಗಾಗಿ ಹಂಬಲಿಸಿ, ಹಂಬಲಿಸಿ ಕರ್ಗಿಗೆ ಹುಚ್ಚು ಹಿಡಿಯುತ್ತದೆ. ಒಂದು ದಿನ ಫಿಲೋಮಿನಾ ಬಾಯಿ ಹೇಳುತ್ತಾಳೆ; "ನಿನ್ನ ಮಗ ನಮ್ಮ ಜಾತಿಯ ಹುಡುಗಿಯನ್ನು ಮದುವೆಯಾಗಿ ನಮ್ಮ ಜಾತಿಗೆ ಸೇರಿದನಂತೆ. ಅವಳು ಅಲ್ಲಿಯವಳೇ ಆಗಿರುವುದರಿಂದ ಆಕೆ ಅವನನ್ನು ಊರಿಗೆ ಬರಲು ಬಿಡುವುದಿಲ್ಲವಂತೆ. ಅವನೂ ಊರಿಗೆ ಬರುವ ಉತ್ಸಾಹ ತೋರುವುದಿಲ್ಲವಂತೆ..." ಈ ಸುದ್ದಿ ತಿಳಿದು ಕರ್ಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಮೊದಲ ಓದಿಗೆ ಸರಳವಾಗಿ ಕಾಣುವ ಈ ಕತೆ ಹಲವು ಒಳಸುಳಿಗಳನ್ನು ಹೊಂದಿದೆ. ಜಾತಿಭೇದದ ಸಾಮಾಜಿಕ ವ್ಯವಸ್ಥೆಯಲ್ಲಿ ಮತ್ತು ಅರೆ ಊಳಿಗಮಾನ್ಯ ವ್ಯವಸ್ಥೆಯ ಭಾರತದಲ್ಲಿ ದಲಿತರ ಶೋಷಣೆ ಹೇಗೆ ಆಗುತ್ತದೆ ಎನ್ನುವ ಬಗ್ಗೆ ಈ ಕತೆ ಒಳನೋಟ ನೀಡುತ್ತದೆ. 'ಮತಾಂತರ'ದ ದುರಂತ ಮತ್ತು ಹಳ್ಳಿಯಿಂದ ಪರದೇಶಕ್ಕೆ ವಲಸೆ ಹೋಗುವ ಬಡವರ ಮಕ್ಕಳ ಬದುಕಿನ ದುರಂತದ ಛಾಯೆಯೂ ಈ ಸಣ್ಣ ಕತೆಯಲ್ಲಿದೆ.

ಎರಡನೇ ಕತೆ 'ಪಟ್ಟ'. ಕೊರಗರ ಉಪಜಾತಿ ಮೊಗೇರ ಜಾತಿಯವರ ಮನೆಗೆ 'ಪಟ್ಟ' ಎಂದು ಕರೆಯುತ್ತಾರೆ. ಈ ಕತೆಯ ಖಳನಾಯಕ ವೆಂಕಪ್ಪ ಶೆಟ್ಟಿ, ಬಡವರನ್ನು ಅದರಲ್ಲೂ ವಿಶೇಷವಾಗಿ ದಲಿತರನ್ನು ಶೋಷಣೆ ಮಾಡುವ ಮೇಲುಜಾತಿಯ ಪ್ರತಿನಿಧಿ; ಊಳಿಗಮಾನ್ಯ ವ್ಯವಸ್ಥೆಯ ಜಮೀನ್ದಾರ. 'ಪಟ್ಟ' ಎನ್ನುವ ಗುಡಿಸಲಿನಲ್ಲಿ ವಾಸಿಸುತ್ತಿರುವವರು ಚಿಕ್ಕಿ ಮತ್ತು ಆಕೆಯ ಗಂಡ ಪಿಜಣ್ಣ, ಗಿಡ್ಡಿ ಮತ್ತು ಆಕೆಯ ಗಂಡ ದೂಜ ಮತ್ತು ಅವರ ಹಸಿದ ಮಕ್ಕಳು. ವೆಂಕಪ್ಪ ಶೆಟ್ಟಿ ಚಿಕ್ಕಿಯ ಅಸಹಾಯಕತೆಯನ್ನು ಉಪಯೋಗಿಸಿಕೊಂಡು ಅವಳ ಜತೆ ರಹಸ್ಯ ಸಂಬಂಧ ಇಟ್ಟುಕೊಂಡಿದ್ದಾನೆ. ಈ ರಹಸ್ಯ ಸಂಬಂಧ ದೂಜನಿಗೆ ತಿಳಿಯಿತು ಎನ್ನುವ ಕಾರಣಕ್ಕೆ ಅವನನ್ನು ತನ್ನ ಮನೆಯ ಬಾವಿಯ ಕೆಸರು ತೆಗೆಯುವ ಕೆಲಸಕ್ಕೆ ಇಳಿಸಿ, ಅವನ ಮೇಲೆ ಬಂಡೆ ಬೀಳಿಸಿ ಸಾಯಿಸುತ್ತಾನೆ. ಇದರಿಂದ ದೂಜನ ಹೆಂಡತಿ ಗಿಡ್ಡಿ ಹಾಗೂ ಅವನ ಮಕ್ಕಳು ಅನಾಥರಾಗುತ್ತಾರೆ. ಇಲ್ಲಿ 'ಪಟ್ಟ'ದ ನಿವಾಸಿಗಳ ಬದುಕಿನ ದುರಂತ ಅನಿವಾರ್ಯವಲ್ಲ. ಶೈಕ್ಷಣಿಕವಾಗಿ, ಆರ್ಥಿಕವಾಗಿ ಸಬಲರಾದರೆ ಚಿಕ್ಕಿ, ದೂಜ, ಪಿಜಣ್ಣ, ಗಿಡ್ಡಿ ಅವಳ ಮಕ್ಕಳೆಲ್ಲ ವೆಂಕಪ್ಪ ಶೆಟ್ಟಿಯಂತಹ ಮೇಲುಜಾತಿಯವರ ಶೋಷಣೆಯಿಂದ ಮುಕ್ತರಾಗಬಹುದು.

ಮೂರನೇ ಕತೆ- 'ಬೂಬನ ಕಥೆಗಳು'. ಈ ಕಥಾಸಂಕಲನಕ್ಕೆ ಇದೇ ಹೆಸರಿದೆ. ತೇಜಸ್ವಿಯವರ ಕರ್ವಾಲೋ ಕಾದಂಬರಿಯಲ್ಲಿರುವ 'ಮಂದಣ್ಣ'ನಂತಹ ಹಾಸ್ಯಪಾತ್ರವಿದು. ಮಣ್ಣಿನ ಮಕ್ಕಳಾದ ಬೂಬಣ್ಣನಂತಹವರಿಗೆ- ಆಧುನಿಕ ಬದುಕಿನ ಶಿಸ್ತು, ನಿಯಮ, ನಿಷೇಧಗಳು ಹೊಂದಿಕೆ ಆಗುವುದಿಲ್ಲ. ಕಾರ್ಲ್‌ಮಾರ್ಕ್ಸ್ ಹೇಳುವ ವಿಲೇಜ್ ಈಡಿಯಸಿ ಅವರಲ್ಲಿರುತ್ತದೆ. ಮಾಟ, ಮಂತ್ರಗಳ ಬಗ್ಗೆ ಮೂಢನಂಬಿಕೆ ಇರುತ್ತದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ 18,000 ರೂಪಾಯಿ ಸಂಬಳವಿದ್ದೂ ಬೂಬ ಹೇಳುತ್ತಾನೆ- "ನಾನು ಮನೆಯಲ್ಲಿದ್ದರೆ ಬುಟ್ಟಿ ಮಾರಿ ಪ್ರತಿದಿನವೂ ಎಪ್ಪತ್ತು ರೂಪಾಯಿಗಳನ್ನು ಸಂಪಾದಿಸುತ್ತೇನೆ. ಕಚೇರಿಗೆ ಹೋದರೆ ನನಗೆ ದಿನದಿನವೂ ಹಣ ಕೊಡುತ್ತಾರೆಯೇ? ಆ ಹಣ ಪಡೆಯಲು ತಿಂಗಳಿಡೀ ದುಡಿಯಬೇಕಾಗುತ್ತದೆ." ಬೂಬನ ಈ ತರ್ಕ ಕೇಳಿ ಯಾರಿಗಾದರೂ ಬಿದ್ದು ಬಿದ್ದು ನಗಬೇಕು ಅನ್ನಿಸುತ್ತದೆ. ಪ್ರಕೃತಿಯ ಮಗನಾದ ಅವನಿಗೆ 'ಸಮಾಜ ಕಲ್ಯಾಣ ಇಲಾಖೆ'ಯಲ್ಲಿ ಶಿಸ್ತಿನಿಂದ ಕೆಲಸ ಮಾಡುವುದೇ ಅಸಂಬದ್ಧ ಅನ್ನಿಸುತ್ತಿರುತ್ತದೆ. ಅವನಿಗೆ ಹೆಂಡತಿ 'ಬೋರು' ಮತ್ತು ನಾಲ್ಕಾರು ಪ್ರೇಯಸಿಯರು ಇರುತ್ತಾರೆ. ಆ ಬಗ್ಗೆ ಅವನಿಗೆ ಯಾವ ಅಪರಾಧ ಪ್ರಜ್ಞೆಯೂ ಇರುವುದಿಲ್ಲ. ಖಾಸಗಿ ಆಸ್ತಿಯ ಪರಿಕಲ್ಪನೆಯೂ ಇಲ್ಲದ ಅವನು ಎಂಟು ಎಕರೆ ಜಾಗವನ್ನು ಬಿಟ್ಟು ನಿಟ್ಟೆಯಲ್ಲಿ ಐದು ಸೆಂಟ್ಸ್ ಜಾಗದಲ್ಲಿ ಮನೆ ಕಟ್ಟಿಕೊಂಡಿರುತ್ತಾನೆ. ಅದೇರೀತಿ ವರ್ಣರಂಜಿತ ಜೀವನ ನಡೆಸುವ ಬೂಬ ಕೊನೆಗೆ ಹೃದಯಾಘಾತದಿಂದ ಸಾಯುತ್ತಾನೆ. ಬೂಬಣ್ಣನಲ್ಲಿ ಅವನದೇ ಆದ ನಿಯತ್ತು ಇದೆ, ಮೂಢನಂಬಿಕೆ ಇದೆ, ಜೀವನೋತ್ಸಾಹವಿದೆ; ಮುಗ್ಧತೆ, ಮೂರ್ಖತನಗಳೂ ಇವೆ. ಹೀಗೆ ದಲಿತನೊಬ್ಬನ ವರ್ಣರಂಜಿತ ಜೀವನವನ್ನು ಹಿಡಿದಿಟ್ಟಿರುವ ಅದ್ಭುತ ಕತೆ ಇದು.

ನಾಲ್ಕನೇ ಕತೆ- 'ಬೇಟೆ'. ನನ್ನ ಪ್ರಕಾರ ಈ ಸಂಕಲನದ ಅತ್ಯುತ್ತಮ ಕತೆ ಇದು.

ಗಂಡ ಕೊಗ್ಗ, ಹೆಂಡತಿ ತುಂಬೆ ಮತ್ತು ಮಗಳು ಅಕ್ಕಣಿ- ಈ ಮೂರು ಜನರಿಗೆ ಸಂಬಂಧಪಟ್ಟ ಕತೆ ಇದು. ಕೊಗ್ಗ ತನಗರಿವಿಲ್ಲದೆಯೇ ಕೂಕ್ರ ಇಟ್ಟ ಉರುಳಿಗೆ ಬಿದ್ದ ಕಾಡು ಹಂದಿಯನ್ನು ಕೊಂದು ಸ್ವಲ್ಪ ತಾನಿಟ್ಟುಕೊಂಡು, ಉಳಿದಿದ್ದನ್ನು ಒಗ್ಗಿ ಪರ್ಬುಗಳಿಗೆ ಮಾರಿದ್ದ. ಈ ಸತ್ಯ ತಿಳಿದಿರದ ಕೂಕ್ರ ಸಿಟ್ಟಿನಿಂದ ಇನ್ನೊಬ್ಬ ವ್ಯಕ್ತಿ ದುಗ್ಗನಿಗೆ "ನೀನೇ ನಾನು ಉರುಳು ಹಾಕಿ ಹಿಡಿದ ಹಂದಿಯನ್ನು ಕದ್ದದ್ದು" ಎಂದು ಆರೋಪಿಸಿ ಬೈತಾನೆ. ಆಗ ದುಗ್ಗ "ನಾನು ಕದ್ದದ್ದು ಹೌದಾದರೆ ನನಗೆ ಮಂಜುನಾಥನ ಆಣೆ, ಇಲ್ಲದಿದ್ದರೆ ಆ ಆಣೆ ಕದ್ದವರಿಗೆ."

ಕರಾವಳಿ ಜಿಲ್ಲೆಗಳಲ್ಲಿ ಧರ್ಮಸ್ಥಳದ ಮಂಜುನಾಥ ಬಡವರು ಮತ್ತು ದಲಿತರನ್ನು ಶೋಷಿಸುವುದು ಈ ರೀತಿಯ ಆಣೆ ಭಾಷೆಗಳ ಮೂಲಕ. ಇದೊಂದು ದೊಡ್ಡ ಮೂಢನಂಬಿಕೆ. ವಾಸ್ತವದಾಗಿ ನಿರಪರಾಧಿಯಾದ ಕೊಗ್ಗ ಮಂಜುನಾಥನ ಆಣೆಗೆ ಹೆದರಿ... ಹಾಸಿಗೆ ಹಿಡಿದು ಸಾಯುವಂತಾಗುತ್ತಾನೆ.

ತನ್ನ ಗಂಡನಿಗೆ ಏನೋ ಕಾಯಿಲೆ ಆಗಿದೆ ಎಂದು ನಿಜಸಂಗತಿ ತಿಳಿದಿರದ ತುಂಬೆ... ಸಮಸ್ಯೆ ಪರಿಹಾರಕ್ಕಾಗಿ ಮೊದಲಿಗೆ ವಾಸುದೇವ ಭಟ್ಟರ ಹತ್ತಿರ ನಂತರ ಕನಪಾಡಿ ಗುತ್ತಿನ ಕರಿಯ ಶೆಟ್ಟಿಯ ಬಳಿ ಸಹಾಯಕ್ಕಾಗಿ ಹೋದಾಗ ಅವರು ಈ ದಲಿತ ಬಡವೆಯ ಅಸಹಾಯಕತೆ ಮತ್ತು ಮುಗ್ಧತೆಯನ್ನು ಉಪಯೋಗಿಸಿ ಕೊಂಡು ಶೋಷಿಸುತ್ತಾರೆ.

ವಾಸುಭಟ್ಟ- "ಅದು ಸಾಮಾನ್ಯ ಹಂದಿಯಲ್ಲ, ಉರುಂದರ ಪಂಜುರ್ಲಿಯ ಸವಾರಿಯ ಹಂದಿ... ಅದನ್ನು ಕೊಂದು ತಿಂದ ನಿಮಗೆ ದೋಷ ಬಂದೇ ಬರುತ್ತದೆ" ಎಂದು ಹೆದರಿಸಿ, ದೋಷ ಪರಿಹಾರಕ್ಕಾಗಿ ಒಂದು ಸಾವಿರ ರೂಪಾಯಿ ತರಲು ಹೇಳುತ್ತಾನೆ. ಮೂರು ಹೊತ್ತು ಊಟಕ್ಕೂ ಗತಿಯಿಲ್ಲದ ದಲಿತ ಮಹಿಳೆ ತುಂಬೆ ಕನಪಾಡಿ ಗುತ್ತಿನ ಕರಿಯ ಶೆಟ್ಟರ ಹತ್ತಿರ ಹಣ ಸಾಲ ಕೇಳಲು ಹೋದಾಗ ಅವರು- "ಅಷ್ಟು ಹಣ ಕೊಡಬೇಕಾದರೆ ಮನೆ ಮತ್ತು ಮನೆ ಇರುವ ಜಾಗವನ್ನು ಅಡವಿಡಬೇಕಾಗುತ್ತದೆ" ಎಂದು ಹೇಳುತ್ತಾರೆ. ತನ್ನ ಗಂಡನ ಕಾಯಿಲೆ ವಾಸಿಯಾಗಬೇಕೆಂಬ ಆತಂಕದಲ್ಲಿ ಹಾಗೇ ಆಗಲಿ ಎಂದು ಶೆಟ್ಟಿ ನೀಡಿದ ಕಾಗದ ಪತ್ರಕ್ಕೆ ಹೆಬ್ಬೆಟ್ಟು ಒತ್ತುತ್ತಾಳೆ.

ನೋಡಿ! ಹೇಗೆ ದಲಿತರನ್ನು ಧರ್ಮಸ್ಥಳದ ಮಂಜುನಾಥ, ಊರಿನ ವಾಸುದೇವ ಭಟ್ಟ ಮತ್ತು ಕನಪಾಡಿ ಗುತ್ತಿನ ಕರಿಯ ಶೆಟ್ಟಿ- ನಾಜೂಕಾಗಿ ಶೋಷಿಸುತ್ತಾರೆ!

ಈ ಕತೆ ನಿಜಕ್ಕೂ ಪ್ರಾತಿನಿಧಿಕ. ಹಳ್ಳಿಗಳಲ್ಲಿ ದಲಿತರ ಮತ್ತು ಬಡವರ ಶೋಷಣೆ ನಡೆಯುವುದು ಈ ರೀತಿಯೇ! ಈ ಕತೆಯನ್ನು ಆಧಾರವಾಗಿ ಇಟ್ಟುಕೊಂಡು 'ಮೂಢನಂಬಿಕೆ' ವಿರೋಧದ ಆಂದೋಳನವನ್ನು ನಡೆಸಬಹುದು.

ಮುಂದೆ ಅದೇ ವಾಸುಭಟ್ಟ ತುಂಬೆಯಿಂದ ಮತ್ತೆ ಐನೂರು ರೂಪಾಯಿ ದೋಚುತ್ತಾನೆ. ಕರಿಯ ಶೆಟ್ಟಿ ತುಂಬೆಯ ಮಗಳು ಅಕ್ಕಣಿಯ ಅತ್ಯಾಚಾರ ಮಾಡುತ್ತಾನೆ. ತುಂಬೆ ಹೋರಿಯೊಂದರ ತಿವಿತಕ್ಕೆ ಬಲಿಯಾದರೆ, ಗಂಡ ಕೊಗ್ಗ ಧರ್ಮಸ್ಥಳದ ಮಂಜುನಾಥನ ಭಯಕ್ಕೆ ಬಲಿಯಾಗುತ್ತಾನೆ. ಮಗಳು ಅಕ್ಕಣಿ ಕರಿಯ ಶೆಟ್ಟಿಯ ಕಾಮತೃಷೆಗೆ ಬಲಿಯಾಗಿ, ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.


ಈ ಕತೆಯ ಶೀರ್ಷಿಕೆ 'ಬೇಟೆ' ತುಂಬಾ ಅರ್ಥಪೂರ್ಣವಾಗಿದೆ. ಧರ್ಮಸ್ಥಳದ ಮಂಜುನಾಥ ತನ್ನ ಆಣೆಭಾಷೆಗಳ ಮೂಢನಂಬಿಕೆಯ ಮೂಲಕ ಕೊಗ್ಗನ ಬೇಟೆ ಆಡುತ್ತಾನೆ. ವಾಸುದೇವ ಭಟ್ಟ- ತನ್ನ ಪುರೋಹಿತಶಾಹಿಯ ಸುಳ್ಳು ಮಾತುಗಳ ಮೂಲಕ ತುಂಬೆಯ ಬೇಟೆ ಆಡುತ್ತಾನೆ. ಕನಪಾಡಿ ಗುತ್ತಿನ ಕರಿಯಶೆಟ್ಟಿ ಹಳ್ಳಿಗಳಲ್ಲಿ ಈಗಲೂ ಉಳಿದುಕೊಂಡಿರುವ ಪಾಳೇಗಾರಿ ವ್ಯವಸ್ಥೆಯ ಪ್ರತಿನಿಧಿ. ಅವನು ತನ್ನ ಪಿತೂರಿಯ ಮೂಲಕ ಅಕ್ಕಣಿಯನ್ನು ಬೇಟೆಯಾಡುವುದು ಮಾತ್ರವಲ್ಲ, ದಲಿತ ಕುಟುಂಬದ ಎಲ್ಲರೂ ಸತ್ತ ಮೇಲೆ ಅವರ ಮನೆಯ ಜಾಗವನ್ನೇ ಲಪಟಾಯಿಸುತ್ತಾನೆ.


ಕ್ರೂರ ವ್ಯಂಗ್ಯವೇನೆಂದರೆ- ಕರಿಯ ಶೆಟ್ಟಿಯ ಕ್ರೌರ್ಯ ಯಾರಿಗೂ ಗೊತ್ತಾಗುವುದೇ ಇಲ್ಲ, ಅವನು ಸುಳ್ಳು ಹೇಳುತ್ತಾನೆ- "ಪಾಪ ಅವರು ಹಜಮುಡಿಯಿಂದ ನಿರ್ಗತಿಕರಾಗಿ ಇಲ್ಲಿಗೆ ಬಂದಿದ್ದರು. ನಾನೇ ನನ್ನ ಸ್ವಂತ ಹಣದಿಂದ ಜಾಗವನ್ನು ಖರೀದಿ ಮಾಡಿ, ಅದನ್ನು ಅವರ ಹೆಸರಿಗೆ ಮಾಡಿಸಿ, ಅದರಲ್ಲಿ ಮನೆ ಕಟ್ಟಿ ಕೊಟ್ಟಿದ್ದೆ. ಇದರಿಂದ ಸಂತೋಷಗೊಂಡು ಅವರು, ತಮ್ಮ ಜಾಗದ ಹಕ್ಕುಪತ್ರವನ್ನು ನನ್ನಲ್ಲಿ ಇಟ್ಟುಕೊಳ್ಳಲು ಕೊಟ್ಟಿದ್ದಾರೆ" ಎಂದು ಹೇಳಿ ತುಂಬೆ ಒಂದು ಸಾವಿರ ರೂಪಾಯಿಗೆ ಅಡವಿಟ್ಟ ಜಾಗದ ಹಕ್ಕುಪತ್ರವನ್ನು ತಂದು ಬೊಗ್ಗುವಿಗೆ ತೋರಿಸುತ್ತಾನೆ. ಎಲ್ಲರೂ ಶೆಟ್ಟರ ಉದಾರತೆಯನ್ನು ಹೊಗಳುತ್ತಾರೆ.

ಈ ಕತೆಯಲ್ಲಿ ಬರುವ ಮೂರು ಖಳನಾಯಕರು- ಮಂಜುನಾಥ, ವಾಸುಭಟ್ಟ ಮತ್ತು ಕರಿಯ ಶೆಟ್ಟಿ. ಕರಾವಳಿ ಜಿಲ್ಲೆಗಳಲ್ಲಿರುವ ಸಾಂಸ್ಕೃತಿಕ, ಆರ್ಥಿಕ ಮತ್ತು ಸಾಮಾಜಿಕ ಶೋಷಣೆಯನ್ನು ಪ್ರತಿನಿಧಿಸುತ್ತಾರೆ. ಈ ಮೂವರು ಖಳನಾಯಕರ ಶೋಷಣೆಗೆ ಒಳಗಾಗುತ್ತಿರುವವರು ಇಲ್ಲಿರುವ ಬಡವರು ಮತ್ತು ದಲಿತರು.

ಹೀಗೆ- 'ಮಸುಮ' ಅವರ ಈ ನಾಲ್ಕು ಕತೆಗಳು ಅವರ ದಲಿತ ಸಂವೇದನೆಯ ಜ್ವಲಂತ ಕೃತಿಗಳು ಎಂದು ನಿಸ್ಸಂಶಯವಾಗಿ ಹೇಳಬಹುದು.

■ ಡಾ. ತುಯವದನ ಮೂಡುಸಗ್ರಿ,
ಕುಂದಾಪುರ





ವಿಜ್ಞಾನದ ಹಾದಿಯಲ್ಲಿ ಕ್ರೈಮ್ ಮತ್ತು ಪನಿಶ್‌ಮೆಂಟುಗ

ಆಧುನಿಕ ಸಮಾಜದಲ್ಲಿ ವಿದ್ಯೆಯೆಂಬುದು ಸಕಲ ಸೌಭಾಗ್ಯವನ್ನೂ ಕರಣಿಸುವ ಮಾರ್ಗ. ಅದಕ್ಕೆಂದೇ ಹುಟ್ಟಿಕೊಂಡ ಸಂಸ್ಥೆಗಳನ್ನು ಆಲಯಗಳೆಂದೂ ಕರೆದು ಅವುಗಳ ಮೂಲಕ 'ಸತ್ಯದರ್ಶನ'ವನ್ನು ಸಾಧ್ಯಮಾಡುವ ಪ್ರಯೋಗಗಳು ನಡೆಯುತ್ತಿವೆ. ಎಷ್ಟರಮಟ್ಟಿಗೆ ಇದು ಸಾಧ್ಯವಾಗಿದೆಯೋ, ಅಂತೂ ವಿದ್ಯೆಯನ್ನು ಸೃಷ್ಟಿಸುವ ಮತ್ತು ಕಲಿಸುವ ಆಲಯಗಳೆಂದೇ ವಿಶ್ವವಿದ್ಯಾಲಯಗಳು ಆರಂಭವಾಗಿವೆ. ನಮ್ಮ ರಾಜ್ಯದಲ್ಲಿ ಸುಮಾರು ನಲವತ್ತೈದು ವಿಶ್ವವಿದ್ಯಾಲಯಗಳು ಕಾರ್ಯನಿರತವಾಗಿವೆ. ಇವುಗಳಲ್ಲಿ ಕೇಂದ್ರೀಯ ಸಂಸ್ಥೆಗಳೂ, ಡೀಮ್ಡ್ ವಿಶ್ವವಿದ್ಯಾಲಯಗಳೂ, ಖಾಸಗಿ ಸಂಸ್ಥೆಗಳೂ ಸೇರಿವೆ.

ಇತ್ತೀಚೆಗೆ ಹೆಚ್ಚುತ್ತಿರುವ ವಿಶ್ವವಿದ್ಯಾಲಯಗಳು ಸರ್ಕಾರಕ್ಕೆ ಲೆಕ್ಕ ಕೊಟ್ಟಿಲ್ಲವೆಂದೋ, ಕುಲಪತಿ ಸ್ಥಾನಗಳಿಗೆ ಪೈಪೋಟಿಗೋ ಅಥವಾ ಸಂಶೋಧನಾ ಪ್ರಬಂಧಗಳ ಕಾಪಿ ಮಾಡಿದ್ದಕ್ಕೋ, ಇವ್ಯಾವುವೂ ಅಲ್ಲದಿದ್ದರೆ ಜಾತಿಕಾರಣಕ್ಕೆ, ಮತ್ಯಾವುದೋ ಶೋಷಣೆಯ ಸಂಬಂಧದ ಸುದ್ದಿ ಮಾಡುತ್ತಿರುತ್ತವೆ. ಆದರೆ ವಿದ್ಯೆಯನ್ನು ಸೃಷ್ಟಿಸುವಂತಹ ಶ್ರೇಷ್ಠವಾದ ಕಾರಣದ ಜತೆಗೆ ವಿವಾದರಹಿತ ವಾತಾವರಣವೂ ಸೇರಿಕೊಂಡು ಹಾಗೂ ಅನ್ವೇಷಿತ ಮಾಹಿತಿಯೊಡನೆ ಸುದ್ದಿಯಾಗುವಂತಿದ್ದರೆ ಸಂತಸದಿಂದ ಹಂಚಿಕೊಳ್ಳಬಹುದಿತ್ತು. ಆದರೆ ಹಾಗಾಗದಿರುವುದು ದುರಾದೃಷ್ಟವೇ ಸರಿ.

ಇಂತಹ ಸಂದರ್ಭದಲ್ಲಿ ಅತ್ಯಂತ ಹಳೆಯ ವಿಶ್ವವಿದ್ಯಾಲಯಗಳಲ್ಲಿ ಒಂದಾದ ಹಾಗೂ ಇಂದಿಗೂ ನಮ್ಮ ದೇಶದ ಯಾವುದೇ ವಿಶ್ವವಿದ್ಯಾಲಯಕ್ಕಿಂತಲೂ ಶ್ರೇಷ್ಠತೆಯನ್ನು ಕಾಪಾಡಿಕೊಂಡಿರುವ ವಿಶ್ವವಿದ್ಯಾಲಯ ನೆನಪಾಗುತ್ತಿದೆ. ಇದು ಹಲವಾರು ಕಾರಣಗಳಲ್ಲಿ ಮುಖ್ಯವಾಗಿ ಇಂದಿನ ವಿಶ್ವವಿದ್ಯಾಲಯಗಳ ಸಂಶೋಧನೆ, ರಾಜಕಾರಣ, ಕಲಿಕೆಯ ಸ್ವರ್ಗ ಎಲ್ಲವನ್ನೂ ವಿಭಿನ್ನ ರೀತಿಯಲ್ಲಿ ಕೊಟ್ಟ ವಿಶ್ವವಿದ್ಯಾಲಯ, ಜತೆಗೆ ಇಂದಿಗೂ ತನ್ನ ವೈಶಿಷ್ಟವನ್ನು ಉಳಿಸಿಕೊಂಡಿದೆ. ಆಧುನಿಕ ವಿಜ್ಞಾನವು ಜಗತ್ತಿಗೆ ಮೊಟ್ಟ ಮೊದಲ 'ಸ್ವರ್ಗ'ದ ದರ್ಶನವನ್ನು ಆಕಾಶಕಾಯಗಳ ಕಡೆಗೆ ತಿರುಗಿಸಿ ಅದಕ್ಕೊಂದು ಮಹತ್ವವನ್ನು ಕೊಟ್ಟ ಕೇಂದ್ರ ಇದು. ಅದೇ ಇಟಲಿಯ ಪಾಡುವ ವಿಶ್ವವಿದ್ಯಾಲಯ.

ವಿಜ್ಞಾನದ ಆರಂಭಿಕ ದಿನಗಳಿಂದಲೂ ತಾರಾಪಟ್ಟದ ವಿಜ್ಞಾನಿ ಗೆಲಿಲಿಯೋ ಗೆಲಿಲಿ. ಇವರು ಸುಮಾರು 18 ವರ್ಷ ಕೆಲಸ ಮಾಡಿದ ಸಂಸ್ಥೆ 'ಪಾಡುವ ವಿಶ್ವವಿದ್ಯಾಲಯ'. ಪಾಡುವ ವಿಶ್ವವಿದ್ಯಾಲಯ ಇವತ್ತಿಗೂ ಜಗತ್ತಿನ ಮೊದಲ 200 ಶ್ರೇಷ್ಠ ವಿಶ್ವವಿದ್ಯಾಲಯಗಳ ಸಾಲಿನಲ್ಲಿದೆ. ನಮ್ಮ ದೇಶದ ಯಾವುದೇ ಸಂಸ್ಥೆ ವಿಶ್ವವಿದ್ಯಾಲಯ ಇನ್ನೂ 300ರ ರ್‍ಯಾಂಕ್ ಹತ್ತಿರದ ಸಂಸ್ಥೆಗಳೇ ಆಗಿವೆ. 1222ರಲ್ಲಿ ಆರಂಭಗೊಂಡು ಇವತ್ತಿನವರೆಗೂ ಶ್ರೇಷ್ಠ ಸಾಲಿನಲ್ಲೇ ಇರುವ ಪಾಡುವ ವಿಶ್ವವಿದ್ಯಾಲಯದಲ್ಲಿ ಮೊಟ್ಟಮೊದಲ ಶೈಕ್ಷಣಿಕ ಸಸ್ಯೋದ್ಯಾನವನ್ನೂ ಹಾಗೂ ವೈದ್ಯಕೀಯ ಸರ್ಜರಿ ಪ್ರಯೋಗಾಲಯವನ್ನು ಹೊಂದಿತ್ತು. ರಕ್ತಪರಿಚಲನೆಯನ್ನು, ಆ ಮೂಲಕ ಹೃದಯದ ಚಟುವಟಿಕೆಗಳ ಮೊಟ್ಟ ಮೊದಲ ಅಧ್ಯಯನವನ್ನು ಮಾಡಿದ ವಿಲಿಯಂ ಹಾರ್ವೆ ಓದಿ ಕೆಲಸ ಮಾಡಿದ ವಿಶ್ವವಿದ್ಯಾಲಯ ಕೂಡ ಇದೇ. ಇಲ್ಲಿಯೇ ಗೆಲಿಲಿಯೋ ಸುಮಾರು 1592ರಿಂದ 1610ರವರೆಗೂ ಗಣಿತ ವಿಭಾಗದ ಮುಖ್ಯಸ್ಥರಾಗಿ ದುಡಿದರು. ಅನೇಕ ವೈಜ್ಞಾನಿಕ ತಳಹದಿಗಳನ್ನು ನಿರ್ಮಿಸಿದರು. ಬ್ರಿಟನ್ನಿಗೂ ಮೊದಲೇ ವೈದ್ಯಕೀಯ ಅಧ್ಯಯನವನ್ನು ಆರಂಭಿಸಿದ ಹಿರಿಮೆ ಇಲ್ಲಿಯದು. ಪ್ರಸ್ತುತ ಶಾಂಘೈ ರಾಂಕಿಂಗ್ ಪಟ್ಟಿಯಲ್ಲಿ 100-200ರ ನಡುವೆ ಸ್ಥಾನ ಗಿಟ್ಟಿಸಿಕೊಂಡಿದೆ. ಭಾರತದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಕೂಡ ಅಷ್ಟರೊಳಗಿಲ್ಲ, ಇದರ ಸ್ಥಾನ 200-300ರ ಪಟ್ಟಿಯಲ್ಲಿದೆ. ಇದಕ್ಕೂ ಹೆಚ್ಚಾಗಿ ಗಣಿತಶಾಸ್ತ್ರ ಮತ್ತು ಮೂಲ ವಿಜ್ಞಾನಗಳ ಅಧ್ಯಯನದಲ್ಲಿ ಮೊದಲ 100ರ ಒಳಗಿನ ಪಟ್ಟಿಯಲ್ಲಿರುವ ವಿದ್ಯಾಲಯ. ಸುಮಾರು 792 ವರ್ಷಗಳ ಹಿಂದೆಯೇ ಆರಂಭವಾದ ವಿಶ್ವವಿದ್ಯಾಲಯಕ್ಕೆ -ಈಗಿನ ಆಧುನಿಕ ಜಗತ್ತಿನ ಯಾವುದೇ ಆಧುನಿಕ ಸವಲತ್ತುಗಳು ಸುಲಭವಾಗಿ ಸಿಗುವ ಸಂದರ್ಭದಲ್ಲಿ -ಸರಿಸಮನಾಗಿ ಕಟ್ಟದ ವೈಜ್ಞಾನಿಕ ಪರಿಸ್ಥಿತಿ ನಮ್ಮ ದೇಶದ್ದು. ಪಾಡುವ ವಿಶ್ವವಿದ್ಯಾಲಯ ಆರಂಭವಾದದ್ದು ಸೋಜಿಗವೇ.

ಇಟಲಿಯ ಮೊದಲ ವಿಶ್ವವಿದ್ಯಾಲಯವಾದ ಬೊಲೊಗ್ನಾ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದ ಕೆಲವು ವಿದ್ವಾಂಸರು ಮತ್ತು ಅಧ್ಯಯನ ಮಾಡುತ್ತಿದ್ದ ಕೆಲವು ವಿದ್ಯಾರ್ಥಿಗಳು ಉತ್ತಮವಾದ ಹಾಗೂ ಸ್ವತಂತ್ರವಾದ ಶೈಕ್ಷಣಿಕ ವಾತಾವರಣಕ್ಕಾಗಿ ಅಪೇಕ್ಷಿಸುತ್ತಿದ್ದರು. ಅದಕ್ಕಾಗಿ ಅಲ್ಲಿಂದ ಹೊರಬಂದು ಪಾಡುವ ವಿಶ್ವವಿದ್ಯಾಲಯವನ್ನು ಆರಂಭಿಸಿದರು. ಹಾಗೆ ಉತ್ತಮವಾದದ್ದನ್ನು ಕೊಡುವ ಕಾರಣದಿಂದ ಇಂತಹ ಅತ್ಯುತ್ತಮ ಸಂಸ್ಥೆ ಹುಟ್ಟಿತ್ತು, ಅದಕ್ಕೆ ವೈರುಧ್ಯವಾದ ಕಾರಣಗಳನ್ನು ನಮ್ಮಲ್ಲಿ ಹುಡುಕಬಹುದು. ಹಣ-ನೆಲ ಇದ್ದವರು ವಿದ್ಯಾಲಯಗಳನ್ನು ನಿರ್ಮಿಸುತ್ತಾರೆ. ಉದ್ದೇಶವೂ ಕೇವಲ ಹಣ ಮಾಡುವುದೇ ಆಗಿರುತ್ತದೆ. ಆದರೆ ಹುಡುಕಾಡುವಂತಹ ಸ್ವತಂತ್ರ ವಾತಾವರಣದ ವಿಶ್ವವಿದ್ಯಾಲಯದಲ್ಲಿ ಗೆಲಿಲಿಯೋನಂತಹವರು, ವಿಲಿಯಂ ಹಾರ್ವೆಯಂತವರೂ ಇರಲು ಸಾಧ್ಯವಾಯಿತು. ಅನೇಕ ಮೂಲ ವಿಜ್ಞಾನದ ತಳಹದಿಗೆ ಕಾರಣವಾಗಿ ಅದರ ಬೆಳವಣಿಗೆಯೂ ಸಾಧ್ಯವಾಯಿತು. ಸ್ವತಂತ್ರವಾದ ಶೈಕ್ಷಣಿಕ ಪರಿಸರವನ್ನು ಆ ಕಾಲದಲ್ಲೇ ಊಹಿಸಿದ್ದ ಮಾದರಿ ಮಾತ್ರ ತೀರ ಆಶ್ಚರ್ಯವಾದದ್ದು. ಅಷ್ಟೇ ಮಾತ್ರವಲ್ಲ ಇಂದಿಗೂ ಹಾಗೇ ಉಳಿಸಿಕೊಂಡ ಬಗೆಯಂತೂ ಉತ್ಪ್ರೇಕ್ಷೆಯಲ್ಲ. ಏಕೆಂದರೆ ತೀರ ಇತ್ತೀಚಿನ ಕಂಪ್ಯೂಟರ್ ಯುಗದ ನವೀನ 'ಸರ್ಚ್ ಇಂಜಿನ್'ಗಳ ಜನಕ ಮಸ್ಸಿಮೋ ಮಾರ್ಕೀಯೋರಿ ಕೂಡ ಇಲ್ಲಿಯೇ ಇದ್ದಾರೆ. ಬೆರಳ ತುದಿಯಲ್ಲಿ ನಮಗೆ



ಹಂಪಿಯ ಗೋಪುರ(ಎಡಕ್ಕೆ), ರಂದ್ರ(ಬಲಕ್ಕೆ ಮೇಲೆ) ನೆರಳು(ಬಲಕ್ಕೆ ಕೆಳಗೆ).


ಮಾಹಿತಿ ಸಿಗುವ ಅಂತರ್ಜಾಲದ ಹುಡುಕುತಾಣಗಳಲ್ಲಿ ಪ್ರಮುಖವಾದ 'ಹೈಪರ್ ಸರ್ಚ್'ನ್ನು ಇಲ್ಲಿಂದಲೇ ಅನ್ವೇಷಿಸಿದವರು ಮಸ್ಸಿಮೋ. ಗೆಲಿಲಿಯೋನಂತೆ ಇವರೂ ಕೂಡ ಒಬ್ಬ ಗಣಿತಶಾಸ್ತ್ರಜ್ಞ. ಹೀಗೆ ಗೆಲಿಲಿಯೋ ಕಾಲದಿಂದಲೂ ಗಣಿತ ಮತ್ತು ಮೂಲ ವಿಜ್ಞಾನಗಳ ಅಧ್ಯಯನದ ಆಶಯಕ್ಕೆ ಬೆಂಬಲವಾಗಿ ನಿಂತ ಸನ್ನಿವೇಶವೂ ಅಷ್ಟು ಸುಲಭವಾಗಿ ದಕ್ಕಿದ್ದೇನಲ್ಲ. ಏಕೆಂದರೆ ಅದಕ್ಕೆ ಗೆಲಿಲಿಯೊ ಪಟ್ಟ ಪಾಡೇ ಸಾಕ್ಷಿ.

ಗೆಲಿಲಿಯೋನ ಕ್ರೈಮ್ ಮತ್ತು ಪನಿಶ್‌ಮೆಂಟ್

ಗೆಲಿಲಿಯೋ ಮೂಲತಃ ವೈದ್ಯಶಾಸ್ತ್ರದ ವಿದ್ಯಾರ್ಥಿ. ಅವರ ಅಪ್ಪ ಆತನನ್ನು ಡಾಕ್ಟರ್ ಆಗಬೇಕೆಂದು ಇಚ್ಛಿಸಿದ್ದರು. ಅದಕ್ಕೆಂದೇ ಪಿಸಾ ವಿಶ್ವವಿದ್ಯಾಲಯಕ್ಕೆ ವೈದ್ಯಕೀಯ ಅಧ್ಯಯನಕ್ಕೆಂದೇ ಸೇರಿಸಿದ್ದರು. ಆದರೆ ಗೆಲಿಲಿಯೋಗೆ ಗಣಿತದಲ್ಲಿ ವಿಪರೀತ ಆಸಕ್ತಿ. ಕದ್ದುಮುಚ್ಚಿ ಗಣಿತವನ್ನು ಅಧ್ಯಯನ ಮಾಡಿದವರು ಗೆಲಿಲಿಯೋ. ಎಷ್ಟೆಂದರೆ ಅದರಲ್ಲಿಯೇ ವಿದ್ವತ್ತನ್ನು ಸಾಧಿಸುವಷ್ಟು. ಅವರ ಛಲ ಮಾತ್ರ ಅಪಾರವಾದದ್ದು. ಗಣಿತವನ್ನು ಕಲಿತದ್ದು ಮಾತ್ರವಲ್ಲ, ಭೌತಶಾಸ್ತ್ರದಲ್ಲಿ ಗಣಿತದ ಅನ್ವಯವನ್ನು ಬೆಂಬಲಿಸಿದ ಮೊದಲಿಗರಲ್ಲಿ ಗೆಲಿಲಿಯೋ ಪ್ರಮುಖರು. ಇವರ ವಿದ್ವತ್ ಕಾರಣದಿಂದಲೇ ಪಾಡುವ ವಿಶ್ವವಿದ್ಯಾಲಯದಿಂದ ಕರೆ ಬಂತು. ಅದೂ ಅಪ್ಪಟ ಗಣಿತಶಾಸ್ತ್ರದ ಅಧ್ಯಾಪನಕ್ಕೆ ಅಲ್ಲಿನ ಗಣಿತಶಾಸ್ತ್ರದ ಮುಖ್ಯಸ್ಥರಾಗಿ ಸೇರಿದರು. ಗೆಲಿಲಿಯೋ ವಿಚಿತ್ರ ಸ್ವಭಾವದ ವ್ಯಕ್ತಿಯಾಗಿದ್ದರು. ತೀರ ಹಠವಾದಿಯಾದ ಹಾಗೂ ಪ್ರಾಯೋಗಿಕವಾಗಿ ಎಲ್ಲವನ್ನೂ ವಿಚಾರ ಮಾಡುವ ಮನೋಭಾವದವರಾಗಿದ್ದರು. ಅದಕ್ಕಾಗಿ ವಿದ್ಯಾರ್ಥಿಗಳೊಡನೆ ಮುಕ್ತವಾಗಿ ಬೆರೆಯುವ, ಅನೇಕ ವೈವಿಧ್ಯಮಯ ಸಂಗತಿಗಳನ್ನು ಹಂಚುವ ಮೂಲಕ ಅವರಲ್ಲಿ ಜನಪ್ರಿಯರಾಗಿದ್ದರು. ವಿಜ್ಞಾನವನ್ನು ಪ್ರಯೋಗಗಳಿಗೆ ಒಡ್ಡಿ ಫಲಿತಗಳಿಂದಲೇ ಅದನ್ನು ಒಪ್ಪುವ ವೈಜ್ಞಾನಿಕ ಪದ್ಧತಿಗೆ ತಳಹದಿ ಸಿಕ್ಕಿದ್ದೂ ಇಂತಹ ಸಂಗತಿಗಳಿಂದಲೆ. ಆಗಲೂ ಅನೇಕ ಬಗೆಯ ಹಸ್ತಕ್ಷೇಪಗಳು ಇದ್ದವು. ಆಗ ಮತ್ತೂ ಈಗ ಸಹ ಸಾಮಾನ್ಯ ಜನರ ಸ್ವರ್ಗದ ಕನಸುಗಳಿಗೆ ಧಾರ್ಮಿಕತೆಯ ಧಾರೆ ಎರೆಯುವಲ್ಲಿ ಚರ್ಚುಗಳು, ದೇವಾಲಯಗಳು ಹಾಗೂ ಮಠಗಳ ಕೆಲಸ ಮುಖ್ಯವಾದುದ್ದು. ಅದೇ ರೀತಿ ಅಲ್ಲಿಯೂ ಅದೇ ಪರಿಸರವೇ. ಆ ಕಾಲದಲ್ಲಿ ಭೂಮಿ ಕೇಂದ್ರಿತ ವಿಶ್ವದ ಕಲ್ಪನೆಯೇ ತಿಳಿವಾಗಿತ್ತು, ಅದರ ಸುತ್ತಲೂ ತಿರುಗುವ ಇತರೇ ಆಕಾಶಕಾಯಗಳಾಚೆಯೇ ಸ್ವರ್ಗ ಎನ್ನುವ ಕಲ್ಪನೆಯು ಸಹಜವಾಗಿತ್ತು, ನಮ್ಮ ಸಂಸ್ಕೃತಿಯಲ್ಲೂ ಸ್ವರ್ಗ ಎನ್ನುವುದನ್ನು ಎತ್ತರಕ್ಕೆ ಏರಿಸಿ ಆಗಸದಾಚೆಗೆ ಕೊಂಡೊಯ್ದಿಲ್ಲವೇ? ಹಾಗೆಯೇ! ಅದೇನೋ ಸರಿ ಈ ಸ್ವರ್ಗಕ್ಕೂ ಗೆಲಿಲಿಯೋನ ತಪ್ಪಿಗೂ ಸಂಬಂಧವೇನು?

ಗೆಲಿಲಿಯೋ ಭೂವಿಂಕೇಂದ್ರಿತ ವಿಶ್ವದ ವಿರೋಧಿಯಾಗಿದ್ದರು. ಆದರೆ ಚರ್ಚು ಅದರ ಪರವಾಗಿತ್ತು. ಆಶ್ಚರ್ಯವೆಂದರೆ ಕೊಪರ್ನಿಕಸ್ ಗೆಲಿಲಿಯೋ ಹುಟ್ಟುವ ಸುಮಾರು 21 ವರ್ಷಗಳ ಹಿಂದೆಯೇ ಸೌರಕೇಂದ್ರಿತ ಕಲ್ಪನೆಯನ್ನು ಪ್ರತಿಪಾದಿಸಿದ್ದರು. ಅಷ್ಟೇ ಅಲ್ಲ, ಅದನ್ನು ಪ್ರಕಟಿಸಿದ್ದರು. ಆಗ ಸುಮ್ಮನಿದ್ದ ಚರ್ಚು ಗೆಲಿಲಿಯೋ ಅದರ ಪರವಾಗಿ ಪ್ರತಿಪಾದಿಸುವ ಸಂದರ್ಭಕ್ಕೆ ಅದನ್ನು ತೀವ್ರವಾಗಿ ವಿರೋಧಿಸತೊಡಗಿತ್ತು. ಅದಕ್ಕೆ ಗೆಲಿಲಿಯೋ ಅವರ ಸ್ವತಂತ್ರ ಹಾಗೂ ವೈಚಾರಿಕ ಮನೋಭಾವವೂ ಕಾರಣವಾಗಿತ್ತು. ಮೊದಲೇ ಗೆಲಿಲಿಯೋ ಜನರನ್ನೂ ವಿದ್ಯಾರ್ಥಿಗಳನ್ನೂ ಸೇರಿಸಿಕೊಂಡು ಅನೇಕ ಸಂಗತಿಗಳನ್ನು ಚರ್ಚಿಸುವ ವ್ಯಕ್ತಿಯಾಗಿದ್ದರು. ಅದರ ಜತೆಗೆ ಅವರ ಟೆಲಿಸ್ಕೋಪ್ ಅನ್ವೇಷಣೆಯು ಸೇರಿಕೊಂಡಿತು. ಅದನ್ನು ಬಳಸಿ ಆಗಸದ ಕಡೆಗೆ ತಿರುಗಿಸಿ ಹುಡುಕಾಟ ನಡೆಸುತ್ತಾ ಸ್ವರ್ಗದ ಅನ್ವೇಷಣೆಗೆ ತೊಡಗಿದಂತೆಯೂ ಭಾಸವಾಗಿತ್ತು. ಅಲ್ಲದೆ ಸೂರ್ಯನನ್ನೇ ಕೇಂದ್ರವಾಗಿಟ್ಟು ಅದರ ಸುತ್ತಲೂ ಸುತ್ತುವ ಇತರೇ ಆಕಾಶಕಾಯಗಳ ನಂಬಿಕೆಯೇ ಸ್ವರ್ಗದ ಹಾದಿ ಎನ್ನುವುದು ಚರ್ಚಿಗೆ ನಂಬಲಾರದ ತುತ್ತಾಗಿತ್ತು. ಇದನ್ನು ಹೇಳುತ್ತಲೇ, ಜನಪ್ರಿಯಗೊಳಿಸುತ್ತಲೇ ಟೆಲಿಸ್ಕೋಪನ್ನೂ ಕಂಡುಹಿಡಿದುದಲ್ಲದೆ ಗುರು ಗ್ರಹದ ನಾಲ್ಕು ಉಪಗ್ರಹಗಳನ್ನೂ ಗುರುತಿಸಿ ಮತ್ತಷ್ಟು ಚರ್ಚೆಗೆ ಒಳಗಾದರು. ಇವೆಲ್ಲವೂ ಇನ್ನೇನು ಆಗಸದಾಚೆಯ ಊಹೆಯೂ ಕಂಡೆಬಿಟ್ಟತೇನೋ ಎನ್ನುವಂತೆ ಇವರ ಮೇಲಿನ ಅನುಮಾನ ದಟ್ಟವಾಯಿತು.

ಹಾಗಾಗಿ ಚರ್ಚನ್ನೂ ವಿರೋಧಿಸಿ ವಿಷಯವನ್ನು ಚರ್ಚಿಸುತ್ತಿದ್ದ ಗೆಲಿಲಿಯೋ ವಿಚಾರಣೆಗೆ ಒಳಪಡಿಸಿ ಗೃಹಬಂಧನದಲ್ಲಿರಿಸಿದರು. ಅವರಿಗೆ ಶಿಕ್ಷೆಯ ಬಗೆಗೂ ಕಾರಣಕ್ಕೂ ಚರ್ಚಿನ ದಾಖಲೆಗಳಲ್ಲೂ ಹಾಗೂ ಇತರೆ ದಾಖಲೆಗಳಲ್ಲೂ ವೈರುಧ್ಯಗಳಿವೆ. ಕಾರಣ ಸತ್ಯವನ್ನು ಚರ್ಚು ಎಂದೂ ವಿರೋಧಿಸಿಲ್ಲ ಎಂದೇ ಚರ್ಚಿನ ಪರವಾದ ಹೇಳಿಕೆಗಳೂ ಇವೆ. ಆದರೆ ಗೆಲಿಲಿಯೋ ಶಿಕ್ಷೆಗೆ ಒಳಗಾಗಿ ಮಾನಸಿಕ ಹಿಂಸೆಯನ್ನು ಅನುಭವಿಸಿದ್ದಂತೂ ನಿಜ. ಅಷ್ಟಕ್ಕೆಲ್ಲಾ ಘಾಸಿಗೊಳ್ಳದ ಮನಸ್ಥಿತಿ ಗೆಲಿಲಿಯೋದ್ದು. ನಮ್ಮ ನಂಬಿಕೆಗಳೇನಾದರೂ ಆಗಲಿ, ಆದರೆ ಸತ್ಯವಂತೂ ನಡೆದೇ ನಡೆಯುತ್ತದೆ, ಅದೇರೀತಿ ಭೂಮಿಯೂ ಸೂರ್ಯನ ಸುತ್ತಲೇ ತಿರುಗುತ್ತದೆ ಎಂದೇ ಹೇಳುತ್ತಿದ್ದರು. ವಿಜ್ಞಾನವೂ ಅನೇಕ ಒತ್ತಡಗಳನ್ನು ಅನುಭವಿಸುತ್ತಲೇ, ಅದನ್ನು ಪ್ರತಿಪಾದಿಸುವ ವಿಜ್ಞಾನಿಗಳಿಗೆ ಒತ್ತಡಗಳನ್ನು ಹೇರುತ್ತಲೇ ಇರುವ ಆಡಳಿತಶಾಹಿಯು ಅದರ ಉಪಯೋಗಕ್ಕೆ ಹಾತೊರೆಯುತ್ತದೆ. ಇಂತಹದ್ದೇ ವಿಶಿಷ್ಟವಾದ ಸಂಗತಿಯೊಂದು ಗೆಲಿಲಿಯೋಗೂ ಮೊದಲೂ ನಡೆದಿತ್ತು.



ಹಂಪೆಯ ವಿರೂಪಾಕ್ಷ ದೇವಾಲಯದ ಮುಖ್ಯ ಗೋಪುರದ ನೆರಳು ದೇವಾಲಯದ ಒಳಗೆ ಒಂದು ಕಡೆ ತಲೆಕೆಳಗಾಗಿ ಕಾಣುತ್ತದೆ. (ಚಿತ್ರನೋಡಿ). ಇದೊಂದು ಕುತೂಹಲವೆಂಬಂತೆಯೂ ಜತೆಗೆ ದೈವಿಕತೆ ಮನೋಭಾವಕ್ಕೆ ಬಳಸಿಕೊಂಡ ಆಶ್ಚರ್ಯದಂತೆಯೂ ಉದಾಹರಿಸಬಹುದು. ಈಗೇನೋ ಇದನ್ನು ಪಿನ್ ಹೋಲ್ ಕ್ಯಾಮರದ ಮೂಲಕ ವಿವರಿಸಬಹುದು. ಆದರೆ ಅಲ್ಲಿ ಭೇಟಿ ನೀಡುವ ಅನೇಕ ಜನ ಮೂಗಿನ ಮೇಲೆ ಬೆರಳಿಟ್ಟು ದೈವಲೀಲೆ ಎನ್ನುತ್ತಾ ಹೋಗುವವರಿಗೂ ಕಡಿಮೆಯಿಲ್ಲ. ಸುಮಾರು 1426ರಿಂದ 1446ರ ನಡುವೆ ಹಂಪೆಯನ್ನಾಳಿದ ಪ್ರೌಢದೇವರಾಯ ಈ ಗೋಪುರವನ್ನು ಕಟ್ಟಿಸಿದನೆಂದು ಶಾಸನಗಳು ಹ
ಅಂದರೆ ಸುಮಾರು ಅದೇ ಕಾಲದಲ್ಲಿ ಈ ಗ
ನಿರ್ಮಾಣವಾಗಿರಬಹುದು. ಈ ಪಿನ್ ಹೋಲ್
ಅಥವಾ ಸೂಜಿ ರಂಧ್ರ ಬಿಂಬ ಗ್ರಾಹ
ಕಂಡುಹಿಡಿದವರು ಅಷ್ಟೇನೂ ಪ್ರಚಲಿತವಿಲ್ಲದ
ವಿಜ್ಞಾನಿ ಅಲ್ ಹಜೇನ್. ಗಣಿತ, ಭೌ
ಮುಂತಾದವುಗಳಲ್ಲಿ ಆಸಕ್ತಿಯನ್ನು ಹೊಂದಿದ್ದವ

ಅಲ್ ಹಜೇನ್ ಅವರು ಕ್ರಿಶ 965ರಲ್ಲಿ
ಇರಾಕ್‌ನ ಬಸ್ರಾದಲ್ಲಿ ಜನಿಸಿದರು. 1040ರಲ್ಲಿ ಈ
ಕೈರೋದಲ್ಲಿ ಮರಣ ಹೊಂದಿದರು. 10 -
ಶತಮಾನದ ನಡುವೆ ಜೀವಿಸಿದ್ದ ಇವರ ಅನ್ವೇಷ
ಹೋಲ್ ಕ್ಯಾಮರ. ಇವರಿಗೂ ಗಣಿತದ ಅನ್
ಮೇಲೆ ಅಪಾರವಾದ ಆಸಕ್ತಿ. ಅದಕ್ಕಾಗಿ ಈಜಿ
ಕಾಲದ ದೊರೆ ಇವರನ್ನು ನೈಲ್ ನದಿಯ ಪ್ರ
ನಿರ್ವಹಣೆಗೆ ಉತ್ತರಗಳನ್ನು ಹುಡುಕುವಂತೆ ಒತ್ತಾ
ಅದಕ್ಕಾಗಿಯೇ ಅವರನ್ನು ಗೃಹಬಂಧನಕ್ಕೂ ಒಳಪಡಿ
ಈಗ ನೈಲ್ ನದಿಗೆ ಕಟ್ಟಲಾಗಿರುವ ಅಸ್ವಾನ್
ಪ್ರದೇಶವನ್ನು ಲೆಕ್ಕಾಚಾರಗಳಿಂದ ಗೊತ್ತುಪಡಿಸಿದ್ದು
ಹಜೇನ್. ನೈಲ್ ನದಿಯು ವಿಪರೀತ ಪ್ರ
ಒಳಗಾಗುವುದನ್ನು ಅಣೆಕಟ್ಟು ಕಟ್ಟಿ ನೀರಿನ ಸಂಗ್ರ
ತಪ್ಪಿಸಬಹುದಾದರೂ ಆಗಿನ ಕಾಲದ ಪ್ರಾಯೋಗಿಕ
ಅನುಮಾನಿಸಿ ಅಲ್ ಹಜೇನ್ ಮನೋರೋಗಿ
ವರ್ತಿಸಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು. ದೊರೆ ಸು
ವನೇ, ತನ್ನ ಆಳ್ವಿಕೆಯ ಸುಮಾರು 10 ವರ್ಷಕಾಲ ಅ
ಗೃಹಬಂಧನಕ್ಕೆ ಒಳಪಡಿಸಿ ಪರಿಹಾರವನ್ನು ಕಂಡು
ಕೊಡುವಂತೆ ಒತ್ತಡ ಹೇರಿದ್ದ. ಅದೇ ಸಂದರ್ಭ
ಬಳಸಿಕೊಂಡು ಬಂಧನದಲ್ಲಿದ್ದುಕೊಂಡೇ ಇವತ್ತಿನ
ಶೋಧಗಳಿಗೆ ಮೂಲ ಸರಕನ್ನು ಕೊಟ್ಟ ಪುಸ್ತಕ K
al-Manazir (Book of Optics)
ರಚಿಸಿದರು. ಮುಂದಿನ ದಿನಗಳಲ್ಲಿ ಅಸ್ವಾನ್ ಡ್ಯಾಂ
ಅಲ್ ಹಜೇನ್ ಗಣಿತದ ಅನ್ವಯದ ಆಧಾರದ
ಗೊತ್ತುಪಡಿಸಿದ್ದ ಪ್ರದೇಶದಲ್ಲಿಯೇ ಎನ್ನುವುದು ಬೇರೆ
ಆದರೆ ಬಂಧನದಲ್ಲಿದ್ದ ಅಲ್ ಹಜೇನ್ ಆ ಒತ್ತ
ರಚಿಸಿದ್ದು ಬೆಳಕಿನ ಕುರಿತ ಬಹುಮುಖ್ಯವಾದ

ಮತ್ತೆ ಹಂಪಿ ದೇವಾಲಯದ ಗೋಪುರ
ವಿಚಾರಕ್ಕೆ ಬರೋಣ. 11ನೇ ಶತಮಾನದ ಅ
ಪಿನ್ ಹೋಲ್ ಕ್ಯಾಮರ. ಹಂಪಿಯ ದೇವಾಲ
14-15 ಶತಮಾನದಲ್ಲಿ ಗೋಪುರದ ನಿರ್ಮಾಣ
ಗೋಪುರದ ತಿರುವು ಮುರುವಾದ ನ
ಬೀಳುವಂತಿರುವುದಕ್ಕೆ ಮುಂಚಿನ ಅರಿವಿನ ಬ
ಆಗಿರುವುದರಲ್ಲಿ ಅನುಮಾನವಿಲ್ಲ. ಇದರಲ್ಲಿ ಎರಡು
ತೀರ್ಮಾನಗಳನ್ನು ಮಾಡಬಹುದೇನೋ. ವಿಜಯ
ಅರಸರು ಅರಬ್ಬರೊಂದಿಗೆ ವ್ಯಾಪಾರ ಮತ್ತಿತರ ವಹಿವ
ಹೊಂದಿದ್ದರು. ಹಾಗಾಗಿ ಪಿನ್ ಹೋಲ್ ಕ್ಯಾ
ಅನ್ವೇಷಣೆಯನ್ನು ಬಳಸುವ ಬಗೆಗೆ ತಿಳಿದಿರಬ
ಅಥವಾ ಬೇರಾವುದೋ ವಿನಿಮಯಗಳಿಂದ
ಮಾಹಿತಿಯು ಆ ಕಾಲದ ದೇವಾಲಯ ನಿರ್ಮಾ
ಶಿಲ್ಪಶಾಸ್ತ್ರಜ್ಞರಿಗೆ ತಿಳಿದಿತ್ತು. ಏಕೆಂದರೆ ಇದೇ
ನೆರಳಿನ ವೈವಿಧ್ಯಮಯ ಬಳಕೆಯು ಇತರೇ ಕಡೆಗಳ
ಇದೆ. ಒಂದು ಉದಾಹರಣೆಯೆಂದರೆ ಸ್ವಿಸ್
ಬೊಲಿಂಜಾನದ ಪ್ರಾಚೀನ ಕಟ್ಟಡಗಳಲ್ಲಿಯೂ
ಹೋಲ್ ಕ್ಯಾಮರಾ ಮಾದರಿಯ ನೆರಳಿನ ಬಳ
ಕಾಣಬರುತ್ತದೆ. ಅರಬ್ಬರ ಜೊತೆಗಿನ ವಹಿ
ನೆರಳಿನಾಟದ ವೈಚಿತ್ರ್ಯವನ್ನು ತಿಳಿಯಲು ಕಾರಣವಾಗಿರ
ಈ ಬಗೆಯ ಇತರೇ ಕಟ್ಟಡಗಳು 12ನೆಯ ಶತಮ
ನಂತರದವೇ ಎಂಬುದು ಮಾತ್ರ ಕರಾರುವಾಕ್ಕಾದ ಅಂ

ಇಲ್ಲಿ ಉದಾಹರಿಸಿರುವ ವಿಜ್ಞಾನದ ಹಾದಿ
ಈ ಕ್ರೈಮ್ ಮತ್ತು ಪನಿಶ್‌ಮೆಂಟ್‌ಗಳು
ಸ್ಯಾಂಪಲ್ಲುಗಳಷ್ಟೇ. ವಿಜ್ಞಾನದ ಹಾದಿಯು ಈ ಹ
ವಹಿವಾಟಿನಂತೆ ಬೆಳೆಯಲಿಲ್ಲ. ನಾವಿಂದು ಬೆರಳ ತುದಿ
ಅರಸಬಹುದಾದ ಅದೆಷ್ಟೋ ಸಂಗತಿಗಳು ಹಲ
ಜನರ ಜೀವದ ಜತೆಗೆ ಆಡಿದ ಆಟಗಳಾಗಿರು
ಉಂಟು. ಪಾಡುವಾ ವಿಶ್ವವಿದ್ಯಾಲಯದ ಹಾಗೇ ಶ್ರೆ
ಆಸಕ್ತಿಯ ವಿಶ್ವದ್ಯಾಲಯವನ್ನಾಗಲಿ, ಬಂಧನದಲ್ಲೂ
ಮೂಲ ವೈಜ್ಞಾನಿಕ ಮಾಹಿತಿಯ ಪುಸ್ತಕ ರಚಿಸಿದ
ಹಜೇನ್‌ರಂತಹ ವಿಜ್ಞಾನಿಯನ್ನು ನಮ್ಮೊಳಗೇ ಹುಡುಕು
ಹೇಗೆ? ಈಗಿರುವ ಪರಿಸ್ಥಿತಿಯಲ್ಲಿ ನಿಜವಾದ ವೈ
ಆಸಕ್ತಿಯಿಂದ ನಮ್ಮ ವಿಶ್ವವಿದ್ಯಾಲಯಗಳನ್ನು
ನಿರ್ಧಾರವೇ ಕ್ರೈಮ್ ಮತ್ತು ಅಲ್ಲಿರುವುದೇ ಪನಿಶ್‌ಮ

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ವೈದಿಕರ ಒಡಕುಗಳಲ್ಲಿ ರುದ್ರನ ರೂಪಾಂತರ

...ವೇದದಲ್ಲಿ ರುದ್ರನ ಸ್ಥಾನವು ಅಷ್ಟೇನೂ ಪ್ರಮುಖ ...ದೀ ಋಗ್ವೇದದಲ್ಲಿ ಬರಿಯ ಮೂರು ...ಆತನಿಗಿರಿಸಿದೆ. ಆರ್ಯರೊಡನೆ ಹೋರಾಡಿದ ...ಕಟ್ಟುಗಳು ತಮ್ಮ ಪ್ರತಾಪಗಳನ್ನು ಮೆರೆದಾಗ ... ಸಾಮರ್ಥ್ಯಗಳನ್ನು ಕಡೆಗಣಿಸಲು ಅಥವಾ ...ಮಾಡಲು ಆರ್ಯ ಕವಿಗಳಿಗೆ ಸಾಧ್ಯವಾಗಲಿಲ್ಲ. ...ದಗಳು ಆರ್ಯಮೂಲದ್ದಾಗಿದ್ದರೂ ಅವುಗಳಲ್ಲಿ ...ಲಿನ ಬುಡಕಟ್ಟುಗಳ ನಾಯಕರು ಪ್ರಶಂಸೆಗೊಳ ...ಅಥರ್ವವೇದ ದೈತ್ಯಾರಾಧನೆಗಳ ಬಗ್ಗೆ, ಆಗಿನ ...ಳಲ್ಲಿದ್ದ ಮೌಢ್ಯಾಚರಣೆಗಳ ಬಗ್ಗೆ ಕೆಲವು ...ನ್ನು ಕೊಡುತ್ತದೆ. ಋಗ್ವೇದಕ್ಕಿಂತ ಮುಂದುವರಿದ ...ದು ಕಾಣುತ್ತದೆ. ಇದರಲ್ಲಿನ ಕೆಲವು ಅಂಶಗಳು ...ಗಳಲ್ಲಿ ಮತ್ತು ಬ್ರಾಹ್ಮಣಗಳಲ್ಲಿ ಸಾಮಾನ್ಯವಾಗಿವೆ.

ರುದ್ರ ದೇವರಲ್ಲ

...ದಲ್ಲಿ ಪೂಜೆಗೊಳಗಾಗುತ್ತಿದ್ದದ್ದು ಕಾಲ, ಕಾಮ ...ಭ (ಆಧಾರ). ಇದೇ ಎಲ್ಲಾ ತತ್ವಗಳಿಗಿಂತ ...ದ್ದು ಮತ್ತು ಕಟ್ಟ ಕಡೆಯದ್ದು ಎಂಬಂತಹ ...ವಾದದ್ದು. ಅದನ್ನೇ ಪ್ರಜಾಪತಿ ಎಂದು ...ದ್ದದ್ದು. ಅದೇ ಪುರುಷ ಮತ್ತು ಬ್ರಹ್ಮನ್. ...ಕಾಲಗಳನ್ನು, ಎಲ್ಲಾ ದೇಶಗಳನ್ನೂ (ರಾಷ್ಟ್ರವಲ್ಲ ...ಸ್ಪೇಸ್), ದೇವರುಗಳು, ವೇದಗಳು ...ನೈತಿಕ ಶಕ್ತಿಗಳನ್ನೂ ಒಳಗೊಂಡಿದ್ದದ್ದು.

...ದೇವರಾಗಿರಲಿಲ್ಲ. ಅವನು ಪಶುಗಳ ...ಗಿದ್ದ. ವೈರತ್ವದಿಂದ ಕೂಡಿದ್ದ ...ದ್ದ. ಪಶುಪಾಲಕನಾಗಿ ಅವನು ...ನ್ನು ಪಡೆದಿರುವುದಲ್ಲ, ಬದಲಾಗಿ ...ನಾಗಿರುವಂತ ದೇವತೆಯಾಗಿ ...ಟ್ಟಿದ್ದ. ಆದರೆ ಕಾಲಾನುಕ್ರಮದಲ್ಲಿ ...ಆಗಿದ್ದ ರುದ್ರನು ಶಿವನಾಗಿ ...ಗೊಂಡದ್ದು, ವಿಘ್ನ ಉಂಟುಮಾಡುವ ...ವಿಘ್ನವಿನಾಶಕನಾಗಿ ಬದಲಾದದ್ದಷ್ಟೇ ...ಮಾರ್ಗವಾಗುತ್ತದೆ. ಆದರೆ ಈ ರುದ್ರನ ...ವು ಗಣಪತಿಯ ರೂಪಾಂತರಕ್ಕಿಂತ ...ದು ತಿಳಿಯುತ್ತದೆ.

... ನಂತರ ಸಂಸ್ಕಾರ ಮತ್ತು ಆಚರಣೆಗಳ ...ರೋಹಿತರಿಗೆ ಮಾರ್ಗದರ್ಶನ ...ಹ ಬ್ರಾಹ್ಮಣಗಳಲ್ಲಿ ಐತರೇಯ ಮತ್ತು ... ಮುಖ್ಯವಾಗುತ್ತವೆ. ಇವುಗಳಲ್ಲಿ ...ವ ವಿವರಣಾತ್ಮಕ ನಿರೂಪಣೆಗಳು ...ದಲ್ಲಿ ಧಾರ್ಮಿಕವಾದಂತಹ ...ಗಳನ್ನು ತಂದಿವೆ. ಇವು ತಮ್ಮ ಮುಂದಿನ ...ರಣೆಗಳ ಮತ್ತು ನಂಬುಗೆಗಳ ಭವಿಷ್ಯದ ಮೇಲೆ ...ಂತಹ ಪ್ರಭಾವವನ್ನು ಬೀರಿವೆ.

ವೈದಿಕ ರಾಜಕಾರಣ

...ರ್ವೇದದಲ್ಲಿ ವಿಷ್ಣುವಿನ ಪ್ರಾಮುಖ್ಯತೆ ...ದೆ. ಶತಪಥ ಬ್ರಾಹ್ಮಣದಲ್ಲಿ ಈ ವಿಷ್ಣುವನ್ನು ...ಮೆಯನ್ನಾಗಿ ಮುಂದಿಟ್ಟು ಯಜ್ಞನಾರಾಯಣ ...ಯುತ್ತಾರೆ. ತೈತ್ತಿರಿಯ ಅರಣ್ಯಕದಲ್ಲಿ ವಿಷ್ಣು ...ರಾಯಣನಿಗೆ ಸಂಬಂಧವನ್ನು ಕಲ್ಪಿಸುತ್ತಾರೆ. ...ವನೂ ತನ್ನ ಪ್ರವೇಶವನ್ನು ಪ್ರಕಟಗೊಳಿಸುತ್ತಾನೆ. ...ಶತ ಬ್ರಾಹ್ಮಣದಲ್ಲಿ ರುದ್ರನೆಂಬ ಹೆಸರಿನ ...ಗಿರೀಶನೆಂದು ಕರೆಯುತ್ತಾರೆ. ಹೀಗೆ ವೈದಿಕ ...ಲ್ಲಿ ಮತ್ತು ಆಚರಣೆಗಳನ್ನು, ಯಜ್ಞಗಳನ್ನು ...ದದಲ್ಲಿ ದೇವತೆಗಳು ದೇವರಾಗುವುದು, ... ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುವುದು ...ಲ್ಲಾ ನಡೆಯುತ್ತಾ ಬಂದಿರುವುದರಿಂದ ...ಶೋಧದ ಪ್ರಕ್ರಿಯೆ ಬಹುಕಾಲ ನಡೆದಿದೆ. ...ದ್ಧಾಂತ ಋಷಿಗಳ ಹಿಡಿತದಲ್ಲಿಯೇ ಇತ್ತೆಂದು ... ರಾಜಕೀಯವಾಗಿ ಆರ್ಯರು ತಮ್ಮ ...ಲ್ಲಿ ಹೊಂದಲು ಯತ್ನಿಸುತ್ತಿದ್ದರೂ ಅವರು ...ಗಳ ಅಧೀನದಲ್ಲಿದ್ದರು ಎಂದು ಹಲವು ...ಣು ಕಾಣುತ್ತವೆ. ದೈವತ್ವವನ್ನು ಮತ್ತು ಅದಕ್ಕೆ ...ಲ್ಲಿ ಪದವಿಗಳನ್ನು ಸೃಷ್ಟಿಸುತ್ತಿದ್ದದ್ದು ಕೂಡ ...ಆಗಿದ್ದು, ಸೃಷ್ಟಿಕರ್ತನೆಂದೆನಿಸಿಕೊಳ್ಳುವ ಬ್ರಹ್ಮನ ...ದಾಮುಖೇಳುವ ಭೃಗುವಿನಂತಹ ಮಹರ್ಷಿ ...ಲ್ಲಿ ಸಿದ್ದರಿರಲಿ ಎಂದು ಕಳಿಸುವುದು, ಇನ್ನು ಮುಂದೆ ನಿನ್ನನ್ನು ನಾವು ಆರಾಧಿಸುವುದಿಲ್ಲ ಎಂದು ಧಿಕ್ಕರಿಸುವುದೇ ಆಗಿದೆ. ಇದಕ್ಕೆ ಕಾರಣಗಳೇನೇ ಇದ್ದರೂ ಋಷಿಗಳು ಬಹಳ ಪ್ರಧಾನ ಪಾತ್ರವಹಿಸಿದ್ದರು.

ದೇವತೆಗಳ ಮತ್ತು ಪುರೋಹಿತರ ರಾಜಕೀಯಗಳು, ದೇವರುಗಳನ್ನು ಮಾಡುವ ಪ್ರಕ್ರಿಯೆಯನ್ನು ಅಧೀನದಲ್ಲಿರಿಸಿ ಕೊಂಡವರಂತೆ ಆಡುತ್ತಿದ್ದವರ ರಾಜಕೀಯಗಳು, ರಾಜರ, ಜನಮುಖಂಡರ ಮತ್ತು ಸಾಮಾನ್ಯರ ರಾಜಕೀಯಗಳು ಮತ್ತು ಅವುಗಳಲ್ಲಿರುವ ಪಲ್ಲಟಗಳು ಮತ್ತು ವ್ಯತ್ಯಾಸಗಳನ್ನು ಗಮನಿಸಿದರೆ ಆರ್ಯ ಸಮಾಜದಲ್ಲೇನೂ ಒಗ್ಗಟ್ಟಾಗಲಿ, ಸಾಮರಸ್ಯವಾಗಲಿ ಕಾಣುತ್ತಿರಲಿಲ್ಲ. ಅನೇಕ ಋಷಿಗಳು ಆರ್ಯರ ಪ್ರಾತಿನಿಧ್ಯವನ್ನೇ ತಿರಸ್ಕರಿಸಿ ಪರ್ಯಾಯ ಸಾಮಾಜಿಕ ಸಂಸ್ಥೆಯನ್ನು ನಿರ್ಮಾಣ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದರು. ಇಲ್ಲಿ ವಿಶ್ವಾಮಿತ್ರನು ಇಂದ್ರನ ಸ್ವರ್ಗದಿಂದ ಪತನಗೊಂಡ ತ್ರಿಶಂಕುವಿಗಾಗಿ ನಿರ್ಮಿಸಿದ ಹೊಸ ಸ್ವರ್ಗದ ಕಥೆಯನ್ನು ನೆನಪಿಸಿಕೊಳ್ಳಿ.

ಬಂಡಾಯದ ಋಷಿಗಳು

ವೈದಿಕಾಚರಣೆಗಳ ಹಲವು ಬಗೆಯ ವ್ಯತ್ಯಾಸ ಮತ್ತು ಗೊಂದಲಗಳಿಂದ ಬೇಸತ್ತ ಮುಂದಿನ ಋಷಿಗಳು ಏಕ ಕೇಂದ್ರೀಯಶಕ್ತಿಯ ಪರಿಕಲ್ಪನೆಗಾಗಿ ಹಾತೊರೆದರು. ಉಪನಿಷತ್ತುಗಳಲ್ಲಿ ಈ ಪ್ರಯತ್ನವನ್ನು ಕಾಣುತ್ತೇವೆ. ಸರ್ವಶಕ್ತ ಸ್ವಯಂಭೂ, ಅನಂತ, ಅವ್ಯಕ್ತ, ಸ್ವಾಧಾರವಾದಂತಹ ಸೃಷ್ಟಿ, ಸ್ಥಿತಿ ಮತ್ತು ಲಯಗಳೆಲ್ಲದರ ಏಕಶಕ್ತಿಯ ಅನ್ವೇಷಣೆಯು ಉಪನಿಷತ್ತುಗಳಲ್ಲಿ ಥಾಳಾಗಿ ಗೋಚರಿಸುತ್ತದೆ. ಇಲ್ಲಿ ಅಗ್ನಿ, ಆದಿತ್ಯ, ವಾಯು, ಕಾಲ, ಪ್ರಾಣ, ಅನ್ನ, ಬ್ರಹ್ಮ, ವಿಷ್ಣು ರುದ್ರಗಳೆಲ್ಲವನ್ನೂ ನಿರಾಕರಿಸಿ ಒಬ್ಬನೇ ಅಥವಾ ಒಂದೇ ಬ್ರಹ್ಮನ್ ಎಂಬ ಅತ್ಯುತ್ತಮ ಗುಣಪ್ರತಿಮೆಯನ್ನು ಕಟ್ಟಿಕೊಡಲು ಪ್ರಯತ್ನಿಸುತ್ತಾರೆ. ಆದರೆ, ಇದೂ ಕೂಡ ಮುಂದಿನ ಪುರಾಣಿಕರಲ್ಲಿ ಛಿದ್ರವಾಗಿ ಹೋಗುತ್ತದೆ. ಆರ್ಯರ ಆಂತರಿಕ ಕಲಹವನ್ನು ಬಹಿರಂಗವಾಗಿಯೇ ಪುರಾಣಗಳು ಬಿಂಬಿಸುತ್ತವೆ. ಬ್ರಹ್ಮನನ್ನು ಧಿಕ್ಕರಿಸುವ ಮತ್ತು ಅವನ ತಲೆಯನ್ನು ಕತ್ತರಿಸುವ ಶಿವ, ಶಿವನನ್ನು ಧಿಕ್ಕರಿಸುವ ವಿಷ್ಣು ವಿಷ್ಣುವನ್ನು ವಿರೋಧಿಸುವ ಶಿವ ಹೀಗೆ ನಾನಾಪ್ರಕಾರವಾಗಿ ಪುರಾಣಗಳು ತಲೆ ಎತ್ತಿದವು.

ಬ್ರಾಹ್ಮಣಿಕೆ ಎನ್ನುವುದು ಜನ್ಮತಃವಲ್ಲದೇ ಇದ್ದರೂ ಅದಕ್ಕೆ ಇರುವಂತಹ ಪ್ರಾಮುಖ್ಯತೆ ಮತ್ತು ಪ್ರಭಾವಗಳು ತಮ್ಮ ಕೈವಶದಿಂದ ತಪ್ಪಿ ಹೋಗದಿರಲೆಂದು ಬ್ರಾಹ್ಮಣರು ಹೆಣಗಾಡಿದ್ದರು ಮತ್ತು ಇತರ ವರ್ಣದೊಂದಿಗೆ ಕೂಡಿ ವರ್ಣಸಂಕರವಾಗದಂತೆ ತಡೆಯಲೂ ಯತ್ನಿಸಿದ್ದರು. ಆದರೆ, ಮನೋದೌರ್ಬಲ್ಯದಿಂದಲೋ ಅಥವಾ ಶಾರೀರಿಕ ಸೆಳೆತಕ್ಕೆ ಸೋತ ಎಷ್ಟೋ ಬ್ರಾಹ್ಮಣ ಋಷಿಗಳು ಇತರ ವರ್ಣದ ಸ್ತ್ರೀಯರೊಡನೆ ಕೂಡಿದ್ದು, ಅವರಿಂದ ಹುಟ್ಟಿದ ಮಕ್ಕಳು ತಂದೆಯ ವಿದ್ಯೆಯನ್ನು ಪಡೆದರೂ, ತಾಯಿಯ ಕುಲವನ್ನು ಧಿಕ್ಕರಿಸದೇ ಅದರೊಡನೆಯೂ ಸಂಬಂಧವಿರಿಸಿಕೊಂಡ ಕಾರಣದಿಂದ ಎಷ್ಟೋ ಹೊಸ ಹೊಸ ಬದಲಾವಣೆಗಳು, ಕ್ರಾಂತಿಕಾರಕ ನಡೆಗಳು ವೈದಿಕ ಪರಂಪರೆಯಲ್ಲಿ ಉಂಟಾದವು. ವೈದಿಕವೆಂದು ಹೇಳಲಾಗುವ ಶಾಸ್ತ್ರಗಳಾವುವೂ ಒಮ್ಮತದಲ್ಲೇನೂ ಇಲ್ಲ, ವೈದಿಕತೆಯನ್ನು ಮಾಸದಂಡವಾಗಿ ಹೊಂದಲು ಹೆಣಗಾಡುವ ಇಂದಿನ ಪುರೋಹಿತರು ಮೂರ್ಖರು ಎಂದು ಇದರಲ್ಲೇ ತಿಳಿಯುವುದು.

ಪಶುಪತಿ ರುದ್ರ

ಪಶುಪತಿಯಾಗಿದ್ದ ರುದ್ರನು ಗಣಪತಿಯಾಗಿದ್ದವನು. ಹಿಮಾಲಯದ ತಪ್ಪಲಲ್ಲಿ ಉಮಾ ಅಥವಾ ಪಾರ್ವತಿಯ ಜತೆಯಲ್ಲಿ ತನ್ನ ಗಣಗಳು, ಮರುತರೊಂದಿಗೆ ನೆಲೆಸಿದ್ದವನು. ಅವನ ಪದವಿಗೆ ಬಂದವರೆಲ್ಲಾ ರುದ್ರರೇ ಆದರೂ ಗಣಗಳು ಬೇರೆ ಬೇರೆ ಉಪಗಣಗಳಾಗಿ ರೂಪುಗೊಂಡಾಗ ಅವರನ್ನು ರುದ್ರರೆಂದೇ ಕರೆಯಲಾಗುತ್ತಿರಲಿಲ್ಲ. ಹಾಗೆ ಬೇರೆ ಬೇರೆ ಗಣ-ಪತಿಗಳಾದವರೆಲ್ಲಾ ಬೇರೆ ಬೇರೆ ಹೆಸರುಗಳಿಂದ ಗುರುತಿಸಲ್ಪಟ್ಟರು. ಋಗ್ವೇದದಲ್ಲಿ ರುದ್ರನೆಂದು ಗುರುತಿಸಲ್ಪಟ್ಟಿದ್ದ ಪ್ರತಿಮೆಯು ಶತರುದ್ರೀಯದಲ್ಲಿ ಲಯಾಧಿಪತಿಯಾಗಿ ಮತ್ತಷ್ಟು ರೂಪಾಂತರಗಳನ್ನು ಹೊಂದಿ ಪಾಶುಪತ ಸಿದ್ಧಾಂತಕ್ಕೆ ಮುನ್ನುಡಿ ಹಾಡಿತು. ಅದರಲ್ಲಿ ರುದ್ರ-ಶಿವ ಪರಿಕಲ್ಪನೆಯ ಸಂಪ್ರದಾಯ ಮುಂದುವರಿಯಿತು. ಭಗವದ್ಗೀತೆಯಲ್ಲಿ ವಿಷ್ಣುವೇ ಸರ್ವಶ್ರೇಷ್ಠನೆಂದು ಭಾಪಿಸಲು ಯತ್ನಿಸಿದರೆ, ಶ್ವೇತಾಶ್ವತರೋಪನಿಷತ್‌ನಲ್ಲಿ ಶಿವನಿಗೇ ಶ್ರೇಷ್ಠತೆಯ ಪಟ್ಟ ಕಟ್ಟಲಾಯಿತು. ಶ್ವೇತಾಶ್ವತರೊಪನಿಷತ್ತು ಬೌದ್ಧ ಸಿದ್ಧಾಂತದ ನಂತರದ ಕಾಲದ್ದಾಗಿರುವುದರಿಂದ ಸಾಂಖ್ಯ ಮತ್ತು ಯೋಗ ಸಿದ್ಧಾಂತಗಳ ಸೂಚಕಗಳು ಕಾಣುತ್ತವೆ. ಇದರ ಎರಡನೆಯ ಅಧ್ಯಾಯದಲ್ಲಿ ಸಂಪೂರ್ಣ ಯೋಗ ಸಿದ್ಧಾಂತವನ್ನೇ ವಿವರಿಸುತ್ತಿದ್ದು, ಬೌದ್ಧ ಸಿದ್ಧಾಂತದ ಕಾಲ, ಸ್ವಭಾವ ಮತ್ತು ಕರ್ಮವನ್ನು ಪ್ರತಿಪಾದಿಸುತ್ತದೆ. ಹಾಗೂ ಹರ, ರುದ್ರ, ಶಿವ ಎಂಬ ಹೆಸರುಗಳನ್ನೂ ಬಳಸುತ್ತದೆ. 'ಹರ' ಎಂಬುದು ಜೀವಾತ್ಮಗಳನ್ನೂ ಮತ್ತು ಪ್ರಪಂಚದ ವಸ್ತುಗಳನ್ನೂ ಆಳುವವನನ್ನಾಗಿ ಪರಿಗಣಿಸುತ್ತಾರೆ. ಇದು ಸ್ವಭಾವ ಅಥವಾ ಪ್ರಕೃತಿಯನ್ನು ಎತ್ತಿ ಹಿಡಿಯುತ್ತದೆ. ಅದರಿಂದಲೇ ವಿಶ್ವದ ಸೃಷ್ಟಿ ಎಂದು ಹೇಳುತ್ತದೆ. ನಂತರ ಈ ವಿಶ್ವದಲ್ಲಿ ಅವುಗಳ ಗುಣಾನುಸಾರವಾದ ವಸ್ತುಗಳು ಉಂಟಾಗಿ ಅವುಗಳಿಂದ ಸ್ವಾಭಾವಿಕವಾದ ಮತ್ತು ಪ್ರಾಕೃತಿಕವಾದಂತಹ ಕರ್ಮಗಳು ಉಂಟಾಗುವುದು ಎಂದೂ ಹೇಳುತ್ತದೆ.

ಮಹಾಭಾರತದಲ್ಲಿ ಅರ್ಜುನ ಶಿವನನ್ನು ಒಲಿಸಿಕೊಳ್ಳಲು ವನವಾಸಿಯಾಗಿದ್ದು, ಪ್ರಾರ್ಥಿಸಿ ಪಾಶುಪತಾಸ್ತ್ರವನ್ನು ಪಡೆದಿರುವ ಉಲ್ಲೇಖವಿದೆ. ಅದರಂತೆಯೇ ಬೇಟೆಗಾರನಾದ ಶಬರ ಶಂಕರನು ತನ್ನ ಸಂಗಾತಿ ಪಾರ್ವತಿ ಎಂಬ ಬೇಡ್ತಿಯೊಡನೆ ಕಾಡುಹಂದಿಯ ಬೇಟೆಯಾಡುತ್ತಾನೆ. ಅದಕ್ಕೇ ಬಾಣ ಪ್ರಯೋಗ ಮಾಡುವ ಅರ್ಜುನನು ಹಂದಿಯು ತನ್ನ ಬೇಟೆಯೆಂದು ಜಗಳಕ್ಕಿಳಿಯುತ್ತಾನೆ. ನಂತರ ನಡೆಯುವ ಹೋರಾಟದಲ್ಲಿ ಅರ್ಜುನನು ಸೋತು ತಾನು ಯಾರಿಗಾಗಿ ಬಂದಿದ್ದನೋ ಅದೇ ಪಶುಪತಿಯು ಇವನೆಂದು ತಿಳಿದು ಶರಣಾಗತನಾಗಿ ತನಗೆ ಬೇಕಾದ ಕೋರಿಕೆಯನ್ನು ಮುಂದಿಟ್ಟುಕೊಳ್ಳುತ್ತಾನೆ.


ವೈದಿಕರಲ್ಲಿ ಎಂದಿಗೂ ಒಗ್ಗಟ್ಟಿರಲಿಲ್ಲ. ಆದರೂ, ಅವರಲ್ಲಿ ಎಷ್ಟೇ ಪಂಗಡಗಳು ಮತ್ತು ಉಪಪಂಗಡಗಳಾದರೂ ವೈದಿಕೇತರರನ್ನು ದಮನ ಮಾಡುವ ಸಮಯದಲ್ಲಿ ಸಾಮಾನ್ಯವಾಗಿ ಒಂದಾಗಿಬಿಡುತ್ತಿದ್ದರು. ಅವರಲ್ಲಿ ಸಾಮರಸ್ಯವಿದ್ದದ್ದೇ ಆದ ಪಕ್ಷದಲ್ಲಿ ಶೈವ ವೈಷ್ಣವ ಸಂಘರ್ಷಗಳು ಹುಟ್ಟುತ್ತಿರಲಿಲ್ಲ. ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತಗಳು ಕೊನರುತ್ತಿರಲಿಲ್ಲ. ಇರಲಿ, ಇವೆಲ್ಲಾ ಸೈದ್ಧಾಂತಿಕ ಸಂಘರ್ಷವೆಂದೇ ಪರಿಗಣಿಸಿದರೂ ರಾಜಕೀಯವಾಗಿ ಪ್ರಾಬಲ್ಯವನ್ನು ಹೊಂದಲು, ಸಾಮಾಜಿಕ ಸ್ಥಾನಮಾನದಲ್ಲಿ ಮೇಲುಸ್ತರವನ್ನು ಸಾಧಿಸಲು ಪೈಪೋಟಿ ನಡೆಸಿದ್ದರು. ಹಾಗಾಗಿಯೇ ಅನೇಕ ಆಳುವ ದೊರೆಗಳ ತಲೆಗಳನ್ನು ಸವರಿಸಿದ್ದರು. ಆದರೆ, ಗಮನಿಸಬೇಕಾದ ಅಂಶವೆಂದರೆ ಶೈವ ಪಂಥವು ಆರ್ಯರದ್ದೇನೂ ಅಲ್ಲ, ಅದು ಸಂಪೂರ್ಣವಾಗಿ ಅನಾರ್ಯ ಮೂಲದ್ದೇ. ಆದರೆ ಅದರ ವ್ಯಾಪಕತೆ ಮತ್ತು ಪ್ರಾಬಲ್ಯತೆಯನ್ನು ಗುರುತಿಸಿದ ಮತ್ತು ಅದರ ಪರಿಣಾಮಗಳನ್ನು ಎದುರಿಸಿದ ವೈದಿಕರು ಶೈವಾಗಮಗಳನ್ನೂ ತಮ್ಮೊಳಗೆ ರೂಢಿಸಿಕೊಂಡರು. ಇದು ಬಲಶಾಲಿಗಳಾದವರೊಡನೆ ಬೆರೆತು ತಮ್ಮ ಬಲವನ್ನು ವೃದ್ಧಿಸಿಕೊಳ್ಳುವ ಒಂದು ತಾಂತ್ರಿಕ ಪ್ರಕ್ರಿಯೆ.


ಲಿಂಗಾಯತರಲ್ಲಿ ಕುರುಹಾಗಿ ಬಳಸುವ, ಆರಾಧಿಸುವ ಇಷ್ಟಲಿಂಗಕ್ಕೂ, ಶೈವಾಗಮದಲ್ಲಿ ಉಲ್ಲೇಖಿತವಾಗಿರುವಂತಹ ಶಿವಲಿಂಗಕ್ಕೂ ಅಜಗಜಾಂತರ ವ್ಯತ್ಯಾಸವಿದೆ.

ಇಷ್ಟಲಿಂಗವೆಂಬುದು ರೂಹಿಲ್ಲದ, ಕೇಡಿಲ್ಲದ, ಅಪ್ರತಿಮ, ಅಗೋಚರ ಲಿಂಗವಾಗಿದ್ದು, ವಿರಾಟ್ ಗಾತ್ರದ ಆನೆಯನ್ನು ಕೈಯೊಳಗಿರುವ ಕನ್ನಡಿಯಲ್ಲಿಯೇ ನೋಡಲು ಸಾಧ್ಯವಾಗುವಂತೆ, ಕರಸ್ಥಳಕ್ಕೆ ಬಂದು ಚುಳುಕಾಗಿರುವುದು. ಈ ಲಿಂಗವೆಂಬುದು ಪುಲ್ಲಿಂಗ-ಸ್ತ್ರೀಲಿಂಗಗಳಲ್ಲದ್ದು, ರೂಪವಿಲ್ಲದ್ದು, ಮುಸಲ್ಮಾನರಲ್ಲಿರುವಂತೆ ಏಕದೇವನೂ, ರೂಪರಹಿತನೂ, ಲಿಂಗ (ಜೆಂಡರ್) ರಹಿತನೂ ಆಗಿರುವುದು. ಈ ಲಿಂಗಕ್ಕೂ, ಪಾಣಿಪೀಠದ ಮೇಲಿರುವ ಶಿವಲಿಂಗಕ್ಕೂ ಸಂಬಂಧವಿಲ್ಲ. ಆಕಾರದಲ್ಲಿ ಒಂದೇ ಆಗಿರುವ ಕಾರಣದಿಂದ, ಶಿವನೆಂಬ ವ್ಯಕ್ತಿತ್ವ ರೂಪಕವು ಜನಪದಗಳಲ್ಲಿ ಹಾಸುಹೊಕ್ಕಾಗಿರುವುದರಿಂದ ಲಿಂಗಾಯತರು ಮುಕ್ತವಾಗಿ ಅವರಿಗೇ ಅರಿವಿಲ್ಲದಂತೆ ಶಿವಲಿಂಗವನ್ನೂ ತಮ್ಮ ಕುರುಹಿನ ಭಾಗವೇ ಎಂದು ಭಾವಿಸತೊಡಗಿದರು. ಇವನಾರವ ಇವನಾರವ ಎಂದೆಣಿಸದೇ ಇವ ನಮ್ಮವ ಇವ ನಮ್ಮವ ಎಂದೆಣಿಸುವುದರಲ್ಲಿ ತಪ್ಪೇನೂ ಇಲ್ಲ. ಆದರೆ, ವಿಷಯದ ಅರಿವಿದ್ದು ಸೈದ್ಧಾಂತಿಕ ಪ್ರಮಾದಗಳಿಗೆ ಎಡೆಮಾಡಿಕೊಡದೇ, ಅರಿವೆಂಬ ಗುರುವನ್ನೂ, ನುಡಿಯೆಂಬ ಜ್ಯೋತಿರ್ಲಿಂಗವನ್ನೂ ತಮ್ಮಲ್ಲಿರಿಸಿಕೊಂಡು ವೈರುಧ್ಯದ ದಿಕ್ಕುಗಳಲ್ಲಿ ದಿಕ್ಕೆಟ್ಟು ಹೋಗಬಾರದೆಂಬುದು ನನಗಿರುವ ಒಂದು ಕಾಳಜಿ.

ಆದರೆ ಶೈವ ಪರಂಪರೆಯ ಶಿವಲಿಂಗವೆಂಬುದು ವೈದಿಕಗಳಲ್ಲಿ, ಪುರಾಣಗಳಲ್ಲಿ ಉಲ್ಲೇಖಿತವಾಗಿರುವಂತಹ ಶಿವ, ಶಂಕರ, ಗಿರಿಜಾರಮಣ, ತಾಂಡವವಾಡುವ ಮಹೇಶ್ವರನಂತಹ ರೂಪವೂ, ನಿರ್ದಿಷ್ಟವಾದ ಗುಣಾವಗುಣಗಳೂ ಇರುವಂತಹ ವ್ಯಕ್ತಿತ್ವ. ಈ ವ್ಯಕ್ತಿರೂಪದ ದೇವತೆಯು ಲಿಂಗವಾಗಿ ಮಾರ್ಪಾಡಾದ ಅನೇಕ ಕಥೆಗಳನ್ನು ನಾವು ಪುರಾಣಗಳಲ್ಲಿ ನೋಡುತ್ತೇವೆ.









ಒಟ್ಟಾರೆ ಇಂದು ಶಿವನೆಂದು ನೋಡುವ ರುದ್ರನೂ ಅನೇಕ ಮಜಲುಗಳನ್ನು ದಾಟ ಬಂದಿರುವಂತಹವನೇ. ನಾಟ್ಯಕ್ಕೆ ಅಧಿಪತಿಯಾಗಿದ್ದು, ತಂತ್ರಶಾಸ್ತ್ರದಲ್ಲಿ ಶಕ್ತಿಯೊಡಗೂಡುವ ಶಿವನಾಗುವುದು, ಋಷಿಗಳಿಗೇ ಗುರುವಾಗಿ ದಕ್ಷಿಣಾಮೂರ್ತಿಯಾಗುವುದು, ಜನಪದದಲ್ಲಿ ಶಿವಪ್ಪನಾಗಿ ಗಂಗೆಯೊಂದಿಗೆ ಸರಸವಾಡುವವನು; ಎಲ್ಲವೂ ಅವನ ರಂಗುರಂಗಿನ ಸೊಗಸಾದ, ಕೌತುಕದ ರೂಪಕಗಳು. ■

ಕೊಲೆಪಾತಕಿ ಮಾಯಾಗೆ ಜಾಮೀನು

ನರೋದಾ ಪಾಟಿಯಾ ಹತ್ಯಾಕಾಂಡ 2002ರ ಗುಜರಾತ್ ನರಮೇಧದ ಪ್ರಮುಖ ಘಟನೆಗಳಲ್ಲೊಂದು. ನರೋದಾ ಪಾಟಿಯಾದಲ್ಲಿ 97 ಜನರ ಕಗ್ಗೊಲೆಯ ರೂವಾರಿಯಾದ ಗುಜರಾತಿನ ಮಾಜಿ ಸಚಿವೆ ಮಾಯಾ ಕೊಡ್ನಾನಿಗೆ ನ್ಯಾಯಾಲಯ 28 ವರ್ಷಗಳ ಜೈಲು ಶಿಕ್ಷೆ ವಿಧಿಸಿತ್ತು. ಇದೀಗ ಅನಿರೀಕ್ಷಿತ ಬೆಳವಣಿಗೆಯೊಂದರಲ್ಲಿ ಮೊನ್ನೆ ಜುಲೈ 31ರಂದು ಗುಜರಾತ್ ಹೈಕೋರ್ಟಿನಲ್ಲಿ ಆಕೆ ಜಾಮೀನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾಳೆ. ಅನಾರೋಗ್ಯದ ಕಾರಣ ಹೇಳಿ ಜಾಮೀನು ಕೋರಿದ್ದ ಕೊಡ್ನಾನಿಯ ಅರ್ಜಿಯ ವಿಚಾರಣೆ ನಡೆಯುತ್ತಿದ್ದ ವೇಳೆ ಅದನ್ನು ವಿರೋಧಿಸಬೇಕಾಗಿದ್ದ ಎಸ್‌ಐಟಿ ಅಧಿಕಾರಿಗಳು ನಾಪತ್ತೆಯಾಗಿದ್ದರು! ಆಕೆಯನ್ನು ಜೈಲಿನಿಂದ ಬಿಡುಗಡೆ ಗೊಳಿಸಿದ ಬಳಿಕವಷ್ಟೆ ತರಾತುರಿಯಲ್ಲಿ ಹೈಕೋರ್ಟಿಗೆ ದೂರು ನೀಡಿದಾಗ ಸ್ವಾಭಾವಿಕವಾಗಿಯೇ ನ್ಯಾಯಾಲಯ ಅದನ್ನು ತಿರಸ್ಕರಿಸಿದೆ. ಇದನ್ನು ಗಮನಿಸಿದಾಗ ಎಸ್‌ಐಟಿ ಉದ್ದೇಶಪೂರ್ವಕವಾಗಿ ಮಾಡಿದ ವಿಳಂಬ ಇದಾಗಿದೆಯೆಂಬ ಅನುಮಾನ ಕಾಡದಿರದು. ಇವತ್ತು ಕೇಂದ್ರದಲ್ಲಿ ಯಾರ ಸರ್ಕಾರ ಇದೆಯೆಂದು ನೋಡಿದಾಗ ಅನುಮಾನ ಇನ್ನಷ್ಟು ಬಲಗೊಳ್ಳುತ್ತದೆ.

ಕಾನೂನುಪಾಲನಾ ಸಂಸ್ಥೆಗಳು ಪರೋಕ್ಷವಾಗಿ ಕ್ರಿಮಿನಲ್‌ಗಳಿಗೆ ಬೆಂಬಲ ನೀಡುತ್ತಿರುವುದು ಇದೇ ಮೊದಲ ಬಾರಿಯೇನೂ ಅಲ್ಲ. ಇಶ್ರತ್ ಜಹಾನ್ ಎನ್ಕೌಂಟರ್ ಪ್ರಕರಣದ ಪ್ರಧಾನ ಆರೋಪಿಗಳಲ್ಲೊಬ್ಬನಾದ ರಾಜೆಂದರ್ ಕುಮಾರ್ ಮಗನ ಮದುವೆ ನಿಮಿತ್ತ ಏರ್ಪಡಿಸಲಾಗಿದ್ದ ಪಾರ್ಟಿಯಲ್ಲಿ ಸಿಬಿಐ ನಿರ್ದೇಶಕ ರಣಜಿತ್ ಸಿನ್ಹಾ ಕಂಡುಬಂದಿದ್ದನ್ನು ಕಾಕತಾಳೀಯವೆಂದು ಕರೆಯಬಹುದೇ?

ಅಸಂಬದ್ಧ ಅಪ್ರಸ್ತುತ ವಿಚಾರಗಳ ಬಗ್ಗೆ ಕ್ಷಣಮಾತ್ರದಲ್ಲಿ ಚರ್ಚೆಗಳನ್ನೇರ್ಪಡಿಸುವ ಮಾಧ್ಯಮಗಳು ಈ ಕಾನೂನಿನ ಮತ್ತು ಅಪರಾಧ ತನಿಖಾ ವ್ಯವಸ್ಥೆಯ ಅಣಕದ ಬಗ್ಗೆ




ಜಾಣಮೌನ ತಾಳಿರುವುದನ್ನು ಇವತ್ತಿನ ದೊಡ್ಡ ದುರಂತವೆನ್ನದೆ ಇನ್ನೇನೆನ್ನಬೇಕು. ಉದಾಹರಣೆಗೆ ಕಳೆದೊಂದು ವಾರದ ವಿದ್ಯಮಾನಗಳನ್ನಷ್ಟೆ ತೆಗೆದುಕೊಂಡರೆ ಕಾಣುವುದೇನು? ಮಾಜಿ ನ್ಯಾಯಾಧೀಶ ಕಟ್ಜು ಮತ್ತು ನಟವರ ಸಿಂಗ್ ಬಯಲುಗೊಳಿಸಿದ ಗಾಸಿಪ್ ಸುದ್ದಿ ಕುರಿತ ಸಂವಾದ ದಿನಗಟ್ಟಲೆ ನಡೆಯಿತು. ಚಾನಲ್‌ಗಳು ಪೈಪೋಟಿಗೆ ಬಿದ್ದವರಂತೆ ಸಂದರ್ಶನ ನಡೆಸಿದವು. ನ್ಯಾಯಾಂಗದಲ್ಲಿ ನಡೆದ ಒಂದು ಭ್ರಷ್ಟಾಚಾರದ ಘಟನೆಯನ್ನು 10 ವರ್ಷಗಳ ಬಳಿಕ ಬಯಲು ಮಾಡುವುದರಲ್ಲಿ ಯಾವ ಪುರುಷಾರ್ಥವಿದೆಯೋ ಗೊತ್ತಿಲ್ಲ. ವಿವಾದದ ಕೇಂದ್ರಬಿಂದುವಾದ ಸದರಿ ನ್ಯಾಯಾಧೀಶರು ಎಂದೋ ಇಹಲೋಕ ತ್ಯಜಿಸಿದ್ದಾರೆ. ಅವರ ಕಾಲಾವಧಿಯನ್ನು ವಿಸ್ತರಿಸಿದ್ದ ಮೂರು ಮುಖ್ಯ ನ್ಯಾಯಾಧೀಶರು ರಿಟೈರ್ ಆಗಿದ್ದಾರೆ. ಇನ್ನು ತನ್ನ ತಾಯಿ ಸೋನಿಯಾ ಪ್ರಧಾನಿಯಾಗುವುದನ್ನು ರಾಹುಲ್ ಗಾಂಧಿ ವಿರೋಧಿಸಿದ್ದರು ಎಂಬ ಸುದ್ದಿ ಇವತ್ತು ಯಾವ ವಿಧದಲ್ಲಿ ಪ್ರಸ್ತುತ?

ಹೆಚ್ಚಿನ ಮಾಧ್ಯಮಗಳಿಂದು ಆಳುವ ಪಕ್ಷದ ಜೊತೆ ಗಳಸ್ಯಕಂಠಸ್ಯ ಸಂಬಂಧವಿರುವ ಕಾರ್ಪೋರೇಟುಗಳ ನಿಯಂತ್ರಣದಲ್ಲಿವೆ. ಹಾಗಾಗಿ ಅವುಗಳಿಗೆ ಮಾಯಾಬೆನ್ ಕೊಡ್ನಾನಿ, ರಣಜಿತ್ ಸಿನ್ಹಾ ವಿಷಯ, ವಿವೇಕಾನಂದ ಇಂಟರ್‌ನ್ಯಾಷನಲ್ ಫೌಂಡೇಷನ್‌ನ ರಹಸ್ಯ ನಂಟುಗಳು, ಇಶ್ರತ್ ಜಹಾನ್ ಪ್ರಕರಣದ ಆರೋಪಿಗಳಾಗಿರುವ ಪೊಲೀಸ್ ಅಧಿಕಾರಿಗಳಾದ ಸಿಂಘಾಲ್, ಅನಜು ಚೌಧುರಿ ಮೊದಲಾದವರ ಮರುನೇಮಕ, ಛತ್ತೀಸ್‌ಗಢ, ಮಧ್ಯಪ್ರದೇಶ, ಉತ್ತರಪ್ರದೇಶಗಳಲ್ಲಿ ಕ್ರೈಸ್ತರು ಮತ್ತು ಅವರ ಚರ್ಚುಗಳ ಮೇಲೆ ನಡೆಯುತ್ತಿರುವ ದಾಳಿಗಳು, ಕೆಲವೆಡೆ ಉದ್ದೇಶಪೂರ್ವಕವಾಗಿ ಹುಟ್ಟುಹಾಕಲಾಗುತ್ತಿರುವ ಕೋಮುಗಲಭೆಗಳು, ತೊಗಾಡಿಯಾ ಮತ್ತು ಅಶೋಕ ಸಿಂಘಾಲರ ಭಯೋತ್ಪಾದಕ ಹೇಳಿಕೆಗಳು, ಅಕ್ಷರಧಾಮ, ಸೂರತ್ ಸ್ಫೋಟ ಪ್ರಕರಣಗಳಲ್ಲಿ ಬಂಧಿತರಾಗಿ ಹತ್ತಾರು ವರ್ಷ ಜೈಲುಗಳಲ್ಲಿ ಕೊಳೆದ ನಿರಪರಾಧಿ ಮುಸ್ಲಿಮರ ಬಿಡುಗಡೆ, ಯಾವುದೇ ಸ್ಫೋ... ತಕ್ಷಣ ನಿರಪರಾಧಿ ಮುಸ್ಲಿಮರನ್ನು ಬಂಧಿಸುವುದರ ಹುನ್ನಾರ, ವರ್ಷಗಟ್ಟಲೆ ಜೈಲುಗಳಲ್ಲಿ ಕೊಳೆ... ವಿಚಾರಣಾಧೀನ ಕೈದಿಗಳು, ಗುಜರಾತ್ ಸ... ಅವ್ಯವಹಾರಗಳ ಕುರಿತ ಇತ್ತೀಚಿನ ಸಿಎಜಿ ... ಗುಜರಾತಿನಲ್ಲಿ ಪ್ರೈಮರಿ ಶಿಕ್ಷಕರಿಗೆ ಯುನಿಫಾರ್ಮ್ ... ಮಾಡಿರುವುದು ಇತ್ಯಾದಿಗಳು ಚರ್ಚಾರ್ಹ ವಿಷಯ...

ಬಡವರಿಗೆ ನೀಡಲಾಗುವ ಆಹಾರ ಮತ್ತಿತರ ಸ... ಬಗ್ಗೆ ತಗಾದೆ ಎತ್ತುವವರು 2005-06ರಿಂದ 201... ತನಕ ಕಾರ್ಪೋರೇಟುಗಳಿಗೆ ನೀಡಿರುವ 36.5 ಲಕ್ಷ ರೂಪಾಯಿ ಪರೋಕ್ಷ ಸಬ್ಸಿಡಿ ಬಗ್ಗೆ ಉಸಿರೆತ್ತು... ಯಾರಾದರೂ ಕಂಡಿದ್ದಾರಾ? ಆಳುವ ಪ್ರಭು... ಓಲೈಸುವುದೇ ಬಹುತೇಕ ಮಾಧ್ಯಮಗಳ ಧ್ಯೇಯವಾಗಿಬಿಟ್ಟಿದೆ. ನ್ಯಾಯಾಂಗ ಮತ್ತು ಮಾಧ... ನಿಯಂತ್ರಣ ಫ್ಯಾಸಿಸಂನ ಗುಣಲಕ್ಷಣಗಳಲ್ಲೊಂದು...

(www.truthofgujarat.com)



ವೈದಿಕರ ವಿಕೃತ ಲೈಂಗಿಕ ರಸಿಕತನಕ್ಕೆ ಭಟ್ಟನ ಅಭಿಪ್ರಾಯಗಳೇ ಸಾಕ್ಷಿ

ಫೇಸ್-ಬುಕ್ ಅತ್ಯಾಚಾರಿ ವಿ.ಆರ್. ಭಟ್ಟನ ಧರ್ಮ ಸನಾತನ, ಆದರೆ ಬುದ್ಧಿಯಲ್ಲಿ ಆತ ಸೈತಾನ. ಅವನ ಮೊಬೈಲ್ ಇಂಟರ್‌ನೆಟ್ ಪರಿಕರ ನೂತನ, ಆದರೆ ಅವನ ವಿಚಾರವೆಲ್ಲಾ ಪುರಾತನ. ಪುರಾಣದ ದುಶ್ಯಾಸನನಂತಹ ಕೀಚಕರೆಲ್ಲ ಕಾಲ್ಪನಿಕ, ಆದರೆ ಫೇಸ್-ಬುಕ್ಕಲ್ಲಿ ಇವನಂತಹ ಕೀಚಕರಿರುವುದು ವಾಸ್ತವ. ಈ ಅಂತರಜಾಲ ಅತ್ಯಾಚಾರಿ ಭಟ್ಟನ ಪ್ರಕಾರ ಕನಕದಾಸ ಕುರುಬನಲ್ಲವಂತೆ, ವೇದವ್ಯಾಸ ಮೀನುಗಾರನಲ್ಲವಂತೆ, ವಾಲ್ಮೀಕಿ ಬೇಡರ ಜಾತಿಯವನಲ್ಲವಂತೆ, ನಿಜವಾಗಿ ಇವರೆಲ್ಲ ಬ್ರಾಹ್ಮಣರಂತೆ! ಆದರೆ ರಾವಣ ಮಾತ್ರ ಬ್ರಾಹ್ಮಣ ಎಂಬುದು ಶುದ್ಧ ಸುಳ್ಳಂತೆ. ಎಂಭತ್ತು ವರ್ಷದ ಹಣ್ಣುಹಣ್ಣು ಮುದುಕ ಬ್ರಾಹ್ಮಣ ಪರಾಶರ ಮುನಿ ಹದಿನೆಂಟು ವರ್ಷದ ಮೀನುಗಾರ್ತಿ ಸತ್ಯವತಿಯನ್ನು ರೇಪ್ ಮಾಡಿದ್ದು ಒಳ್ಳೆಯ ಉದ್ದೇಶದಿಂದ ಅಂತೆ. ಭಾರ್ಗವ ಪರಶುರಾಮನು ಅಮಾಯಕ ಕ್ಷತ್ರಿಯರನ್ನೆಲ್ಲ ಕೊಂದದ್ದು ಸರಿಯಂತೆ. ಆದರೆ ಅಸುರರು-ದುಸ್ಯುಗಳು ತಮ್ಮ ದ್ರಾವಿಡ ಧರ್ಮದ ವಿರುದ್ಧ ಮಸಲತ್ತು ನಡೆಸುತ್ತಿದ್ದ ಆರ್ಯ ಬ್ರಾಹ್ಮಣರನ್ನು ಕೊಂದದ್ದು ಘೋರ ತಪ್ಪಂತೆ.

ಶಿರಡಿ ಸಾಯಿಬಾಬಾ ಮರಾಠಿ ಚಿತ್-ಪಾವನ್ ಬ್ರಾಹ್ಮಣನಂತೆ! 1857ರ ಕ್ರಾಂತಿಯಲ್ಲಿ ಝಾನ್ಸಿ ಲಕ್ಷ್ಮಿಯ ಜೊತೆಗೂಡಿ ಬ್ರಿಟಿಷರ ವಿರುದ್ಧ ದಂಗೆಯೆದ್ದ ನಾನಾ ಸಾಹೇಬ್ ಪೇಶ್ವೆ ಎಂಬ ಪೇಶ್ವೆ ರಾಜವಂಶಸ್ಥನನ್ನು ಬ್ರಿಟಿಷರು ಗಲ್ಲಿಗೇರಿಸುವಾಗ ಅವನು ತಪ್ಪಿಸಿಕೊಂಡು ಹೋಗಿ ಸಾಯಿ ಎಂಬ ಹಳ್ಳಿಯಲ್ಲಿ ಮುಸ್ಲಿಮರ ವೇಷದಲ್ಲಿ ಅವಿತುಕೊಂಡಿದ್ದು ನಂತರ ಜನರ ಸೇವೆ ಮಾಡಿ ಅವನು ಸಾಯಿಬಾಬಾ ಎಂದು ಕರೆಸಿಕೊಂಡನಂತೆ. ಅಂದರೆ ಭಟ್ಟನ ಪ್ರಕಾರ ಎಲ್ಲ ಪ್ರಸಿದ್ಧ ಸಂತರು ಋಷಿ ಮುನಿಗಳು ಮೂಲತಃ ಬ್ರಾಹ್ಮಣರು ಅಥವಾ ಬ್ರಾಹ್ಮಣರಿಗೆ ಅನೈತಿಕವಾಗಿ ಹುಟ್ಟಿದವರು! ಅಂದರೆ ಎಲ್ಲಾ ಪ್ರಸಿದ್ಧ ಪುರುಷರ ಬಯೋಲಾಜಿಕಲ್ ತಂದೆ ವೈದಿಕರಂತೆ. ಇದುವೇ ವೈದಿಕರ ವಿಕೃತ ಲೈಂಗಿಕ ರಸಿಕತನಕ್ಕೆ ಸಾಕ್ಷಿ!


- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಪರಶುರಾಮ ಸ್ತ್ರೀ ಹಾಗು ಶೂದ್ರ ದಾಸ್ಯತ್ವದ ಪ್ರತೀಕ

ಸತ್ಯ ಯಾವತ್ತಿದ್ದರೂ ಸಾಯದು, ತಡವಾದರೂ ಅದು ಹೊರಬರಲೇಬೇಕು. ನೂರಾರು ವರ್ಷಗಳಿಂದ ಜಾಣತನದಿಂದ ವೈದಿಕರು ಪೋಷಿಸಿಕೊಂಡು ಬರುತ್ತಿದ್ದ ಮಹಾಮಿಥ್ಯೆಯೊಂದನ್ನು ಒಡೆದು ಜನರನ್ನು ಎಚ್ಚರಗೊಳಿಸಲು ಯತ್ನಿಸಿದ ನಿಮ್ಮ ಪತ್ರಿಕೆಯ ಲೇಖನಗಳನ್ನೋದಿ ಸಂತೋಷವಾಯಿತು.

ಹಿಂದೂ ಪುರಾಣಗಳ ಪ್ರಕಾರ ಕುರುಕ್ಷೇತ್ರದ ಬಳಿ 'ಸಮಂತಕ ಪಂಚ' ಎನ್ನುವ ಸರೋವರವಿದೆಯಂತೆ. ಆ ಸರೋವರ ಎರಡು ಬಾರಿ ರಕ್ತದಿಂದ ತುಂಬಿತ್ತಂತೆ. ಒಮ್ಮೆ ಕುರುಕ್ಷೇತ್ರ ಯುದ್ಧ ಕಾಲದಲ್ಲಾದರೆ ಮತ್ತೊಂದು ಅದಕ್ಕೂ ಮೊದಲು ಪರಶುರಾಮ ಮಾಡಿದ 'ಕ್ಷತ್ರಿಯ ನರಮೇಧ' ಕಾಲದಲ್ಲೆಂದು ಪುರಾಣದಲ್ಲೇ ಉಲ್ಲೇಖವಿದೆ. ಯಾವನೋ ಒಬ್ಬ ಕ್ಷತ್ರಿಯನ ಮೇಲಿನ ಸಿಟ್ಟಿಗೆ ಇಡೀ ಕ್ಷತ್ರಿಯ ಕುಲವನ್ನೇ ಕೊಂದವನು ಈತ. ನಿಷ್ಠೆ ಹಾಗು ಸೇವೆಯಲ್ಲಿ ಮನವನ್ನು ಗೆದ್ದ ಕರ್ಣ ವಿಧಿಯಿಲ್ಲದೇ ಸುಳ್ಳು ಹೇಳಿದ ಎಂಬ ಅರಿವಾದರೂ ಕರುಣೆ ತೋರದೇ ಅಗತ್ಯ ಸಮಯದಲ್ಲಿ ಈ ವಿದ್ಯೆ ಮರೆತುಹೋಗಲಿ ಎಂದು ಜಾತಿಯ ನೆಪದಲ್ಲಿ ಕರ್ಣನ ಶ್ರೇಯಸ್ಸನ್ನೇ ಚಿವುಟಿದಂತಹ ಉ-ಗುರು ಇವನು. ನೀರು ತರಲು ಹೋದ ಹೆಂಡತಿ ಕೇವಲ ಕ್ಷಣಕಾಲ ಮನಸ್ಸು ವಿಚಲಿತಗೊಂಡಳೆಂದು ಘೋರ ತಲೆಕಡಿಯುವ ಶಿಕ್ಷೆ ಕೊಟ್ಟ ಹುಚ್ಚು ತಂದೆ ಜಮದಗ್ನಿಯ ಮಾತನ್ನು ಪ್ರಶ್ನಿಸದೇ (ಈತನ ಅಣ್ಣಂದಿರು ನಿರಾಕರಿಸಿದ್ದರು) ಪಾಲಿಸಿದ ಕಟ್ಟಾ ಮನುಧರ್ಮ ಪಾಲಕನೀತ. ಇಂತಹ ಪರಶುರಾಮ ನೈತಿಕತೆಗೆ, ಸೌಹಾರ್ದಕ್ಕೆ ಯಾವತ್ತಿಗೂ ಮಾದರಿಯಾಗಲಾರ.

ಹಿಮಾಲಯದ ತಪ್ಪಲಿನ ಗಂಡಕಿ ನದಿಯಲ್ಲಿ ಸಾಲಿಗ್ರಾಮಗಳು ಸಿಗುತ್ತವೆ. ಈ ಸಾಲಿಗ್ರಾಮಗಳು ಸಮುದ್ರ ಜೀವಿಗಳ ಅವಶೇಷಗಳೇ ವಿನಹ ದೇವರ ಅವತಾರವಲ್ಲ, ಭೂಖಂಡ ಚಲನೆಗಳ ಕಾರಣ ಭಾರತ ಭಾಗದ ಭೂಮಿಯಿಂದ ಸಮುದ್ರಭಾಗ ಒತ್ತರಿಸಿ (ಹಿಮಾಲಯ ಸೃಷ್ಟಿಗೆ ಇದೇ ಕಾರಣ) ಮುಚ್ಚಲ್ಪಟ್ಟರೂ ಸಮುದ್ರ ಅವಶೇಷಗಳು ಅಲ್ಲಿ ಸಿಗುತ್ತಲೇ ಇವೆ. ಕನ್ಯಾಕುಮಾರಿಯಿಂದ ಗೋಕರ್ಣದವರೆಗಿನ ಕರಾವಳಿ ಭಾಗ ಈ ಮೊದಲು ಸಮುದ್ರ ಭಾಗವಾಗಿದ್ದದ್ದೇ ಆದರೆ ಇಲ್ಲೂ ಕೂಡ ಸಮುದ್ರ ಜೀವಿಗಳ ಪ್ರಾಚೀನ ಅವಶೇಷಗಳು ಯಾವ ಕಂದಕಗಳಲ್ಲಾದರೂ ಸಿಗಬೇಕಿತ್ತಲ್ಲವೇ? ಯಾಕಿಲ್ಲ?



ವಿಷ್ಣುವಿಗೆ ಬಾಲಾಜಿ ಎನ್ನುವ ಹೆಸರಿಲ್ಲ, ಗುಡ್ಡಗಾಡರ ಜನರ ಶಿವ ಎನ್ನುವ ನಾಯಕನನ್ನು ಹಿಂದಿವಾಲಾಗಳು ಶಿವಾಜಿ ಎಂದು ಕರೆದಂತೆ ತಿರುಪತಿಯಲ್ಲಿ ಆರಾಧಿಸಲ್ಪಡುತ್ತಿರುವ ಮಹಾಬಲಿಯನ್ನು ಬಲೀಜಿ ಎಂದು ಕರೆದಿರಬಹುದು. ಇದೇ ನಂತರ ವೈದಿಕರು ಪರಿವರ್ತಿಸಿಕೊಂಡ ಬಾಲಾಜಿ ಎನ್ನುವ ವಾದವಿದೆ. ಇನ್ನೂ ವಿಶೇಷವೆಂದರೆ, ತುಳುನಾಡಿನಲ್ಲಿ ಇಷ್ಟೆಲ್ಲಾ ದೇಗುಲಗಳಿದ್ದರೂ ಹಿಂದಿನ ಸಂಪ್ರದಾಯದಂತೆ ಇಲ್ಲಿನ ಮೂಲಸ್ಥರು ನಡೆದುಕೊಳ್ಳುವುದು ತಿರುಪತಿಗೇ ಹೆಚ್ಚು. ತಿರುಪತಿ ಹುಂಡಿಗೆ ಹಣ ಕೂಡಿಟ್ಟು ನಂತರ ಯಾತ್ರ ಹೊರಡುವುದು ಇಲ್ಲಿ ಮೊದಲಿದ್ದ ಸಂಪ್ರದಾಯವಾಗಿತ್ತು. ಯಾಕೆಂದರೆ ಹತ್ತಿರದ ಪ್ರಭಾವೀ ಸುಬ್ರಹ್ಮಣ್ಯ, ಕೃಷ್ಣ ಮೂಕಾಂಬಿಕೆಗಿಂತ ಬಲಿಯ ಸೆಳೆತವೇ ಇವರಿಗೆ ಅಧಿಕ ಎನ್ನುವ ಮಾತಿದೆ.

ಕಾಲದ ನಂಬಿಕೆಗಳ ಹಿನ್ನಲೆಯಲ್ಲಿ ವೈದಿಕರಿಗೆ ತುಳುನಾಡಲ್ಲಿ ರತ್ನಗಂಬಳಿಯ ಸ್ವಾಗತ ಹಿಂದೆ ಸಿಕ್ಕಿತ್ತು. (ಬೆಳ್ತಂಗಡಿಯ ನೆರಿಯ ಎನ್ನುವಲ್ಲಿ ಹೆಬ್ಬಾರ ಕುಟುಂಬವೊಂದನ್ನು ಒಂಬತ್ತು ಸಾವಿರ ಎಕರೆಯ ಶ್ರೀಮಂತ ಜಮೀನನ್ನು ಉಡುಗೊರೆಯಾಗಿ ಕೊಟ್ಟು ಕರೆಯಿಸಲಾದ ಐತಿಹಾಸಿಕ ಉದಾಹರಣೆ ಇದೆ.) ಬ್ರಾಹ್ಮಣ ಪರಶುರಾಮನ ತಾಯಿ ರೇಣುಕೆಯ ಹೆಸರಲ್ಲಿ ಸಂಬಂಧವಿಲ್ಲದ ಶೂದ್ರರು ಬೆತ್ತಲೆ ಹೋಗುತ್ತಾರೆ ಹಾಗು ದೇವದಾಸಿಗಳಾಗುತ್ತಾರೆ. ಇಂತಹ ದರಿದ್ರ ಆಚರಣೆಗಳನ್ನು ನ್ಯಾಯಯುತವಾಗಿ ಆಚರಿಸಬೇಕಾದವರು ವೈದಿಕರೇ ವಿನಹ ಶೂದ್ರರಲ್ಲ.

- ಎಸ್.ಎಸ್. ಗೇರುಕಟ್ಟೆ

ಲಿಂಗಾಯತ ಧರ್ಮಕ್ಕೆ ಸಂವಿಧಾನ ಮಾನ್ಯತೆ ಸಿಗಬೇಕು

ಲಿಂಗಾಯತ ಧರ್ಮಕ್ಕೆ ಸಂವಿಧಾನದ ಮಾನ್ಯತೆ ದೊರೆಯದಿದ್ದರೆ ನಮ್ಮ ಸಮಾಜಕ್ಕೆ ದ್ರೋಹ ಬಗೆದಂತಾಗುತ್ತದೆ. ಸ್ವಾಮಿಗಳನ್ನು ರಾಜಕಾರಣಿಗಳನ್ನು, ಉದ್ಯಮಿಗಳನ್ನು, ಸಮಾಜಸೇವಕರನ್ನು ಬಸವ ಭಕ್ತರು ಕ್ಷಮಿಸುವದಿಲ್ಲ, ಬಸವನ ಹೆಸರು ಹೇಳಿ ಮಠಗಳನ್ನು ಸ್ಥಾಪಿಸಿ ಹಣ ಮಾಡಿದ್ದಾರೆ. ಬಸವಣ್ಣ ಒಬ್ಬ ಸರ್ವಕಾಲಿಕ ಮಹಾನ್ ಶ್ರೇಷ್ಠ ಚಿಂತಕ. ಗಾಂಧಿ, ಕಾರ್ಲ್ ಮಾರ್ಕ್ಸ್, ಲೋಹಿಯಾ, ಜೆ.ಪಿ, ಆರ್ಥರ್ ಮೈಲ್ಸ್, ಸಿ. ಪಿಬೌನ್ ಮುಂತಾದ ಶ್ರೇಷ್ಠ ತತ್ವಜ್ಞಾನಿಗಳೂ ಅಪ್ಪ ಬಸವನ ಕಾರ್ಯವನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ. ಹೀಗಿರುವಾಗ ಇಲ್ಲಿಯ ಕೆಲ ಸಂಸ್ಕೃತ ವೈದಿಕ ಪುರೋಹಿತಶಾಹಿಗಳು ಜಾತಿ ಜಂಗಮರು, ಬಸವಣ್ಣನ ಇತಿಹಾಸವನ್ನು ತಿರುಚಲು 900 ವರ್ಷಗಳಿಂದ ಕುತಂತ್ರ ನಡೆಸಿದ್ದಾರೆ. ಇದರಲ್ಲಿ ಸ್ವಾಮಿಗಳು, ಅಕ್ಕನವರು, ಮಾತಾಜಿಗಳು ಮತ್ತು ಇತರರು ತಮ್ಮ ಕೈಗೆ ಸಿಕ್ಕಿದ್ದನ್ನು ದೋಚಿದ್ದಾರೆ. ಒಬ್ಬರು ಬಸವನನ್ನೇ ಮೂರ್ತಿ ಮಾಡಿದರೆ ಇನ್ನೊಬ್ಬರು ಅವನ ಹೆಸರಲ್ಲಿ ಕೊಳ್ಳೆ ಹೊಡೆದಿರ...


ಈಗ ಸಮಯ ಬದಲಾಗಿದೆ. ಬಸವ ಈಗ ... ಶ್ರೇಷ್ಠ ಅಮೂಲ್ಯ ಆಸ್ತಿ. ನಾವೆಲ್ಲರೂ ... ವಾರಸುದಾರರು. ಆದರೆ ನಮಗಿನ್ನೂ ಸ್ವತಂತ್ರ ಧ... ಮಾನ್ಯತೆ ದೊರೆತಿಲ್ಲ, ಗದುಗಿನ, ಇಳಕಲ್‌ನ, ಚಿತ್ರ... ಶ್ರೀಗಳು ಇದರ ಬಗ್ಗೆ ಯೋಚಿಸಬೇಕು. ಜೈನರು ... ಆದರು. ಬಸವ ಸ್ಥಾಪಿಸಿದ ಈ ಧರ್ಮಕ್ಕೆ ಇತಿಹಾ... ಚರಿತ್ರೆ ಇದೆ. ಇದು ಅವೈದಿಕ ಅಹಿಂದೂ ... ನಾವಿನ್ನು ಹಿಂದೂಗಳ ಆಶ್ರಯದಲ್ಲಿ ಬದುಕುವಂ...

ರಾಜ್ಯದ ನಿವೃತ್ತ ಮುಖ್ಯ ನ್ಯಾಯಮೂರ್ತಿ ... ನಾಗರಾಜರು ಈ ದಿಶೆಯಲ್ಲಿ ಪ್ರಾಮಾಣಿಕವಾಗಿ ಪ್ರ... ತ್ತಿದ್ದಾರೆ. ನಾವೆಲ್ಲರೂ ಅವರೊಂದಿಗೆ ಕೈ ಜೋಡಿ... ಇನ್ನಾದರೂ ನಾವೆಲ್ಲ ಒಗ್ಗಟ್ಟಾಗಿ ಹೋರಡೋಣ.

- ಡಾ. ಶಶಿಕಾಂತ್ ಪಟ್ಟಣ, ...

ನಾಗರಿಕ ಸಮಾಜದಲ್ಲಿ ಆತಂಕ... ಹಿಂಸೆ, ಹತ್ಯೆಗಳ ಹೆಚ್ಚಳ

ನಹುಷ ಅವರು ಬರೆದ 'ರತ್ನಾಳ ಸಾವಿನ ... ಸಂಶಯಗಳ ಹುತ್ತ!' ಲೇಖನ ಓದಿದೆ. ಓದುತ್ತ ... ನಮ್ಮ ನಾಗರಿಕ ಸಮಾಜದಲ್ಲಿ ಆತಂಕ, ಹಿಂಸೆ, ... ಪರಂಪರೆಯೇ ಬೆಳೆಯುವಂತಾಗುತ್ತಿದೆಯೇನೋ ... ಮನಸ್ಸಿಗೆ ಘಾಸಿ ಆಯಿತು. ಮರ್ಯಾದೆಯಿಂದ ... ಯನ್ನು ಮಾತ್ರ ತುಂಬಿಸಿಕೊಂಡು ಬದುಕುವ ಕು... ಗಳಿಗೂ ಈ ಸಮಾಜದಲ್ಲಿ ನೆಮ್ಮದಿಯಿಂದ ಬ... ವಾತಾವರಣ ಇಲ್ಲದಂತಾಗುತ್ತಿರುವುದು ಒಂದು ... ಸಂಗತಿ. ಇದಕ್ಕೆ ಇತ್ತೀಚಿಗೆ ದೇಶದಲ್ಲಿ ನಡೆದ ಹ... ಪ್ರಕರಣಗಳು ಸಾಕ್ಷಿಯಂತಿವೆ. ಇಂತಹ ಸಂದಿಗ್ಧ ಪರಿಸ್ಥಿ... ಈ ನಾಗರಿಕ ಸಮಾಜದಲ್ಲಿ ಭರವಸೆಯನ್ನಿಡಲು ಅ... ಯಾವುದಾದರೂ ಇಲಾಖೆ ಇದ್ದರೆ ಅದು ಪೊ... ಇಲಾಖೆ. ಈ ಇಲಾಖೆಯೂ ಸಹ ಕೆಲಸಂದರ್ಭ... ಸಮಾಜದ ಮೇಲೆ 'ಲೈನ್-ಆಫ್-ಕಂಟ್ರೋ... ಇಲ್ಲದಂತಾಗಿರುತ್ತದೆ. ನಿಷ್ಪಕ್ಷಪಾತವಾಗಿ ತನಿಖೆ ... ತಪ್ಪಿತಸ್ಥರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಿ ಸಮಾ... 'ಕಂಟ್ರೋಲ್'ನಲ್ಲಿಡುವುದು ಪೊಲೀಸ್ ಇಲಾ... ಜವಾಬ್ದಾರಿ. ಇಲಾಖೆಗೆ ಬೆಂಬಲವಾಗಿ ಬಹು...



ದೇಗೆಲ್ಲಾ ಹಿಂದಿ ಸಿನಿಮಾಗಳೆಂದರೆ ಒಂದು ರೀತಿಯಲ್ಲಿ ಯ ಲೋಕ; ರವಿಚಂದ್ರನ್ ಸಿನಿಮಾಗಳನ್ನು ಹೊರತು ಬಹುತೇಕ ಕನ್ನಡ ಸಿನಿಮಾಗಳಲ್ಲಿನ ನಾಯಕಿಯ ೞ ಒಂದೇ ಥರ ಹಾಡುವುದು, ಕುಣಿಯುವುದು, ಸುತ್ತುವುದು. ಏಕತಾನತೆಯಿಂದ ಬೋರು ಪುವುದಕ್ಕಿಂತ ಹಿಂದಿ ಚಿತ್ರಗಳ ನಾಯಕಿಯರ ಹುಸಿತನ, ಸ, ಮಾದಕತೆ, ಅರ್ಧಂಬರ್ಧ ಕಾಸ್ಟ್ಯೂಮ್ ಇತ್ಯಾದಿ ಕರ ಎದೆಗಳಲ್ಲಿ ಕಿಡಿ ಹೊತ್ತಿಸುತ್ತಿದ್ದವು. ಒಂದು ಗೆ ಹೇಳುವುದಾದರೆ ಆಗಿನ ಹಿಂದಿ ಸಿನಿಮಾಗಳ ರುಣಿಯರು ಶ್ರೀದೇವಿ, ಮಾಧುರಿ ದೀಕ್ಷಿತ್ ಂತೆ ಇನ್ನೂ ಹಲವರು; ಅವರಲ್ಲಿ ಅನೇಕರು ಬೇರೆ ಕಾರಣಗಳಿಂದ ಪ್ರಿಯವಾಗುತ್ತಿದ್ದರು. ಆ ಸುಂದರಿಯರ ್ಯರ, ಲಾವಣ್ಯ, ತುಟಿ, ಕೆನ್ನೆ, ಎದೆ, ಹೊಕ್ಕಳು, ಟಿ ಮುಂತಾದವು ಯುವಕರನ್ನು ಕಾಡುತ್ತಿದ್ದವು.

ೀದೇವಿ ಮತ್ತು ಮಾಧುರಿ ದೀಕ್ಷಿತ್‌ಳ ದೇಹಸಿರಿ, ಹಕ ಮುಖವನ್ನು ನೋಡುವ ಸಲುವಾಗಿಯೇ ಟ್ಟೋ ಸಲ ಯುವಕರು ಥಿಯೇಟರಿಗೆ ಹೋದದ್ದುಂಟು. ಬ್ಬರು ತಮ್ಮ ಸಿನಿಮಾಗಳಲ್ಲಿ ಮೈ ಕುಲುಕುತ್ತಾ ದರೆಂದರೆ ಅದನ್ನು ಕಂಡ ಯುವಕರ ಕಥೆ ದಂತೆಯೇ.

ಂತಹ ಬೆಡಗಿಯರ ಗುಂಗಿನಲ್ಲಿ ಬಂತು 'ಬಾಜಿಗರ್' ಮಾ. ಆ ಚಿತ್ರದ ಹೀರೋಯಿನ್ ಕಾಜೋಲ್‌ಳನ್ನು ದಿದ ಯುವಕರಿಗೆ ಶಾಕ್ ಆಯಿತು. ಆಕೆ ಜನಪ್ರಿಯ ುರಾಗಿದ್ದ ಶ್ರೀದೇವಿಗಿಂತ, ಮಾಧುರಿ ದೀಕ್ಷಿತ್‌ಗಿಂತ ಾಗಿದ್ದಳು. ಕಾಡುವ ಕಣ್ಣಿನ ಬೆಡಗಿ; ಚಪ್ಪಟೆ ಕೆನ್ನೆ, ್ಣಕ ಮುಖ ಮತ್ತು ಕೃಷ್ಣವರ್ಣ. ಉತ್ತರ ಪ್ರದೇಶ, ಪ್ರದೇಶ, ಬಿಹಾರ ಕಡೆಯ ಹುಡುಗಿಯರಂತೆ ಕಾಣುವ ಬಂಗಾಳಿ ಕುಟುಂಬದ ಮುಂಬೈ ಹುಡುಗಿಗೆ ಕತ್ತಿನ ಮೂಳೆ; ಅಷ್ಟೇನೂ ಚೆನ್ನಾಗಿ ಕಾಣದ ಮೂಗು. ಈ ಸಹಜಸುಂದರಿ ನಟಿಸುವ ಬಗೆ, ಪಾತ್ರಗಳ ಲಕ ಆಂತರ್ಯವನ್ನು ಬಿಚ್ಚಿಡುವ ಶೈಲಿ, ವಿಶಿಷ್ಟ ಮ ಧ್ವನಿ, ಮತ್ತು ಒಟ್ಟಾರೆ ಚುರುಕುತನ ಎಂಥವರನ್ನೂ ುವಂತಿತ್ತು. ಕಾಜೋಲ್ ಎಂದರೆ ಸರಳ ಸುಂದರಿ, ಾದ ಸುಂದರಿ ಎಂಬಂತಾಗಿತ್ತು. ಕೃಷ್ಣಸುಂದರಿಯೊಬ್ಬಳು

ಕಾಜೋಲ್ ಕಾಡುವ ಕಂಗಳ ಕೃಷ್ಣಸುಂದರಿ



ಗೌರವರ್ಣದ ನಟಿಯರ ನಡುವೆ ಅಚ್ಚರಿಯಾಗಿ ಮಿನುಗುವುದು, ಹೆಣ್ಣೊಬ್ಬಳ ಅಂದದ ಬಹುಪಾಲು ಕಣ್ಣಿಗೇ ಮೀಸಲು ಎಂಬಂತೆ ಬೆರಗು ಮೂಡಿಸುವುದು, ತುಂಟತನದ ನಡುವಿನ ತುಂಬು ಗಾಂಭೀರ್ಯ- ಗಹನ ಗಾಂಭೀರ್ಯತೆಯ ಆಳದಲ್ಲಿನ ಹುಡುಗುತನ- ಬೆಚ್ಚಿ ಬೀಳಿಸುವಂತಿದ್ದವು.

ಚಿತ್ರನಟಿಯೆಂದರೆ ಬಂಗಾರ ಬಣ್ಣದ, ತುಂಬು ಮೈಯ, ಅಪ್ಸರೆಯಂಥ ಅಚ್ಚರಿ ಎಂದು ಭಾವಿಸಿದ್ದ ತರುಣರಿಗೆ ಕಾಜೋಲ್ ವಿನೂತನ ಅನುಭವ ಕೊಟ್ಟಳು, ನಶೆಯೊಂದರಲ್ಲಿ ಸಿಲುಕುವಂತೆ ಮಾಡಿದಳು. ಆಗಿನ ಪತ್ರಿಕೆಯೊಂದು ಕಾಜೋಲಳ ಬಗ್ಗೆ ಹೀಗೆ ಬರೆದಿತ್ತು: "ಆಕೆ ಕನ್ನಡಿಯಲ್ಲಿ ತನ್ನ ಮುಖ ನೋಡಿಕೊಳ್ಳುವುದೇ ಅಪರೂಪ. ಆತ್ಮವಿಶ್ವಾಸವಿಲ್ಲದ ಕಲಾವಿದರು ಶಾಟ್ ಮುಗಿದ ಕೂಡಲೆ ಆ ದೃಶ್ಯದಲ್ಲಿ ತಾವೆ ಹೇಗೆ ಮೂಡಿಬಂದಿದ್ದೇವೆ ಎಂದು ಸೆಟ್ ಮಾನಿಟರ್‌ನಲ್ಲಿ ಪರೀಕ್ಷಿಸುತ್ತಾರೆ. ಆದರೆ ಆತ್ಮವಿಶ್ವಾಸ ತುಂಬಿರುವ ಕಾಜೋಲ್ ಹಾಗೆ ಮಾಡುವುದೇ ಇಲ್ಲ. ಆಕೆ ತೀರ ಅನಿವಾರ್ಯವಾದಗ ಮಾತ್ರ ತನ್ನ ಮುಖಕ್ಕೆ ಮೇಕ್ ಅಪ್ ಹಚ್ಚುಕೊಳ್ಳುತ್ತಾಳೆ."

ಇದೇ ಆಗಸ್ಟ್ ಐದಕ್ಕೆ ಕಾಜೋಲ್ ಜನ್ಮದಿನ. ಈಕೆ ಈಗ ನಲವತ್ತರ ತಾರೆ. ಅಮ್ಮ ತನುಜಾ (ಮಹಾರಾಷ್ಟ್ರದವರು) ಚಿತ್ರನಟಿಯಾದರೆ, ಅಪ್ಪ ಶೋಮು ಮುಖರ್ಜಿ (ಬಂಗಾಳಿ) ಚಿತ್ರಗಳ ನಿರ್ದೇಶಕ, ನಿರ್ಮಾಪಕ, ಬರಹಗಾರ. ದೊಡ್ಡಮ್ಮ ನೂತನ್ ಕೂಡ ಖ್ಯಾತ ನಟಿಯಾಗಿದ್ದರು.

ಮುಂಬೈಯಲ್ಲಿ ಹುಟ್ಟಿದ ಕಾಜೋಲ್ ಮುಂಬೈಯಿಂದ ಇನ್ನೂರ ನಲವತ್ತೆರಡು ಕಿ.ಮೀ. ದೂರದಲ್ಲಿರುವ ಪಂಚಗಣಿ ಎಂಬಲ್ಲಿನ ಸೇಂಟ್ ಜೋಸೆಫ್ ಕಾನ್ವೆಂಟ್ ಬೋರ್ಡಿಂಗ್ ಸ್ಕೂಲ್ ಸೇರಿಕೊಂಡ್ಡಿದ್ದಳು. ಅಲ್ಲಿ ಹೆಡ್ ಗರ್ಲ್ ಎಂದು ನೇಮಕಗೊಂಡಳು. ಓದಿನ ಜೊತೆಜೊತೆಗೆ ಶಾಲೆಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸತೊಡಗಿದಳು. ಡಾನ್ಸ್ ಅವಳಿಗೆ ಅಚ್ಚುಮೆಚ್ಚು. ಈಕೆಗೆ ಹದಿನಾರು ವರ್ಷ ತುಂಬುತ್ತಿದ್ದಂತೆಯೇ 'ಬೇಖುದಿ' ಎಂಬ ಹಿಂದಿ ಸಿನಿಮಾದಲ್ಲಿ ನಟಿಸುವ ಅವಕಾಶ ಒದಗಿಬಂತು. ಇದು ಈಕೆ ನಟಿಸಿದ ಚೊಚ್ಚಲ ಸಿನಿಮಾ. ಬೇಸಿಗೆ ರಜಾದಿನಗಳಲ್ಲಿ ಈಕೆ ನಟಿಸಿ ಮತ್ತೆ ಶಾಲೆಗೇ ಬಂದರೂ ಕ್ರಮೇಣ ಶಾಲೆಯೆಡೆಗಿನ ಆಸಕ್ತಿ ಕಳೆದುಕೊಂಡು ಫುಲ್ ಟೈಮ್ ಚಿತ್ರ ನಟನೆಯತ್ತ ಗಮನ ಹರಿಸಿದಳು. ಶಿಕ್ಷಣವನ್ನು ಅರ್ಧಕ್ಕೆ ಬಿಟ್ಟ ಕಾಜೋಲ್ ಹೇಳಿಕೊಳ್ಳುವುದು ಹೀಗೆ: "ನಾನು ಶಾಲಾ ಶಿಕ್ಷಣವನ್ನು ಸಂಪೂರ್ಣಗೊಳಿಸದಿದ್ದರಿಂದ ನನ್ನ ವ್ಯಕ್ತಿತ್ವ ಯಾವ ರೀತಿಯಲ್ಲೂ ಕುಬ್ಜಗೊಂಡಿಲ್ಲ ಎಂದೆನಿಸುತ್ತದೆ."

ಕಾಜೋಲ್ ಬಗ್ಗೆ ತಿಳಿಯುತ್ತಾ ಹೋದಂತೆಲ್ಲಾ ನಮ್ಮನ್ನು ಆಕರ್ಷಿಸುವುದು ಆಕೆಯ ಸಹಜ ಅಭಿನಯ ಮತ್ತು ಪಾತ್ರಗಳ ಮೂಲಕ ಮಾನವೀಯ ಮಿಡಿತಗಳನ್ನು ತೆರೆದಿಡುವ ಅಪಾರ ಕಲಾವಂತಿಕೆ. ತಾನಿನ್ನು ಓದಲು ಸಾಧ್ಯವಿಲ್ಲ ಎಂದು ಅರಿತಿದ್ದ ಕಾಜೋಲ್ ಚಿತ್ರರಂಗದತ್ತ ಸಂಪೂರ್ಣ ಗಮನ ಕೊಟ್ಟಳು. 1993ರಲ್ಲಿ ಬಿಡುಗಡೆಯಾದ ಆಕೆಯ ಎರಡನೇ ಸಿನಿಮಾ 'ಬಾಜಿಗರ್' ಯಾವಾಗ ಹಿಟ್ ಆಯಿತೋ ಅಲ್ಲಿಗೆ ಶಾರುಖ್ ಖಾನ್- ಕಾಜೋಲ್ ಜೋಡಿಯ ಯುಗವೂ ಶುರುವಾಯಿತು. ಆ ಮೂಲಕ ಕಾಜೋಲ್ ಚಿತ್ರರಂಗದಲ್ಲಿ ಗಟ್ಟಿಯಾಗಿ ನಿಲ್ಲಲು ಕಾರಣವಾಯಿತು. 'ಉಧಾರ್ ಕಿ ಜಿಂದಗಿ'ಯಂತಹ ಚಿತ್ರದಲ್ಲಿ ಅಷ್ಟೇನೂ ಗಮನ ಸೆಳೆಯುವ ಪಾತ್ರದಲ್ಲಿ ಮಾಡದಿದ್ದರೂ ತನ್ನ ನಾಲ್ಕನೇ ಸಿನಿಮಾ 'ಯೆ ದಿಲ್ಲಗಿ'ಯಲ್ಲಿನ ಅಮೋಘ ಅಭಿನಯಕ್ಕಾಗಿ ಪ್ರಥಮ ಬಾರಿಗೆ ಫಿಲಂ ಫೇರ್ ಅವಾರ್ಡಿಗೆ ನೇಮಕಗೊಂಡಳು.

ಅಲ್ಲಿಂದಾಚೆಗೆ 'ಕರಣ್ ಅರ್ಜುನ್', 'ಹಲ್ ಚಲ್' ತರಹದ ಚಿತ್ರಗಳಲ್ಲಿ ನಟಿಸುತ್ತಾ ಬಂದ ಕಾಜೋಲ್ ಒಮ್ಮೆಲೇ ಸೂಪರ್ ಸ್ಟಾರ್ ನಟಿಯಾಗಿದ್ದು 1995ರಲ್ಲಿ ಬಿಡುಗಡೆಯಾದ 'ದಿಲ್ವಾಲೇ ದುಲ್ಹನಿಯಾ ಲೇ ಜಾಯೆಂಗೆ' ಚಿತ್ರದ ಮೂಲಕ. ಈ ಚಿತ್ರದ ಮೂಲಕ ಶಾರುಖ್-ಕಾಜೋಲ್ ಜೋಡಿ ಮತ್ತೊಮ್ಮೆ ಚಿತ್ರಪ್ರೇಮಿಗಳ ಎದೆಗಳಲ್ಲಿ ಕಿಚ್ಚು ಹಚ್ಚಿತು. ಕಾಜೋಲ್ ಮೊದಲಬಾರಿಗೆ ಫಿಲಂ ಫೇರ್ ಅವಾರ್ಡ್ ಗೆದ್ದುಕೊಂಡಳು. ಆನಂತರ 'ಗುಪ್ತ್' ಚಿತ್ರದಲ್ಲಿನ ನೆಗೆಟಿವ್ ರೋಲ್‌ಗಾಗಿ ಮತ್ತೊಮ್ಮೆ ಫಿಲಂ ಫೇರ್ ಪ್ರಶಸ್ತಿ ಗೆದ್ದುಕೊಂಡಿದ್ದು ಈಗೆಗಿದ್ದ ಅದ್ಭುತ ಪ್ರತಿಭೆಗೊಂದು ನಿದರ್ಶನ. 'ಗುಪ್ತ್' ಮೂಲಕ ಈಕೆಗೆ ಸಿಕ್ಕಿದು ಆವರೆಗೆ ಸಿಗದಿದ್ದ ವಿಶಿಷ್ಟ ಇಮೇಜು. ಕಾಜೋಲ್ ಒಬ್ಬ ವರ್ಸಟೈಲ್ ನಟಿ ಎಂಬ ಬಿರುದು.

ಕಣ್ಣುಮುಚ್ಚಿ ಕಾಜೋಲ್‌ಳನ್ನು ಧ್ಯಾನಿಸಿದರೆ ಆಕೆಯ ಅನೇಕ ಶ್ರೇಷ್ಠ ಚಿತ್ರಗಳು ಮನಸಿನ ಪರದೆಯ ಮೇಲೆ ಮೂಡಿ ಮರೆಯಾಗುತ್ತವೆ. 'ಹಮ್ ಆಪ್ಕೆ ಹೈ ಕೌನ್' ಚಿತ್ರದ ಮೂಲಕ ಆಕೆ ಅತೀವವಾಗಿ ಮಹಿಳೆಯರಿಗೆ ಇಷ್ಟವಾಗಿದ್ದು ಸಾಂಪ್ರದಾಯಕ ಸದ್ಗೃಹಿಣಿಯೊಬ್ಬಳಾಗಿ, ಆದರ್ಶ ಪತ್ನಿಯಾಗಿ ಭಾರತೀಯತೆಯನ್ನು ಎತ್ತಿ ಹಿಡಿದ ಆಕೆಯ ಅವಿಸ್ಮರಣೀಯ ಪಾತ್ರಕ್ಕಾಗಿ. 'ಪ್ಯಾರ್ ಕಿಯಾ ತೋ ಢರ್ನಾ ಕ್ಯಾ'ದ ಕಾಜೋಲಳ ಚುರುಕುತನ ಮತ್ತು ಸಹಜ ತುಂಟತನ; 'ಫನಾ' ಚಿತ್ರದಲ್ಲಿ ಆಕೆ ಕುರುಡಿ ಪಾತ್ರದಲ್ಲಿ ಅಮೀರ್ ಖಾನ್ ಜೊತೆಗೆ ಬೆರೆಯುವ ರೆಪ್ಪೆ ತೇವಗೊಳಿಸಬಲ್ಲ ಭಾವನಾತ್ಮಕ ಸನ್ನಿವೇಶಗಳು; 'ಕಭಿ ಖುಷಿ ಕಭಿ ಘಮ್' ಚಿತ್ರದಲ್ಲಿ ವಾಚಾಳಿ ಹೆಣ್ಣಾಗಿದ್ದುಕೊಂಡು ತನ್ನೊಳಗೆ ಅಗಾಧವಾದ ಭಾವಲೋಕವೊಂದನ್ನೇ ಅಡಗಿಸಿಕೊಂಡಿರುವ ಪ್ರಬುದ್ಧ ಸ್ತ್ರೀಯಾಗಿ ಪರಿಣಮಿಸುತ್ತ, ದೊಡ್ಡ ಕುಟುಂಬದ ಸೊಸೆಯಾಗಿ ಅಮಿತಾಬ್ ಬಚ್ಚನ್ ತರಹದ ಗಂಭೀರ ಸ್ವಭಾವದ ಮಾವನ ಘನತೆಗೆ ತಕ್ಕಂಥ ಸೊಸೆಯಾಗಿ ಮಾರ್ಪಡುವುದನ್ನು ಮರೆಯಲಾಗುವುದಿಲ್ಲ.

'ಕುಚ್ ಕುಚ್ ಹೋತಾ ಹೈ' ಆಕೆಯ ವೃತ್ತಿ ಜೀವನದಲ್ಲಿ ಮತ್ತೊಂದು ಮೈಲಿಗಲ್ಲು. ಕರಣ್ ಜೋಹರ್ ನಿರ್ದೇಶಿಸಿದ್ದ ಪ್ರತಿಭೆ ಈ ಚಿತ್ರದಲ್ಲಿ ಸಂಗೀತದ ಜೊತೆ ಕಾಜೋಲ್ ನಟನೆ ಸೇರಿ ಇಂದಿಗೂ ಎದೆ ಕಲಕುತ್ತದೆ. 'ಹಮ್ ಆಪ್ಕೆ ಹೈ ಕೌನ್' ಚಿತ್ರದಲ್ಲಿ ಗಂಭೀರ ಸಂಪ್ರದಾಯಸ್ಥ ಭಾರತೀಯ ಹೆಣ್ಣಾಗಿ ನಟಿಸಿದ್ದ ಕಾಜೋಲ್ ಈ ಚಿತ್ರದಲ್ಲಿ ಅಂಜಲಿ ಪಾತ್ರದಲ್ಲಿ ಮುಗ್ಧ, ಹುಡುಗುತನವನ್ನು ಅದ್ಭುತವಾಗಿ ಪ್ರದರ್ಶಿಸಿದ್ದಾಳೆ.

ಎಲ್ಲರೂ ಬಲ್ಲಂತೆ 'ಕುಚ್ ಕುಚ್ ಹೋತಾ ಹೈ' ಚಿತ್ರ ಕಾಜೋಲಳ ಪ್ರತಿಭೆಯನ್ನು ಬಿಚ್ಚಿಡುತ್ತದೆ; ಆಕೆಯ ಹುಡುಗಾಟಿಕೆ, ತುಂಡುಗೂದಲು, ಬಾಲಿಶತನ, ಸರಳತೆ ಮತ್ತು ಮುದ್ದು ಮುದ್ದು ಅಭಿವ್ಯಕ್ತಿ ಆಕೆಯ ವ್ಯಕ್ತಿತ್ವದ ಒಂದು ಮುಖವನ್ನು ನಮ್ಮೆದುರು ತೆರೆದಿಡುತ್ತದೆ. ಈ ಚಿತ್ರದಲ್ಲಿ ನಟಿಸಿದಾಗ ಕಾಜೋಲ್‌ಗೆ 24 ವರ್ಷ. ಹದಿನಾರು ವರ್ಷದ ಸ್ಕೂಲು ಹುಡುಗಿಯಂತೆ ಕಾಣಿಸಿಕೊಂಡಿದ್ದು ಬಾಲಿವುಡ್ಡಿನ ಅಚ್ಚರಿಗಳಲ್ಲೊಂದು.

ಕಾಜೋಲ್ ಬಗ್ಗೆ ಧ್ಯಾನಿಸುತ್ತಾ ನಾವೆಲ್ಲಾ ಯಾಕೆ ಈ ಸಹಜ ಚೆಲುವೆಯನ್ನು ಅಷ್ಟು ಪ್ರೀತಿಸುತ್ತಿದ್ದೆವು ಎಂದು ಯೋಚಿಸಿದರೆ- ಆಕೆಯ ಸ್ಪೆಶಲ್ ಸ್ಕ್ರೀನ್ ಪಾರ್ಟ್‌ನರ್ ಶಾರುಖ್ ಖಾನ್ ಎದುರಿಗೆ ಬಂದು ನಿಲ್ಲುತ್ತಾನೆ. ಅದೆಷ್ಟೋ ಸೂಪರ್ ಹಿಟ್ ಚಿತ್ರಗಳನ್ನು ಕೊಟ್ಟ ಶಾರುಖ್-ಕಾಜೋಲ್ ಜೋಡಿ ಮದುವೆಯಾಗಿ, ಒಟ್ಟಿಗೆ ಬಾಳಿದ್ದರೆ ಚೆನ್ನಾಗಿರುತ್ತಿತ್ತು ಎಂದೆಲ್ಲ ಜನ ಆಶಿಸಿದ್ದೂ ಉಂಟು. ಆದರೆ ಕಾಜೋಲ್ ಮದುವೆಯಾಗಿದ್ದು ಅಜಯ್ ದೇವನ್ ಎಂಬ ಮತ್ತೋರ್ವ ನಟನನ್ನು. ಅದೇ ನೆಪದಲ್ಲಿ ಶಾರುಖ್ ಕಂಡರೆ ಅಜಯ್ ದೇವಗನ್‌ಗೆ ಆಗುವುದಿಲ್ಲ ಅಥವಾ ಅಜಯ್ ದೇವಗನ್ ಅಂದರೆ ಶಾರುಖ್‌ಗೆ ಇನ್ನಿಲ್ಲದ ದ್ವೇಷ ಎಂಬ ಗುಸುಗುಸುಗಳೂ ಅಲ್ಲಲ್ಲಿ ಕೇಳಿಬಂದಿದ್ದೂ ಉಂಟು. ಶಾರುಖ್ ಕುರಿತು ಅಜಯ್ ದೇವಗನ್ ಹೇಳುತ್ತಾನೆ "ನಾನು ಮತ್ತು ಶಾರುಖ್ ಶತ್ರುಗಳೆಂದು ಮೀಡಿಯಾದವರೇ ಪುಕಾರು ಎಬ್ಬಿಸಿರೋದು. ವಾಸ್ತವಾಂಶವೇನೆಂದರೆ ನಾವಿಬ್ಬರು ಸ್ನೇಹಿತರೂ ಅಲ್ಲ, ಶತ್ರುಗಳೂ ಅಲ್ಲ. ನನ್ನ ಮತ್ತು ಶಾರುಖ್‌ನ ಸಂಬಂಧ ಯಾವತ್ತಿಗೂ ಕಾರ್ಡಿಯಲ್. ಆತನನ್ನು ನಾನು ಗೌರವಿಸುತ್ತೇನೆ. ಆತ ಒಬ್ಬ ಹಾರ್ಡ್ ವರ್ಕರ್. ಆದ್ದರಿಂದಲೇ ಅಷ್ಟು ಎತ್ತರಕ್ಕೆ ಬೆಳೆಯಲು ಸಾಧ್ಯವಾಗಿರೋದು."

ಎಲ್ಲ ನಟಿಯರಂತೆ ಕಾಜೋಲ್ ಕೂಡ ಗಾಸಿಪ್, ಟೀಕೆಗೆ ಗುರಿಯಾದಳು. ಅಜಯ್ ದೇವಗನ್ ಕಾಜೋಲಳಿಗೆ 'ತಕ್ಕ ಗಂಡನಲ್ಲ' ಎಂಬ ಮಾತನ್ನು ಸಹಿಸಿಕೊಂಡಳು. ಅಜಯ್ ಹುಡುಗಿಯರ ಸುತ್ತ ಸುತ್ತುತ್ತಾನೆ ಎಂಬ ಮಾತಿಗೂ ಯಾವುದೇ ಬಗೆಯಲ್ಲಿ ತಲೆ ಕೆಡಿಸಿಕೊಳ್ಳಲಿಲ್ಲ. "ಇಂತಹ ಗಾಳಿಮಾತುಗಳನ್ನು ನಾನು ನಂಬುವುದಿಲ್ಲ. ಚಿತ್ರರಂಗದವರು ರೂಪಿಸುವ ಈ ಬಗೆಯ ಷಡ್ಯಂತ್ರಗಳ ಬಗ್ಗೆ ನನಗೆ ಅರಿವಿದೆ. ನಂಬಿಕೆಯಿರದ ಹೊರತು ಸಾಂಸಾರಿಕ ಬದುಕು ಮುಂದುವರಿಯುವುದಿಲ್ಲ. ಇಂತಹ ವಿಚಾರಗಳನ್ನು ನಾನು ತಲೆಗೆ ಹಾಕಿಕೊಳ್ಳುವುದಿಲ್ಲ" ಎಂದು ತಣ್ಣಗೆ ಪ್ರತಿಕ್ರಿಯಿಸುವ ಕಾಜೋಲ್ ಈಗ ಎರಡು ಮಕ್ಕಳ ತಾಯಿ.

ಮುಗ್ಧತೆಯ ಸಂಕೇತದಂತಿರುವ ಕಾಜೋಲಳ ಒಳಗೆ ಒಬ್ಬ ಮಾನವೀಯ ಮಿಡಿತಗಳನ್ನುಳ್ಳ ಅಪ್ಪಟ ಮನುಷ್ಯಳಿದ್ದಾಳೆ; ಬಾಹ್ಯ ಸೌಂದರ್ಯಕ್ಕಷ್ಟೇ ಮೀಸಲಾಗದ ಕಾಜೋಲ್ ಆಂತರ್ಯದಲ್ಲೂ ಅಂದಗಾತಿ ಎಂಬುದಕ್ಕೆ ಸಾಕ್ಷಿ ಎಲ್ಲಾ ಮಕ್ಕಳಿಗೂ ಶಿಕ್ಷಣ ಸಿಗಬೇಕು ಎಂಬ ಆಕೆಯ ಇಂಗಿತ. ಆ ದಿಶೆಯಲ್ಲಿನ ಹೋರಾಟ. ಒಂದಿಲ್ಲೊಂದು ಸಮಾಜ ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳುವ ಕಾಜೋಲ್ 'ಶಿಕ್ಷಾ' ಎಂಬ ಎನ್.ಜಿ.ಓ. ಮೂಲಕ ಮಕ್ಕಳ ಶಿಕ್ಷಣದ ಹಕ್ಕಿಗಾಗಿ ಹೋರಾಡುತ್ತಿದ್ದಾಳೆ. ಆ ನಿಟ್ಟಿನಲ್ಲಿ 'ಕರ್ಮವೀರ ಪುರಸ್ಕಾರ'ವನ್ನು ಪಡೆಯುತ್ತಾಳೆ. ಸಮಾಜಪರ ನಿಲುವುಳ್ಳ ಈಕೆ ಕ್ಯಾನ್ಸರ್ ರೋಗಿಗಳಿಗೆ ನೆರವಾಗುವ ಸಲುವಾಗಿ ಫ್ಯಾಶನ್ ಷೋಗಳಲ್ಲಿ ಪಾಲ್ಗೊಂಡು ಹಣ ಸಂಗ್ರಹಿಸಿ ಕೊಡುತ್ತಾಳೆ. ಹಾಗೆಯೇ 'ದಿ ಲೂಂಬ ಟ್ರಸ್ಟ್'ಗೆ ಅಂಬಾಸಡರಾಗಿ ಕಾರ್ಯನಿರ್ವಹಿಸುವ ಮುಖೇನ ಅದೆಷ್ಟೋ ವಿಧವೆಯ ಮತ್ತು ಅವರ ಮಕ್ಕಳ ಕಲ್ಯಾಣಕ್ಕಾಗಿ ದುಡಿದಿದ್ದಾಳೆ. "ನಮ್ಮ ಸಮಾಜದಲ್ಲಿ ಇಂದಿಗೂ ವಿಧವೆಯರನ್ನು ಪಿಡುಗಳೆಂದು ಭಾವಿಸುವುದು ದುರಾದೃಷ್ಟಕರ. ಇಂತಹ ಭಾವನೆಯನ್ನು ಕುತ್ತುಹಾಕಬೇಕು" ಎನ್ನುತ್ತಾಳೆ ಕಾಜೋಲ್.

ಆಕರ್ಷಕ ವ್ಯಕ್ತಿತ್ವದ, ಮರೆಯಲಾಗದ ಕಲೆಯ ಈ ಮಾಂತ್ರಿಕ ಹೆಣ್ಣಿನ ಸೆಳೆತದ ಹಿಂದಿರುವ ರಹಸ್ಯವೇನು? ಇಡೀ ಭಾರತದ ಸಿನಿಪ್ರಿಯರು, ವಿಮರ್ಶಕರು, ವಿಶೇಷವಾಗಿ ತರುಣರು ಏಕದನಿಯಲ್ಲಿ 'ಕಾಜೋಲ್ ನನ್ನವಳು, ನನ್ನ ಆತ್ಮಕ್ಕೆ ಹತ್ತಿರದವಳು' ಎಂದು ಹೇಳಿಕೊಳ್ಳಲು ಕಾರಣವೇನು? ಒಂದು ಗ್ರಹಿಕೆಯ ಪ್ರಕಾರ ಹದಿಯಾಚೆಗಿನ ಆಕೆಯ ವ್ಯಕ್ತಿತ್ವದಿಂದ, ಅಂದದಾಚೆಯ ಆಕೆಯ ಗುಣಧರ್ಮದಿಂದ ಆಕೆ ಇಷ್ಟವಾಗುತ್ತಾಳೆ. ಆಕೆಯ ಕಣ್ಣುಗಳ ಹಿಂದೆ ಅವಳ ಆಂತರ್ಯವನ್ನು ಬಿಚ್ಚಿಡುವ ಮರ್ಮವಿದೆ. ಆಕೆಯ ನಗುವಿನ ಹಿಂದೆ ಅವಳ ನಿರ್ಮಲ ವ್ಯಕ್ತಿತ್ವವನ್ನು ತೆರೆದಿಡಬಲ್ಲ ಚುಂಬಕ ಶಕ್ತಿಯಿದೆ. ಇವುಗಳಾಚೆಯ ಮುಗ್ಧತೆ ಅವಳಲ್ಲಿದೆ. ಬಂದುಹೋಗುವ ಅನೇಕ ನಟಿಯರ ನಡುವೆ ಕಾಜೋಲ್ ಯಾವತ್ತಿಗೂ ಕಾಜೋಲ್ ಮಾತ್ರ.

■ ಹೃದಯಶಿವ

ಾಗಿ ಕಾನೂನಿದೆ.

- ಪ್ರೊ.ಎಂ.ಬಿ. ಪಾಟೀಲ, ರಾಮದುರ್ಗ

ಉಪಚುನಾವಣೆಗಳೋ, ರಾಜಕಾರಣಿಗಳ ಚೆಲ್ಲಾಟವೋ?

ದಿನಾಂಕ 21.8.14 ರಂದು ಶಿಕಾರಿಪುರ, ಬಳ್ಳಾರಿ ಚಿಕ್ಕೋಡಿ ವಿಧಾನಸಭಾ ಕ್ಷೇತ್ರಗಳಲ್ಲಿ ಮರುಚುನಾವಣೆ ುಲಿದೆ. ಕೇವಲ ಒಂದು ವರ್ಷದ ಹಿಂದೆ ತಾನೆ ಈ ದ ಮತದಾರರು ಕ್ರಮವಾಗಿ ಯಡಿಯೂರಪ್ಪ (ಮಾಜಿ ್ಯಮಂತ್ರಿ), ಶ್ರೀರಾಮುಲು (ಮಾಜಿ ಮಂತ್ರಿ) ಮತ್ತು ್ ಹುಕ್ಕೇರಿ (ಮಾಜಿ ಮಂತ್ರಿ) ಇವರನ್ನು ವಿಧಾನಸಭೆಗೆ ಪ್ರತಿನಿಧಿಗಳಾಗಿ ಆರಿಸಿ ಕಳಿಸಿದ್ದರು. ಆದರೆ ಇವರು ಿದ್ದೇನು? ಜನರು ತಮ್ಮ ಮೇಲೆ ಇಟ್ಟಿದ್ದ ವಿಶ್ವಾಸವನ್ನು ್ಷಿಸಿ ತಮ್ಮ ವಿಧಾನಸಭಾ ಸದಸ್ಯತ್ವವನ್ನು ತ್ಯಜಿಸಿ, ಕಸಭಾ ಚುನಾವಣೆಗೆ ಸ್ಪರ್ಧಿಸಿದರು. ಇದು ಇವರಿಗೆ ಟವೆನಿಸಬಹುದು... ಆಗ ಜನರು ಬುದ್ಧಿವಂತರಾಗಿದ್ದರೆ, ಗೆ ಒಂದೇ ಒಂದು ಮತವನ್ನೂ ಕೊಡದೆ, ಲೋಕಸಭಾ ಾವಣೆಯಲ್ಲಿ ಮಣ್ಣು ಮುಕ್ಕಿಸಬಹುದಿತ್ತು. ಯಾಕೆಂದರೆ ು ಒಮ್ಮೆ ವಿಧಾನಸಭೆಗೆ ಆಯ್ಕೆಯಾದ ನಂತರ ವಿಶ್ವಾಸಕ್ಕೆ ಬೆಲೆ ಕೊಟ್ಟು ಐದು ವರ್ಷದ ಅವಧಿಯನ್ನು ಗಿಸುವವರೆಗೂ ವಿಧಾನಸಭಾ ಸದಸ್ಯರಾಗಿಯೇ ಕ್ಷೇತ್ರದ ಗೆ ಸೇವೆ ಸಲ್ಲಿಸಬೇಕಿತ್ತು. ಅವರು ಲೋಕಸಭೆಗೆ ಗಬೇಕೆಂದಿದ್ದರೆ ವಿಧಾನಸಭೆಗೆ ಏಕೆ ಸ್ಪರ್ಧಿಸಬೇಕಿತ್ತು? ಅವರೆಲ್ಲರ ರಾಜೀನಾಮೆಯಿಂದಾಗಿ ಮತ್ತೊಮ್ಮೆ ಾವಣೆ ನಡೆಸಬೇಕಾಗಿದೆ. ಚುನಾವಣೆ ನಡೆಸುವುದೆಂದರೆ ಷಯಲ್ಲ. ಪ್ರತಿಯೊಂದು ಕ್ಷೇತ್ರಕ್ಕೂ ಕನಿಷ್ಠ ಪಕ್ಷ ಕೋಟಿ ರೂ. ಗಳಾದರೂ ಬೇಕು. ಇದರಲ್ಲಿ ಸರ್ಕಾರ ಡುವ ಖರ್ಚು, ಅಭ್ಯರ್ಥಿಗಳು ಮಾಡುವ ಖರ್ಚು, ಿಕರಿಗಾಗುವ ತೊಂದರೆ, ನಷ್ಟ ಮುಂತಾದುವೆಲ್ಲ ಷ್ಟೆ. ಈ 100 ಕೋಟಿಗಳನ್ನು ಕೊಡುವವರು ರು? ಅದನ್ನು ಯಾರೇ ಕೊಡಲಿ, ಅದು ಬಡ ಶ್ರಮಿಕ ದ ಹೊಟ್ಟೆ ಮೇಲೆ ಒಡೆದು ಅವರ ರಕ್ತ ಹೀರಿ ಿದ್ದಾಗಿರುತ್ತದೆಯೇ ಹೊರತು ಶ್ರೀಮಂತರ ಸ್ವಂತ ಿಂದ ಗಳಿಸಿದ್ದಲ್ಲ. ಇದನ್ನು ಚೆನ್ನಾಗಿ ಬಲ್ಲವರಾದ ಜಿ ಮಂತ್ರಿಗಳು, ಮಾಜಿ ಮುಖ್ಯಮಂತ್ರಿಗಳು ಜನರ ಮೇಲೆ ನೂರು-ನೂರು ಕೋಟಿ ರೂ. ಭಾರವನ್ನು ಿದ್ದೇಕೆ?. ಆ 100-100 ಕೋಟಿ ಚುನಾವಣಾ ್ಚವನ್ನು ಈ ಮಾಜಿ ಮಂತ್ರಿಗಳು, ಮಾಜಿ ್ಯಮಂತ್ರಿಗಳಿಂದಲೇ ಏಕೆ ವಸೂಲಿ ಮಾಡಬಾರದು? ವೆಚ್ಚಕ್ಕೆ ಕಾರಣಕರ್ತರು ಅವರೇ ತಾನೇ?... ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋದರೆ, ಈ ಅನವಶ್ಯಕ ವೆಚ್ಚಕ್ಕೆ ಇವರ ಪಕ್ಷಗಳೂ (ಬಿಜೆಪಿ ಮತ್ತು ಕಾಂಗ್ರೆಸ್) ಸಹ ಕಾರಣಕರ್ತ ಆಗುತ್ತವೆ.

ಆದ್ದರಿಂದ ಈ ಚುನಾವಣೆಯಲ್ಲಾದರೂ ಜನರು ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಂಡು, ಈ ಪಕ್ಷಗಳಿಂದ ಅಭ್ಯರ್ಥಿಗಳಾಗಿ ಯಾರೇ ನಿಲ್ಲಲಿ, ಅವರಿಗೆ ಒಂದೇ ಒಂದು ಮತವನ್ನೂ ಕೊಡಬಾರದು. ಆದ್ದರಿಂದ ಮತದಾರರು ತಮ್ಮ ಅಮೂಲ್ಯ ಮತವನ್ನು ಚಲಾಯಿಸುವ ಮುಂಚೆ ಚೆನ್ನಾಗಿ ಯೋಚಿಸಿ, ತಾವು ಹಾಕಿದ ಮತವನ್ನು ನಿರ್ಲಕ್ಷಿಸುವವರಿಗೆ ಎಂದೂ ಮತ ಹಾಕಬಾರದು.

- ವೀರಬ್ಯಾತಯ್ಯ, ಬೆಂಗಳೂರು

ಜುಲೈ 16ರ ಸಂಚಿಕೆಯಲ್ಲಿ 'ಕಣ್ಣೀರಿಟ್ಟ ಶೃತಿ-ಚಂದ್ರಚೂಡನ ಕಳ್ಳಾಟ!' ಎಂದು ವರದಿಗೆ ಈ ಪ್ರತಿಕ್ರಿಯೆ. ರೋಲ್‌ಕಾಲ್ ಮತ್ತು ಬ್ಲಾಕ್‌ಮೇಲ್‌ನಲ್ಲಿ ತೊಡಗುವ ಈ ಚಂದ್ರಾಚಾರಿ ಅಲಿಯಾಸ್ ಚಂದ್ರಚೂಡ್ ಕಳೆದ ಲೋಕಸಭಾ ಚುನಾವಣೆಯಲ್ಲಿ ಬೆಳಗಾವಿಯ ಕಾಂಗ್ರೆಸ್‌ನ ಲಕ್ಷ್ಮೀ ಹೆಬ್ಬಾಳಕರ, ಬಿಜೆಪಿಯ ಸುರೇಶ ಅಂಗಡಿ, ಬಿಜಾಪುರದ ರಮೇಶ ಜಿಗಜಿಣಗಿ... ಹೀಗೆ ಹಲವಾರು ಜನರಿಂದ ಹಣ ಪೀಕಿದ್ದ. ಈ ಕಳ್ಳ ಪತ್ರಕರ್ತ ಚೂಡ್ ನಟಿ ಶೃತಿಯ ಬದುಕು ಹಾಳು ಮಾಡಿ ಈಗ ಬೇರೆ ಮುಸಲತ್ತು ನಡೆಸಿರುವುದು ನೋಡಿದರೆ ಈ ಸ್ತ್ರೀಲೋಲನಿಗೆ ಮಹಿಳಾ ಸಂಘಟನೆಯವರು ಮೆಟ್ಟಿನ ಏಟು ಕೊಟ್ಟು, ಜೈಲಿಗೆ ಅಟ್ಟ ಬೇಕಿದೆ. ಈ ಐನಾತಿ ಪತ್ರಕರ್ತ ಚಂದ್ರಚೂಡನ ನೀಚ ವೃತ್ತಾಂತವನ್ನು ಪತ್ರಿಕೆ ಸವಿಸ್ತಾರವಾಗಿ ವಿವರಿಸಿದ್ದಕ್ಕೆ ಧನ್ಯವಾದಗಳು.

- ಆರ್.ಕೆ.ಕೊತೆ, ಬಾದಾಮಿ



Registered No.RNP/KA/BGS/2036/2014-16 Posted at : GPO, Bangalore-01, Friday R B P LANKESH, Kannada Weekly Price Rs. 15/- 20-08-2014 RNI No. KARKAN2005/1

ಐ ಡೋಂಟ್ ಕೇರ್



ಪೋರ್ನ್ ಸ್ಟಾರ್ ಸನ್ನಿಲಿಯೋನ್ 'ಡಿಕೆ' ಚಿತ್ರದಲ್ಲಿನ ಐಟಂ ಸಾಂಗ್‌ನಲ್ಲಿ ಕುಣಿಯುತ್ತಿರುವುದು ನಿಮಗೆಲ್ಲ ಗೊತ್ತು. ಗಿಮಿಕ್‌ಗಳನ್ನೇ ನಂಬಿಕೊಂಡು ಬೇಳೆ ಬೇಯಿಸಿಕೊಳ್ಳುವ ಪ್ರೇಮ್ ತಮ್ಮ ಚಿತ್ರಕ್ಕೆ ಸನ್ನಿ ಲಿಯೋನ್‌ನಂಥ ಕಾಸ್ಟ್ಯೂಮ್ ಲೆಸ್ ನಟಿಯೊಬ್ಬಳನ್ನು ಕರೆತಂದು ಪ್ರಚಾರ ಪಡೆಯುವುದರಲ್ಲಿ ಯಾವುದೇ ಬಗೆಯ ಅಚ್ಚರಿ ಪಡುವಂಥಾದ್ದೇನೂ ಇಲ್ಲ. ಇತ್ತೀಚೆಗಷ್ಟೇ ಕುಣಿಗಲ್ ಬಳಿ ಹಾಡಿನ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದ ಸನ್ನಿ "ನನ್ನ ಬಗ್ಗೆ ಯಾರು ಏನೇ ಮಾತಾಡಿದರೂ ತಲೆ ಕೆಡಿಸಿಕೊಳ್ಳೋದಿಲ್ಲ. ಇಷ್ಟಕ್ಕೂ ನಾನೊಬ್ಬ ಬ್ಲೂ ಫಿಲಂ ನಟಿ ಎಂದು ಹೇಳಿಕೊಳ್ಳುವುದರಿಂದ ನನಗೆ ಸಂಕೋಚವೇನೂ ಇಲ್ಲ. ನಾನು ಬ್ಲೂ ಫಿಲಂಗಳಲ್ಲಿ ನಟಿಸಿದ್ದರಿಂದಲೇ, ಆ ಮೂಲಕ ಜಗತ್ತಿನಾದ್ಯಂತ ಹೆಸರು ಮಾಡಿದ್ದರಿಂದಲೇ ಇಲ್ಲಿ, ಈ ಸಿನಿಮಾದಲ್ಲಿ ನಟಿಸಲು ಕಾರಣವಾಗಿದೆ. ನನ್ನನ್ನು ಬ್ಲೂ ಫಿಲಂನಲ್ಲಿ ನಟಿಸುವವಳು ಎಂದು ಯಾರು ಏನೇ ಮಾತಾಡಿಕೊಳ್ಳಲಿ, ನನ್ನನ್ನು ನೋಡಿ ಏನು ಬೇಕಾದರೂ ಭಾವಿಸಲಿ, ನನಗೆ ಅದರ ಬಗ್ಗೆ ಯೋಚನೆ ಇಲ್ಲ" ಎಂದು ಹೇಳಿದಳು. ಇಷ್ಟಕ್ಕೂ ಶಕೀಲಾಳನ್ನು ಕರೆ ತಂದು ಪ್ರಚಾರ ಗಿಟ್ಟಿಸಿಕೊಂಡ ಚಿತ್ರರಂಗಕ್ಕೆ ಸನ್ನಿ ಲಿಯೋನ್‌ಳಂಥ ಸೆಕ್ಸ್ ಫಿಲಂ ನಟಿ 'ಡಿಕೆ'ಯಲ್ಲಿ ನಟಿಸುವುದು ವಿಶೇಷವಲ್ಲ ಬಿಡಿ.

ಕಿರುತೆರೆ ಟು ಹಿರಿತೆರೆ



ಕಿರುತೆರೆಯಲ್ಲಿ ಮುಖ ಪರಿಚಯ ಮಾಡಿಕೊಂಡು ಹಿರಿತೆರೆಗೆ ಬಂದು ಮಿಂಚಿದ ಅನೇಕರು ಉದಾಹರಣೆಗೆ ಸಿಗುತ್ತಾರೆ. ಆ ಲಿಸ್ಟಿಗೆ ಹೊಸದಾಗಿ ಸೇರ್ಪಡೆಯಾಗಿರುವ ನಟಿಯ ಹೆಸರು ಆಕಾಂಕ್ಷ ಅಂತ. ಈ ಆಕಾಂಕ್ಷ ಸುವರ್ಣ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ 'ಪ್ರಿಯದರ್ಶಿನಿ' ಎಂಬ ಧಾರಾವಾಹಿಯಲ್ಲಿ ಪಾತ್ರ ಮಾಡಿದ್ದಾಕೆ. ಅಂದಹಾಗೆ ಆಕಾಂಕ್ಷ ನಟಿಸುತ್ತಿರುವ ಚೊಚ್ಚಲ ಕನ್ನಡ ಚಿತ್ರದ ಹೆಸರು 'ಆರೆಕ್ಸ್ ಸೂರಿ' ಅಂತ. ಈ ಚಿತ್ರದಲ್ಲಿ 'ದುನಿಯಾ' ವಿಜಯ್ ಹೀರೋ.

ಈ ಸಿನಿಮಾಗಾಗಿ ಹೊಸಮುಖಗಳ ತಲಾಷೆಯಲ್ಲಿದ್ದ ನಿರ್ಮಾಪಕ ಸುರೇಶ್ ಆಯೋಜಿಸಿದ್ದ ಆಡಿಶನ್ನಿನಲ್ಲಿ ಆಕಾಂಕ್ಷ ಕಣ್ಣಿಗೇ ಬಿದ್ದಿದ್ದಾರೆ. ತಕ್ಷಣ ಆಕೆಯನ್ನು ನಾಯಕಿಯಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಅಂದಹಾಗೆ ಶ್ರೀಜೈ ಎಂಬ ಕೇವಲ ಎರಡೇ ಎರಡು ಅಕ್ಷರಗಳ ಹೆಸರಿನ ವ್ಯಕ್ತಿ ಈ ಚಿತ್ರದ ನಿರ್ದೇಶಕ. ಅಂತೂ ಹೀರೋಯಿನ್ ಹುಡುಕಾಟಕ್ಕೆ ಚೆನ್ನೈ, ಮುಂಬೈ, ಹೈದರಾಬಾದ್, ಕೊಚ್ಚಿನ್‌ಗಳಿಗೆ ಹಾರುವ ನಿರ್ಮಾಪಕರ ಪೈಕಿ ಕನ್ನಡ ಕಿರುತೆರೆಯತ್ತ ಕಣ್ಣು ಹಾಯಿಸುವ ಸುರೇಶ್ ಥರದವರನ್ನು ಶ್ಲಾಘಿಸಬಹುದು ಅಲ್ಲವೇ?




ಮತ್ತೊಂದು ಕಾಮಿಡಿ ಸಿನಿಮಾ

'ಐಡಿಯಾ ಮಾಡ್ಯಾರ ನಗಲಿಕ್ಕ' ಎಂಬ ಚಿತ್ರವೊಂದನ್ನು ಆರು ವರ್ಷಗಳ ಹಿಂದೆ ನಿರ್ದೇಶಿಸಿ ಮಾಯವಾಗಿದ್ದ ಯಶವಂತ್ ಸರದೇಶಪಾಂಡೆ ಈಗ ಮತ್ತೊಮ್ಮೆ ನಿರ್ದೇಶಕರಾಗಿ ಪ್ರತ್ಯಕ್ಷರಾಗಿದ್ದಾರೆ. ಈ ಸಲ ಅವರು ನಿರ್ದೇಶಿಸುತ್ತಿರುವ ಚಿತ್ರದ ಹೆಸರು 'ಯಾರಿಗೆ ಇಡ್ಲಿ?' ಸಾಕಷ್ಟು ಹೊಸಮುಖಗಳೇ ನಟಿಸುತ್ತಿರುವ ಈ ಚಿತ್ರದಲ್ಲಿ ವಿಶ್ವಜಿತ್ ಮತ್ತು ಮೇಘ ಶೆಣೈ ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿದ್ದಾರೆ. ಗಿರಿಧರ್ ದಿವಾನ್ ಎಂಬ ಆತ್ತ ಸಂಗೀತ ನಿರ್ದೇಶಕನೂ ಅಲ್ಲದ ಇತ್ತ ಛಾಯಾಗ್ರಾಹಕನೂ ಅಲ್ಲದ ವ್ಯಕ್ತಿ ಈ ಚಿತ್ರಕ್ಕೆ ಹಾಡುಗಳನ್ನು ಮಾಡಿ ಹೊಣೆ ಹೊತ್ತಿದ್ದಾರೆ.

ಅನೇಕ ನಾಟಕ, ಸಿನಿಮಾಗಳಲ್ಲಿ ನಟಿಸಿ, ಹಾಸ್ಯನಟನಾಗಿ ಹೆಸರು ಯಶವಂತ್ ಅವರು ಈ ಬಾರಿ ಎಷ್ಟು ಸೀರಿಯಸ್ಸಾಗಿ ಕಾಮಿಡಿ ಮಾಡುತ್ತಾರೆ ಅನ್ನೋದು ಪ್ರಶ್ನೆ.



ಸ್ಟೈಲೋ... ಸ್ಟೈಲೋ



'ಸ್ಟೈಲ್ ಕಿಂಗ್' ಕಾಮಿಡಿ ಟೈಮ್ ಗಣೇಶ್ ಅಭಿನಯದ ಹೊಸ ಚಿತ್ರದ ಹೆಸರು. ಪಿ.ಸಿ.ಶೇಖರ್ ಎಂಬುವವರು ನಿರ್ದೇಶಿಸಬಹುದಾದ ಈ ಚಿತ್ರ ವರಮಹಾಲಕ್ಷ್ಮಿ ಹಬ್ಬಕ್ಕೆ ಶುರುವಾಗುವ ಲಕ್ಷಣವಿದೆ. ಈ ಚಿತ್ರವೂ ಆ ಹಬ್ಬಕ್ಕೆ ಒಂದು ದಿನ ಮುಂಚಿತವಾಗಿ ಮಹಾತ್ಮಗಾಂಧಿ ರಸ್ತೆಯ ಶಂಕರನಾಗ್ ಸಿಂಫೋನಿಯಲ್ಲಿ ಮುಹೂರ್ತ ಆಚರಿಸ್ಕೊಳ್ಳುವ ನಿರೀಕ್ಷೆ ಇದೆ. ಚಿತ್ರ ಮುಹೂರ್ತದ ಜೊತೆಗೆ ಟ್ರೇಲರನ್ನೂ ಬಿಡುಗಡೆ ಮಾಡುವ ಯೋಜನೆ ನಿರ್ದೇಶಕರಿಗಿದೆಯಂತೆ. ಅಂದಹಾಗೆ ಪಿ.ಸಿ.ಶೇಖರ್ ಇದೇ ಗಣೇಶ್ ಅಭಿನಯದ 'ರೋಮಿಯೋ' ಅನ್ನುವ ಚಿತ್ರವನ್ನು ನಿರ್ದೇಶಿಸಿದ್ದರು. ಚಿತ್ರ ಓಡಿರಲಿಲ್ಲ, ಪ್ರಚಾರಪ್ರಿಯ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಆ ಚಿತ್ರದ ಹಾಡೊಂದರಲ್ಲಿ ನಟಿಸುವ ಮೂಲಕ ಬಿಲ್ಡಪ್ ತೆಗೆದುಕೊಂಡಿದ್ದರು ಎಂಬುದು ವಿಶೇಷ.

'ಮೇಡಮ

ಆಡಿಯೋ ಅಂಗಡಿ

ಸುನಿ ನಿರ್ದೇಶನದ 'ಬಹುಪರಾ ಫ್ಲಾಪ್ ಆದ ನಂತರ ಏನು ಮಾಡಬೇ ತೋಚದೆ ಕುಳಿತಿರುವ ಶ್ರೀನಗರ ಕಿಟ್ಟಿ ಬಾರಿ 'ನಮಸ್ತೇ ಮೇಡಮ್' ಎಂಬ ಮೇಲೆ ಭರವಸೆ ಇಟ್ಟುಕೊಂಡಿದ್ದಾರೆ.



ತೆಲುಗಿನ 'ಮಿಸ್ಸಮ್ಮ' ಕನ್ನಡಕ್ಕೆ 'ನಮಸ್ತೇ ಮೇಡಮ್' ಹೆಸರಿನಲ್ಲಿ ಯಥಾವತ್ತು ಇಳಿದಿದೆ. ಈ ಚಿತ್ರ ಮೊನ್ನೆಮೊನ್ನೆಯಷ್ಟೇ ಆಡಿಯೋ ಬಿಡುಗಡೆ ಮಾಡಿಕೊಂಡಿದೆ. ಶ್ರೀಧರ್ ಸಂಭ್ರಮ್ ಸಂಗೀತ ನೀಡಿರುವ ಈ ಚಿತ್ರದಲ್ಲಿ ಕಿಟ್ಟಿ ಜೊತೆಗೆ ರಾಗಿಣಿ, ನಿಖಿತಾ ಮುಂತಾದವರು ನಟಿಸಿದ್ದು ರವಿಗರಣಿ ಹಣ ಹಾಕಿದ್ದರೆ. ಈ ಮುಂಚೆ ದರ್ಶನ್ ಹಾಕಿಕೊಂಡು 'ಬಾಸ್' ಎನ್ನುವ ಚಿತ್ರವನ್ನು ನಿರ್ಮಿಸಿದ್ದ ರಘುರಾಜ್ ಈ ಬಾರಿ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. 'ಸಂಜು ವೆಡ್ಸ್ ಗೀತಾ' ನಂತರ ಒಂದೇ ಒಂದು ಹಿಟ್‌ಗಾಗಿ ಕಾಯುತ್ತಿರುವ ಕಿಟ್ಟಿ ಈ ಬಾರಿ ಗೆಲ್ಲುತ್ತಾರಾ ನೋಡಬೇಕು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com